# ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999

## ಪ್ರಕರಣಗಳ ಕ್ರಮಪಟ್ಟಿ

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಪ್ರಕರಣಗಳು :

**ಭಾಗ I**

**ಪ್ರಾರಂಭಿಕ**

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.
2. ಪರಿಭಾಷೆಗಳು.

**ಭಾಗ II**

**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ**

3. ಆಯೋಗದ ಸ್ಥಾಪನೆ ಮತ್ತು ರಚನೆ.
4. ಸದಸ್ಯರನ್ನು ಆಯ್ಕೆ ಮಾಡಲು ಆಯ್ಕೆ ಸಮಿತಿಯ ರಚನೆ.
5. ಆಯೋಗದ ಸದಸ್ಯನಾಗಿ ನೇಮಕಗೊಳ್ಳಲು ಷರತ್ತುಗಳು.
6. ಸದಸ್ಯರ ಅಧಿಕಾರಾವಧಿ, ಸೇವಾ ಷರತ್ತುಗಳು, ಇತ್ಯಾದಿ.
7. ಸದಸ್ಯರನ್ನು ತೆಗೆದುಹಾಕುವುದು.
8. ಕಾರ್ಯದರ್ಶಿ, ಸಿಬ್ಬಂದಿ, ಸಮಾಲೋಚಕರು ಮುಂತಾದವರ ನೇಮಕ.

**ಭಾಗ III**

**ಆಯೋಗದ ನಡೆವಳಿಗಳು, ಅಧಿಕಾರಗಳು ಮತ್ತು ಪ್ರಕಾರ್ಯಗಳು.**

9. ಆಯೋಗದ ನಡೆವಳಿಗಳು.
10. ಆಯೋಗದ ಅಧಿಕಾರಗಳು.
11. ಆಯೋಗದ ಪ್ರಕಾರ್ಯಗಳು.

**ಭಾಗ IV**

**ರಾಜ್ಯ ಸರ್ಕಾರದ ಅಧಿಕಾರಗಳು**

12. ರಾಜ್ಯ ಸರ್ಕಾರದ ಸಾಮಾನ್ಯ ಅಧಿಕಾರಗಳು.

**ಭಾಗ V**

**ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಪುನರ್‌ರಚನೆ ಮತ್ತು ಮಂಡಲಿಯ ಪ್ರಕಾರ್ಯಗಳ ವರ್ಗಾವಣೆ, ಸ್ವತ್ತುಗಳ, ದಾಯಿತ್ವಗಳ ವರ್ಗಾವಣೆ ಇತ್ಯಾದಿ.**

13. ಕರ್ನಾಟಕ ವಿದ್ಯುಚ್ಛಕ್ತಿ ರವಾನೆ ನಿಗಮ.
14. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಪುನರ್‌ರಚನೆ.

15. ಸಿಬ್ಬಂದಿ ವರ್ಗಕ್ಕೆ ಸಂಬಂಧಪಡುವ ಉಪಬಂಧಗಳು.

16. ವರ್ಗಾವಣೆಗಳ ವ್ಯತ್ಯಾಸ.

ಭಾಗ VI

ಉತ್ಪಾದನಾ ಕಂಪನಿಗಳು ಮತ್ತು ಉತ್ಪಾದನಾ ಕೇಂದ್ರಗಳು

17. ಉತ್ಪಾದನಾ ಕಂಪನಿಗಳು ಮತ್ತು ಕೇಂದ್ರಗಳು.

ಭಾಗ VII

ವಿದ್ಯುಚ್ಛಕ್ತಿ ರವಾನೆ ಮತ್ತು ಸರಬರಾಜಿಗೆ ಲೈಸೆನ್ಸ್ ನೀಡುವಿಕೆ

18. ಲೈಸೆನ್ಸಿನ ಅವಶ್ಯಕತೆ.

19. ಆಯೋಗದಿಂದ ಲೈಸೆನ್ಸ್‌ಗಳ ನೀಡಿಕೆ.

20. ಲೈಸೆನ್ಸಿನ ಅಗತ್ಯತೆಯಿಂದ ವಿನಾಯಿತಿಗಳು.

21. ಲೈಸೆನ್ಸ್‌ದಾರರ ಸಾಮಾನ್ಯ ಕರ್ತವ್ಯಗಳು ಮತ್ತು ಅಧಿಕಾರಗಳು.

22. ಲೈಸೆನ್ಸುಗಳ ರದ್ದಿಯಾತಿ.

23. ಲೈಸೆನ್ಸ್‌ಗಳ ತಿದ್ದುಪಡಿ.

24. ಲೈಸೆನ್ಸನ್ನು ರದ್ದುಪಡಿಸಿದ ಸಂದರ್ಭದಲ್ಲಿ ಉಪಬಂಧಗಳು.

25. ಲೈಸೆನ್ಸುದಾರರ ಮೇಲೆ ಸಾಮಾನ್ಯ ನಿರ್ಬಂಧ.

26. ಲೈಸೆನ್ಸುದಾರನ ವಾರ್ಷಿಕ ಲೆಕ್ಕಪತ್ರಗಳು.

ಭಾಗ VIII

ದರಗಳು ಮತ್ತು ಲೈಸೆನ್ಸುದಾರರಿಗೆ ಹಣಕಾಸು ಒದಗಿಸುವುದು

27. ದರಗಳು.

28. ಲೈಸೆನ್ಸ್‌ದಾರರ ಹಣಕಾಸು ವ್ಯವಸ್ಥೆ.

ಭಾಗ IX

ಆದೇಶಗಳನ್ನು ನೀಡಲು ಮತ್ತು ತೀರ್ಮಾನಗಳನ್ನು ಜಾರಿಗೊಳಿಸಲು
ಆಯೋಗದ ಅಧಿಕಾರ

29. ಪಾಲನೆಯಾಗುವಂತೆ ನೋಡಿಕೊಳ್ಳುವುದಕ್ಕಾಗಿ ಆದೇಶಗಳು.

30. ಪಾಲನೆಯಾಗುವಂತೆ ಖಚಿತಪಡಿಸುವುದಕ್ಕಾಗಿ ಅಂತಿಮ ಆದೇಶಗಳು.

31. ಮಧ್ಯಂತರ ಮತ್ತು ಅಂತಿಮ ಆದೇಶಗಳ ಪರಿಣಾಮ ಮತ್ತು ಜಾರಿ ಮತ್ತು ತುರ್ತು ಉಪಬಂಧಗಳು.

32. ದಂಡ ಶುಲ್ಕ ಮತ್ತು ಶುಲ್ಕಗಳು.

33. ಆಯೋಗದ ಸಾಮಾನ್ಯ ನಿಯಂತ್ರಣ.

**ಭಾಗ X**

**ಸಲಹಾ ಸಮಿತಿ, ಗ್ರಾಹಕ ಸಮಾಲೋಚನೆ, ಮಾಹಿತಿಯನ್ನು ಬಹಿರಂಗಪಡಿಸುವುದು, ನಿರ್ವಹಣೆಯ ಗುಣಮಟ್ಟ, ಇತ್ಯಾದಿ.**

34. ಸಲಹಾ ಸಮಿತಿ.

35. ಮಾಹಿತಿಯನ್ನು ಬಹಿರಂಗಪಡಿಸುವುದು.

36. ವಿದ್ಯುಚ್ಛಕ್ತಿ ಪೂರೈಕೆ ಮತ್ತು ಕಾರ್ಯನಿರ್ವಹಣೆಯ ಗುಣಮಟ್ಟ.

37. ಕಾರ್ಯನಿರ್ವಹಣೆಯ ಮಟ್ಟದ ಬಗ್ಗೆ ಮಾಹಿತಿ.

38. ಮಾಹಿತಿಯನ್ನು ಬಹಿರಂಗಪಡಿಸುವುದಕ್ಕೆ ಇರುವ ನಿರ್ಬಂಧ.

**ಭಾಗ XI**

**ಮಧ್ಯಸ್ಥಿಕೆ ಮತ್ತು ಅಪೀಲುಗಳು**

39. ಆಯೋಗದ ಮಧ್ಯಸ್ಥಿಕೆ.

40. ಇಲೆಕ್ಟ್ರಿಕಲ್ ಇನ್‌ಸ್ಪೆಕ್ಟರ್‌ಗಳ ತೀರ್ಮಾನದ ಮೇಲೆ ಅಪೀಲುಗಳು.

41. ಆಯೋಗದ ಆದೇಶದ ವಿರುದ್ಧ ಅಪೀಲುಗಳು.

**ಭಾಗ XII**

**ಅಪರಾಧಗಳು ಹಾಗೂ ದಂಡನೆಗಳು**

42. 18ನೇ ಪ್ರಕರಣದ ಉಲ್ಲಂಘನೆಗಾಗಿ ದಂಡನೆ.

43. ಇತರ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ.

44. ಕಂಪನಿಗಳಿಂದ ಅಪರಾಧಗಳು.

45. ಅಪರಾಧಗಳ ರಾಜಿಗೆ ಅಧಿಕಾರ.

46. ಅಪರಾಧಗಳ ಸಂಜ್ಞೇಯತೆ.

47. ದಂಡನೆಗಳು ಮತ್ತು ವ್ಯವಹರಣೆಗಳು ಇತರ ಕ್ರಮಗಳಿಗೆ ಪ್ರತಿಕೂಲವಾಗತಕ್ಕದ್ದಲ್ಲ.

**ಭಾಗ XIII**

**ಸಂಕೀರ್ಣ**

48. ಶುಲ್ಕಗಳು, ದಂಡಗಳು ಮತ್ತು ಚಾರ್ಜುಗಳ ವಸೂಲಿ.

49. ದಂಡ ಮತ್ತು ಚಾರ್ಜುಗಳ ವಿನಿಯೋಗ.

50. ದಂಡಗಳು ಮತ್ತು ಜುಲ್ಮಾನೆಗಳ ಭಾಗವನ್ನು ವರ್ಗಾಯಿಸತಕ್ಕದ್ದಲ್ಲ.

51. ಸದ್ಭಾವನೆಯಿಂದ ಕೈಗೊಳ್ಳಲಾದ ಕ್ರಮಕ್ಕೆ ರಕ್ಷಣೆ.

52. ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ ಮತ್ತು ಗ್ರಾಹಕರ ಕ್ರಮಗಳ ರಕ್ಷಣೆ.

53. ತೊಂದರೆಗಳನ್ನು ನಿವಾರಿಸುವ ಅಧಿಕಾರ.

54. ಆಯೋಗದ ಮುಂದಿರುವ ವ್ಯವಹರಣೆಗಳು ನ್ಯಾಯಿಕ ವ್ಯವಹರಣೆಗಳಾಗಿರತಕ್ಕದ್ದು.

55. ಆಯೋಗದ ಸದಸ್ಯರು ಮತ್ತು ಸಿಬ್ಬಂದಿಯವರು ಲೋಕ ನೌಕರರಾಗಿರತಕ್ಕದ್ದು.

56. ವಿನಿಯಮಗಳನ್ನು ರಚಿಸಲು ಅಧಿಕಾರ.

57. ನಿಯಮ ರಚನಾಧಿಕಾರ.

ಭಾಗ XIV

ಅಸ್ತಿತ್ವದಲ್ಲಿರುವ ಕೇಂದ್ರ ಶಾಸನಗಳ ಮೇಲೆ ಪರಿಣಾಮ

58. ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910 ಮತ್ತು ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ ಮೇಲೆ ಈ ಅಧಿನಿಯಮದ ಪರಿಣಾಮ.

59. ಉಳಿಸುವಿಕೆಗಳು.

60. ನಿರಸನ ಮತ್ತು ಉಳಿಸುವಿಕೆ.

ಅನುಸೂಚಿ.

* * * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**1999ರ ಅಧಿನಿಯಮ ಸಂಖ್ಯೆ 25.-** ಈ ಮುಂದಿನವುಗಳಿಗೆ ಉಪಬಂಧ ಕಲ್ಪಿಸಲು ಶಾಸನವೊಂದನ್ನು ರಚಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ ,-

(i) ವಿದ್ಯುಚ್ಛಕ್ತಿಯು ಖರೀದಿ, ವಿತರಣೆ, ಸರಬರಾಜು ಮತ್ತು ಬಳಕೆ ಹಾಗೂ ಸಂದಾಯವಾಗತಕ್ಕ ದರಗಳು ಮತ್ತು ಶುಲ್ಕಗಳ ನಿಯಂತ್ರಣ, ವಿದ್ಯುಚ್ಛಕ್ತಿಯ ಬಳಕೆಯಲ್ಲಿ ದಕ್ಷತೆ, ಮಿತವ್ಯಯ ಮತ್ತು ಸುರಕ್ಷತೆಯ ಅಭಿವೃದ್ಧಿ ಮತ್ತು ಲೈಸನ್ಸ್‌ಗಳ ನೀಡಿಕೆ ಹಾಗೂ ಇತರೆ ಕೆಲವು ವಿಷಯಗಳನ್ನು ಕೈಗೊಳ್ಳುವ ಸಂಬಂಧದಲ್ಲಿ ಅಧಿಕಾರ ಹೊಂದಿರುವಂಥ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಒಂದನ್ನು ಕರ್ನಾಟಕ ರಾಜ್ಯಕ್ಕಾಗಿ ಸ್ಥಾಪಿಸುವುದು;

(ii) ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಸದಸ್ಯರುಗಳ ಆಯ್ಕೆ ಮಾಡುವುದಕ್ಕಾಗಿ ಆಯ್ಕೆ ಸಮಿತಿಯೊಂದನ್ನು ರಚಿಸುವುದು;

(iii) ಕರ್ನಾಟಕ ವಿದ್ಯುಚ್ಛಕ್ತಿ ರವಾನೆ ನಿಗಮವನ್ನು ವಿದ್ಯುಚ್ಛಕ್ತಿಯ ಖರೀದಿ, ರವಾನೆ, ಮಾರಾಟ ಮತ್ತು ಸರಬರಾಜಿನ ವ್ಯವಹಾರದಲ್ಲಿ ತೊಡಗುವ ಪ್ರಧಾನ ಉದ್ದೇಶಗಳೊಡನೆ ನಿಗಮಿತಗೊಳಿಸುವುದು;

(iv) ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯನ್ನು ಪುನರ್ ರಚಿಸುವುದು ಮತ್ತು ಮಂಡಲಿಯ ಪ್ರಕಾರ್ಯಗಳು, ಅದರ ಸ್ವತ್ತುಗಳು ಹಾಗೂ ದಾಯಿತ್ವಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ರವಾನೆ ನಿಗಮಕ್ಕೆ ವರ್ಗಾಯಿಸುವುದು;

(v) ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದಿಂದ ವಿದ್ಯುಚ್ಛಕ್ತಿ ಉತ್ಪಾದನಾ ಕಂಪನಿಗಳ ಮತ್ತು ಉತ್ಪಾದನಾ ಕೇಂದ್ರಗಳ ನಿಯಂತ್ರಣ;

(vi) ಆಯೋಗದ ಮೂಲಕ ವಿದ್ಯುಚ್ಛಕ್ತಿ ರವಾನೆಗೆ ಮತ್ತು ಸರಬರಾಜಿಗೆ ಲೈಸೆನ್ಸ್ ನೀಡುವುದು;

(vii) ಲೈಸೆನ್ಸ್‌ದಾರನ ಆದಾಯವನ್ನು ಲೆಕ್ಕ ಹಾಕುವಲ್ಲಿ ಮತ್ತು ದರಗಳನ್ನು ವಿಧಿಸುವಲ್ಲಿ ಅನುಸರಿಸಲಾಗುವ ಕಾರ್ಯ ವಿಧಾನವನ್ನು ಮತ್ತು ನಿಬಂಧನೆಗಳು ಮತ್ತು ಷರತ್ತುಗಳನ್ನು ರೂಪಿಸುವುದು;

(viii) ಆಯೋಗದ ಆದೇಶದ ಪಾಲನೆಯಾಗುವಂತೆ ನೋಡಿಕೊಳ್ಳುವುದು;

(ix) ರಾಜ್ಯದಲ್ಲಿನ ವಿದ್ಯುಚ್ಛಕ್ತಿ ಸರಬರಾಜು ಕೈಗಾರಿಕೆಗಳಿಗೆ ಸಂಬಂಧಪಟ್ಟ ಕಾರ್ಯ ನೀತಿಯ ಪ್ರಮುಖ ಪ್ರಶ್ನೆಗಳಿಗೆ ಮತ್ತು ತನ್ನ ಮುಂದೆ ಮಂಡಿಸಲಾಗುವ ಇತರ ಯಾವುವೇ ವಿಷಯಗಳಿಗೆ ಸಂಬಂಧಪಟ್ಟಂತೆ ಸಲಹೆ ನೀಡಲು ಸಲಹಾ ಸಮಿತಿಯೊಂದನ್ನು ರಚಿಸುವುದು;

(x) ಈ ಅಧಿನಿಯಮದ ಉಪಬಂಧಗಳ ಅಥವಾ ಅಧಿನಿಯಮದ ಅಡಿಯಲ್ಲಿ ಮಾಡಲಾದ ವಿನಿಮಯಗಳ ಅಥವಾ ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910 ರ ಅಥವಾ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948 ರ ಅಥವಾ ಆ ಅಧಿನಿಯಮಗಳ ಅಡಿಯಲ್ಲಿ ಮಾಡಲಾದ ನಿಯಮಗಳ ಉಪಬಂಧಗಳ ಉಲ್ಲಂಘನೆಗಾಗಿ ದಂಡಗಳನ್ನು ವಿಧಿಸುವುದು; ಮತ್ತು

(xi) ಕೆಲವು ಇತರೆ ಆನುಷಂಗಿಕ ಮತ್ತು ತತ್ಪರಿಣಾಮವಾದ ವಿಷಯಗಳು.

ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನದಲ್ಲಿಲ್ಲದಿದ್ದುದರಿಂದ, ಕರ್ನಾಟರ ವಿದ್ಯುಚ್ಛಕ್ತಿ ಸುಧಾರಣಾ ಅಧ್ಯಾದೇಶ-1999ನ್ನು (1999ರ ಕರ್ನಾಟಕ ಅಧ್ಯಾದೇಶ 3) ಮೇಲ್ಕಂಡ ಉದ್ದೇಶವನ್ನು ಸಾಧಿಸುವುದಕ್ಕಾಗಿ ಪ್ರಖ್ಯಾಪಿಸಲಾಯಿತು.

ಸದರಿ ಅಧ್ಯಾದೇಶದ ಬದಲು ಈ ವಿಧೇಯಕವನ್ನು ಮಂಡಿಸಲಾಗಿದೆ.

(1999ರ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ 9ರಲ್ಲಿದ್ದಂತೆ).

II

**ತಿದ್ದುಪಡಿ ಅಧಿನಿಯಮ ಸಂಖ್ಯೆ 2001 ರ 26.-** ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999 ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ:-

(i) 12ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರದಿಂದ ಸಂದಾಯ ಮಾಡಬೇಕಾಗಿರುವ ಮೊಬಲಗನ್ನು ನಿರ್ಧರಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು;

(ii) ಸಣ್ಣಪುಟ್ಟ ಸಂದಿಗ್ಧತೆಗಳನ್ನು ತೆಗೆದುಹಾಕುವುದು, ಇದರಿಂದಾಗಿ, ಅಧಿನಿಯಮಿತಿಯು, ವಿದ್ಯುಚ್ಛಕ್ತಿ ಸುಧಾರಣೆಯಲ್ಲಿ ಹೇಳಲಾದ ಉದ್ದೇಶಗಳೊಂದಿಗೆ ಸುಸಂಗತವಾಗಿರುವುದು;

ಇತರೆ ಕೆಲವು ಅನುಷಂಗಿಕ ಬದಲಾವಣೆಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

ಕರ್ನಾಟಕ ವಿಧಾನ ಸಭೆ ವಿಧೇಯಕ ಸಂಖ್ಯೆ 2001 ರ 15ರಿಂದ ಪಡೆಯಲಾಗಿದೆ.

## III

**ತಿದ್ದುಪಡಿ ಅಧಿನಿಯಮ ಸಂಖ್ಯೆ 2005 ರ 4.–** ರಾಜ್ಯದಲ್ಲಿರುವ ನಾಲ್ಕು ಎಸ್ಕಾಂಗಳಲ್ಲಿ ಒಂದಾದ ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿಯು ಇಂಥ ಒಂದು ಕಂಪನಿಯಾಗಿದ್ದು, ಇದು ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು, ಹಾಸನ, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ವಿದ್ಯುತ್ ಸರಬರಾಜಿನ ವಿತರಣೆಯ ಹೊಣೆಗಾರಿಕೆಯನ್ನು ಹೊಂದಿದೆ. ವಿಶಾಲ ಪ್ರದೇಶದಲ್ಲಿ ಚದುರಿ ಹೋಗಿರುವ ತನ್ನ ಗ್ರಾಹಕರಿಗೆ ಸಾಕಷ್ಟು ಸೇವೆಯನ್ನು ಒದಗಿಸುವುದು ಅದಕ್ಕೆ ಕಷ್ಟಕರವಾಗಿದೆ. ಆದ ಕಾರಣ, ರಾಜ್ಯ ಸರ್ಕಾರವು ಮೈಸೂರಿನಲ್ಲಿ ಕೇಂದ್ರ ಸ್ಥಾನವನ್ನು ಹೊಂದಿರುವ, ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಹಾಸನ ಜಿಲ್ಲೆಗಳನ್ನು ಒಳಗೊಂಡ ಕಾರ್ಯಕ್ಷೇತ್ರದ ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ಎಂಬ ಹೆಸರಿನ ಹೊಸದಾದ ವಿದ್ಯುಚ್ಛಕ್ತಿ ಸರಬರಾಜು ಕಂಪೆನಿಯನ್ನು ಸ್ಥಾಪಿಸಲು ನಿರ್ಧರಿಸಿತು, ಸರ್ಕಾರಿ ಆದೇಶ ಸಂಖ್ಯೆ: ಇಎನ್ 98 ಪಿಎಸ್‌ಆರ್ 2004 ದಿನಾಂಕ: 19.8.2004 ನೋಡಿ. ಇತರ ಎಸ್ಕಾಂಗಳಂತೆ ಮತ್ತು ಅವುಗಳಷ್ಟೇ ಸರಿಸಮನಾಗಿ ಹೊಸ ಕಂಪೆನಿಯು ಕಾರ್ಯನಿರ್ವಹಿಸುವಂತಾಗಬೇಕಾದರೆ, ಆ ಕಂಪೆನಿಗಳಿಗೆ ಇರುವಂಥ ಸ್ವಾಯತ್ತತೆಯನ್ನೇ ಇದೂ ಹೊಂದಿರಬೇಕು. ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999ಕ್ಕೆ ಸೂಕ್ತ ತಿದ್ದುಪಡಿಮಾಡಿ ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಹಾಸನ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಅದರ ಎಲ್ಲ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳನ್ನು ಮೆಸ್ಕಾಂನಿಂದ ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿಗೆ ವರ್ಗಾಯಿಸುವುದು ಅಗತ್ಯವಾಗಿದೆ.

ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯು ತಕ್ಷಣ ಕಾರ್ಯನಿರ್ವಹಣೆಯನ್ನು ಪ್ರಾರಂಭಿಸಲು ಸಾಧ್ಯವಾಗುವಂತೆ ಮಾಡುವುದಕ್ಕಾಗಿ, ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ 1999ರ 14ನೇ ಪ್ರಕರಣಕ್ಕೆ ತಿದ್ದುಪಡಿಮಾಡಿ 24.12.2004 ರಂದು ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ತಿದ್ದುಪಡಿ) ಅಧ್ಯಾದೇಶ 2004ನ್ನು ಪ್ರಖ್ಯಾಪಿಸಲಾಯಿತು. ಸದರಿ ಅಧ್ಯಾದೇಶದ ಬದಲಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2005ರ ವಿಧಾನಪರಿಷತ್ತಿನ ವಿಧೇಯಕ ಸಂಖ್ಯೆ 1)

* * * *

1999ರ ಕರ್ನಾಟಕ ಅಧಿನಿಯಮ ಸಂಖ್ಯೆ 25

(1999ರ ಆಗಸ್ಟ್ ಇಪ್ಪತ್ತೊಂದನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

# ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999

(1999ರ ಆಗಸ್ಟ್ ಇಪ್ಪತ್ತನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರ ಅನುಮತಿಯನ್ನು ಪಡೆಯಲಾಗಿದೆ)

(2001ರ 26 ಮತ್ತು 2005ರ 4ನೇ ಅಧಿನಿಯಮದಲ್ಲಿ ತಿದ್ದುಪಡಿಯಾದಂತೆ)

ಕರ್ನಾಟಕ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಕೈಗಾರಿಕೆಯನ್ನು ಪುನಾರಚನೆ ಮಾಡಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯನ್ನು ನಿಗಮೀಕರಿಸಲು ಮತ್ತು ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆ, ರವಾನೆ, ವಿತರಣೆ ಮತ್ತು ಸರಬರಾಜನ್ನು ಸುವ್ಯವಸ್ಥಿತಗೊಳಿಸಲು ಉಪಬಂಧ ಕಲ್ಪಿಸಲು ರಾಜ್ಯದಲ್ಲಿನ ವಿದ್ಯುಚ್ಛಕ್ತಿ ಕೈಗಾರಿಕೆಯಲ್ಲಿ ಖಾಸಗಿ ವಲಯ ಉದ್ದಿಮೆದಾರರು ಭಾಗವಹಿಸುವುದಕ್ಕೆ ಅವಕಾಶಗಳನ್ನು ಕಲ್ಪಿಸಲು; ಮತ್ತು ಸಾಮಾನ್ಯವಾಗಿ ದಕ್ಷ, ಮಿತವ್ಯಯಕಾರಿ ಮತ್ತು ಸ್ಪರ್ಧಾತ್ಮಕ ರೀತಿಯಲ್ಲಿ ರಾಜ್ಯದಲ್ಲಿನ ವಿದ್ಯುಚ್ಛಕ್ತಿ ಕೈಗಾರಿಕೆಯ ಅಭಿವೃದ್ಧಿ ಮತ್ತು ವ್ಯವಸ್ಥಾಪನೆ ಮಾಡುವುದಕ್ಕೆ ಅನುಕೂಲಕರವಾದ ಕ್ರಮಗಳನ್ನು ಕೈಗೊಳ್ಳಲು, ವಿಶ್ವಸನೀಯ ಗುಣಮಟ್ಟದ ವಿದ್ಯುಚ್ಛಕ್ತಿಯನ್ನು ಒದಗಿಸಲು ಮತ್ತು ಗ್ರಾಹಕರ ಹಿತಾಸಕ್ತಿಯನ್ನು ರಕ್ಷಿಸಲು ಹಾಗೂ ರಾಜ್ಯದಲ್ಲಿ ವಿದ್ಯುಚ್ಛಕ್ತಿ ವಲಯದ ಕಾರ್ಯಚಟುವಟಿಕೆಗಳನ್ನು ನಿಯಂತ್ರಿಸುವ ಅಧಿಕಾರಗಳನ್ನು ಆಯೋಗದಲ್ಲಿ ನಿಹಿತಗೊಳಿಸುವುದೂ ಸೇರಿದಂತೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಆನುಷಂಗಿಕವಾದ ವಿಷಯಗಳಿಗಾಗಿ ಕರ್ನಾಟಕ ರಾಜ್ಯಕ್ಕಾಗಿ ಒಂದು ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ( 'ಆಯೋಗ' ) ವನ್ನು ರಚಿಸಲು ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಭಾರತ ಗಣರಾಜ್ಯದ ಐವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಇದು ಅಧಿನಿಯಮಿತವಾಗಲಿ :-

## ಭಾಗ I

## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ಇದು 1999ರ ಜೂನ್ ಒಂದನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ರವಾನೆ ಪ್ರದೇಶ" ಎಂದರೆ, ಯಾವ ಪ್ರದೇಶದೊಳಗೆ, ವಿದ್ಯುತ್ತನ್ನು ರವಾನೆ ಮಾಡಲು, ರವಾನೆ ಲೈಸೆನ್ಸ್ ದಾರನಿಗೆ ಲೈಸೆನ್ಸ್ ಮೂಲಕ ತತ್ಕಾಲಕ್ಕೆ ಅಧಿಕಾರ ನೀಡಲಾಗಿದೆಯೋ ಆ ಪ್ರದೇಶ;

(ಬಿ) "ಮಂಡಲಿ" ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ;

(ಸಿ) "ಅಧ್ಯಕ್ಷ" ಎಂದರೆ, ಆಯೋಗದ ಅಧ್ಯಕ್ಷ ;

(ಡಿ) "ಆಯೋಗ" ಎಂದರೆ, 3ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ರಚಿತವಾದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ;

(ಇ) "ಲೈಸೆನ್ಸ್" ಎಂದರೆ, 19ನೇ ಪ್ರಕರಣದ ಅಡಿಯಲ್ಲಿ ಮಂಜೂರು ಮಾಡಲಾದ ಲೈಸೆನ್ಸ್;

(ಎಫ್) "ಲೈಸೆನ್ಸ್ ದಾರ" ಅಥವಾ "ಲೈಸೆನ್ಸ್ ಹೊಂದಿರುವವ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಲೈಸೆನ್ಸ್ ಹೊಂದಿರುವ ಯಾರೇ ವ್ಯಕ್ತಿ;

(ಜಿ) "ಲೈಸೆನ್ಸ್ ನೀಡಿಕೆ ಪ್ರಾಧಿಕಾರ" ಎಂದರೆ, ಈ ಅಧಿನಿಯಮದ ಭಾಗ VIIರ ಅಡಿಯಲ್ಲಿ ಲೈಸೆನ್ಸ್ ನೀಡಲು ಅಧಿಕಾರ ಹೊಂದಿರುವ ಆಯೋಗ;

(ಹೆಚ್) "ಸ್ಥಳೀಯ ಪ್ರಾಧಿಕಾರ" ಎಂದರೆ, ಪೌರ ನಿಗಮಗಳು, ಪುರಸಭೆಗಳು, ಪಟ್ಟಣ ಪಂಚಾಯತಿಗಳು, ಜಿಲ್ಲಾ ಪಂಚಾಯತಿಗಳು ಮತ್ತು ತಾಲ್ಲೂಕು ಪಂಚಾಯತಿಗಳು ಹಾಗೂ ಗ್ರಾಮಪಂಚಾಯತಿಗಳು ;

(ಐ) "ಸದಸ್ಯ" ಎಂದರೆ, ಆಯೋಗದ ಒಬ್ಬ ಸದಸ್ಯ ಮತ್ತು ಅದು ಆಯೋಗದ ಅಧ್ಯಕ್ಷರನ್ನು ಒಳಗೊಳ್ಳತಕ್ಕದ್ದು;

(ಜೆ) "ವಿನಿಯಮಗಳು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಆಯೋಗದಿಂದ ಮಾಡಲಾದ ವಿನಿಯಮಗಳು;

(ಕೆ) "ಆಯ್ಕೆ ಸಮಿತಿ" ಎಂದರೆ, ಈ ಅಧಿನಿಯಮದ 4ನೇ ಪ್ರಕರಣದ ಅಡಿಯಲ್ಲಿ ರಚಿತವಾದ ಆಯ್ಕೆ ಸಮಿತಿ ;

(ಎಲ್) "ಸರಬರಾಜು ಲೈಸೆನ್ಸ್" ಎಂದರೆ, 19ನೇ ಪ್ರಕರಣದ (1) (ಬಿ) ಉಪ ಪ್ರಕರಣದ ಅಡಿಯಲ್ಲಿ ಮಂಜೂರು ಮಾಡಲಾದ ಲೈಸೆನ್ಸ್ ;

(ಎಂ) "ಕೆ.ಪಿ.ಟಿ.ಸಿ" ಎಂದರೆ, ಕಂಪನಿಗಳ ಅಧಿನಿಯಮ, 1956ರ ಅಡಿಯಲ್ಲಿ ಒಂದು ರವಾನೆ ಕಂಪನಿ ಎಂಬುದಾಗಿ ನಿಗಮಿತಗೊಂಡ ಕರ್ನಾಟಕ ವಿದ್ಯುತ್ ರವಾನೆ ನಿಗಮ;

(ಎನ್) "ರವಾನೆ ಲೈಸೆನ್ಸ್" ಎಂದರೆ, 19ನೇ ಪ್ರಕರಣದ (1) (ಎ) ಉಪ ಪ್ರಕರಣದ ಅಡಿಯಲ್ಲಿ ಮಂಜೂರು ಮಾಡಲಾದ ಲೈಸೆನ್ಸ್;

(ಒ) ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಂತೆ "ರವಾನೆ" ಎಂದರೆ, ಒಬ್ಬ ಲೈಸೆನ್ಸ್‌ದಾರನು ಪ್ರವರ್ತನೆ ಅಥವಾ ನಿಯಂತ್ರಣ ವ್ಯವಸ್ಥೆಯ ಮೂಲಕ ವಿದ್ಯುಚ್ಛಕ್ತಿಯ ಸಾಗಣೆ ಅಥವಾ ರವಾನೆಮಾಡುವುದು. ಇದು ಸಂಪೂರ್ಣವಾಗಿ ಅಥವಾ ಮುಖ್ಯವಾಗಿ ಹೆಚ್ಚು ಅಧಿಕ ವೋಲ್ಟೇಜನ್ನು ಅಥವಾ ಹೆಚ್ಚು ಹೈಟೆನ್ಷನ್ ಲೈನ್ ಗಳನ್ನು ಮತ್ತು ವಿದ್ಯುತ್ ಸ್ಥಾವರವನ್ನು ಹೊಂದಿದ್ದು ಅದನ್ನು ಒಂದು ಉತ್ಪಾದನಾ ಕೇಂದ್ರದಿಂದ ಇನ್ನೊಂದು ಉಪ ಉತ್ಪಾದನಾ ಕೇಂದ್ರಕ್ಕೆ, ಒಂದು ಉತ್ಪಾದನಾ ಕೇಂದ್ರದಿಂದ ಇನ್ನೊಂದು ಉತ್ಪಾದನಾ ಕೇಂದ್ರಕ್ಕೆ ಅಥವಾ ಒಂದು ಉಪ ಕೇಂದ್ರದಿಂದ ಇನ್ನೊಂದಕ್ಕೆ ಅಥವಾ ಒಂದು ಸ್ಥಳದಿಂದ ಇನ್ನೊಂದಕ್ಕೆ ವಿದ್ಯುಚ್ಛಕ್ತಿಯನ್ನು ರವಾನಿಸಲು, ಸಾಗಿಸಲು ಮತ್ತು / ಅಥವಾ ವರ್ಗಾಯಿಸಲು ಬಳಸಲಾಗುವುದು;

(ಪಿ) ಈ ಅಧಿನಿಯಮದಲ್ಲಿ ಬಳಸಲಾದ ಆದರೆ ಪರಿಭಾಷಿಸದ ಪದಗಳು ಮತ್ತು ಪದಾವಳಿಗಳು ಮತ್ತು ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948 (1948ರ ಕೇಂದ್ರ ಅಧಿನಿಯಮ 54)ರಲ್ಲಿ ಪರಿಭಾಷಿಸಲಾದಂತೆ, ಆ ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ಗೊತ್ತುಪಡಿಸಲಾದ ಅರ್ಥಗಳನ್ನೇ ಹೊಂದಿರುತ್ತವೆ;

(ಕ್ಯೂ) ಈ ಅಧಿನಿಯಮದಲ್ಲಾಗಲಿ ಅಥವಾ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948 (1948ರ ಅಧಿನಿಯಮ 54) ರಲ್ಲಾಗಲಿ ಬಳಸಲಾದ ಆದರೆ ಪರಿಭಾಷಿಸದ ಮತ್ತು ಭಾರತ ವಿದ್ಯುಚ್ಛಕ್ತಿ ಅಧಿನಿಯಮ, 1910 (1910ರ ಅಧಿನಿಯಮ IX ರಲ್ಲಿ) ಪರಿಭಾಷಿಸಲಾದ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮದಲ್ಲಿ ಅವುಗಳಿಗೆ ನೀಡಲಾಗಿದ್ದ ಅರ್ಥಗಳನ್ನೇ ಅನುಕ್ರಮವಾಗಿ ಹೊಂದಿರುತ್ತವೆ;

## ಭಾಗ II

## ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

**3. ಆಯೋಗದ ಸ್ಥಾಪನೆ ಮತ್ತು ರಚನೆ.-** (1) ಈ ಅಧಿನಿಯಮದ ಉದ್ದೇಶಗಳಿಗಾಗಿ, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಮೂರು ತಿಂಗಳ ಒಳಗಾಗಿ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವೆಂದು ಕರೆಯಲಾಗುವ ಒಂದು ಆಯೋಗವನ್ನು ಸ್ಥಾಪಿಸತಕ್ಕದ್ದು. ಅದು ಒಂದು ನಿಗಮಿತ ನಿಕಾಯವಾಗಿದ್ದು ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮುದ್ರೆಯನ್ನು ಹೊಂದಿರತಕ್ಕದ್ದು, ಚರ ಮತ್ತು ಸ್ಥಿರ ಸ್ವತ್ತನ್ನು ಆರ್ಜಿಸಲು, ಹೊಂದಲು ಮತ್ತು ವಿಲೆ ಮಾಡಲು ಅಧಿಕಾರ ಹೊಂದಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡಲು ಮತ್ತು ದಾವೆಗೆ ಗುರಿಯಾಗಲು ಹಕ್ಕುಳ್ಳದ್ದಾಗಿರತಕ್ಕದ್ದು.

(2) ಆಯೋಗವು, 4ನೇ ಪ್ರಕರಣದಲ್ಲಿ ಉಪಬಂಧಿಸಲಾದ ವಿಧಾನದಲ್ಲಿ ಈ ಉದ್ದೇಶಕ್ಕಾಗಿ ರಚಿಸಲಾದ ಆಯ್ಕೆ ಸಮಿತಿಯಿಂದ ಆಯ್ಕೆಯಾದ ವ್ಯಕ್ತಿಗಳಿಂದ ರಾಜ್ಯ ಸರ್ಕಾರವು ನೇಮಕ ಮಾಡುವ ಮೂವರು ಸದಸ್ಯರನ್ನು ಒಳಗೊಂಡಿರತಕ್ಕದ್ದು ಮತ್ತು ಅವರಲ್ಲಿ ಒಬ್ಬರನ್ನು ಅಧ್ಯಕ್ಷನೆಂಬುದಾಗಿ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡತಕ್ಕದ್ದು.

(3) ಅಧ್ಯಕ್ಷನು ಗೈರುಹಾಜರಿ, ಅನಾರೋಗ್ಯ ಅಥವಾ ಯಾವುದೇ ಇತರ ಕಾರಣದಿಂದಾಗಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅಸಮರ್ಥನಾಗಿರುವಲ್ಲಿ, ತರುವಾಯದ ಹಿರಿಯ ಸದಸ್ಯನು, ಅಧ್ಯಕ್ಷನು ಅಧಿಕಾರವನ್ನು ಪುನಃ ವಹಿಸಿಕೊಳ್ಳುವ ದಿನದವರೆಗೆ ಅಧ್ಯಕ್ಷನೆಂಬುದಾಗಿ ಕಾರ್ಯನಿರ್ವಹಿಸತಕ್ಕದ್ದು.

(4) ಸದಸ್ಯರ ಜ್ಯೇಷ್ಠತೆಯನ್ನು ಅವರ ನೇಮಕಾತಿ ಆದೇಶದಲ್ಲಿ ಸೂಚಿಸಲಾದಂತೆ ಅವರ ನೇಮಕಾತಿ ದಿನಾಂಕದಿಂದ ಪರಿಗಣಿಸತಕ್ಕದ್ದು. ಇಬ್ಬರು ಸದಸ್ಯರನ್ನು ಏಕಕಾಲದಲ್ಲಿ ನೇಮಕಗೊಳಿಸಿದ ಸಂದರ್ಭದಲ್ಲಿ, ರಾಜ್ಯ ಸರ್ಕಾರವು ನೇಮಕಾತಿಯನ್ನು ಮಾಡುವಾಗ ಅವರ ನಡುವಿನ ಜ್ಯೇಷ್ಠತೆಯನ್ನು ನಿರ್ಧರಿಸತಕ್ಕದ್ದು.

(5) ಆಯೋಗದ ಯಾವುದೇ ಕಾರ್ಯ ಅಥವಾ ನಡವಳಿಗಳು ಅದರ ಸದಸ್ಯರ ಪೈಕಿ ಯಾವುದೇ ಖಾಲಿಸ್ಥಾನವು ಉಂಟಾದ ಕಾರಣಮಾತ್ರದಿಂದಲೇ ಅಥವಾ ಅದರ ರಚನೆಯಲ್ಲಿ ಯಾವುದೇ ದೋಷವಿರುವ ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

(6) ಅಧ್ಯಕ್ಷನು, ಆಯೋಗದ ಮುಖ್ಯ ಕಾರ್ಯನಿರ್ವಾಹಕನಾಗಿರತಕ್ಕದ್ದು.

**4. ಸದಸ್ಯರನ್ನು ಆಯ್ಕೆ ಮಾಡಲು ಆಯ್ಕೆ ಸಮಿತಿಯ ರಚನೆ.-** (1) ರಾಜ್ಯ ಸರ್ಕಾರವು, ಅಗತ್ಯವಿರುವಾಗಲೆಲ್ಲಾ, ಸದಸ್ಯರಾಗಿ ನೇಮಕ ಮಾಡಲು ವ್ಯಕ್ತಿಗಳನ್ನು ಆಯ್ಕೆ ಮಾಡುವುದಕ್ಕಾಗಿ ಆಯ್ಕೆ ಸಮಿತಿಯೊಂದನ್ನು ತ್ವರಿತವಾಗಿ ರಚಿಸತಕ್ಕದ್ದು.

(2) ಆಯ್ಕೆ ಸಮಿತಿಯು ಮೂವರು ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಉಚ್ಚ ನ್ಯಾಯಾಲಯದ ಒಬ್ಬ ನಿವೃತ್ತ ಮುಖ್ಯ ನ್ಯಾಯಮೂರ್ತಿ ಅಥವಾ ಸರ್ವೋಚ್ಚ ನ್ಯಾಯಾಲಯದ ಒಬ್ಬ ನಿವೃತ್ತ ನ್ಯಾಯಾಧೀಶರು ಅಧ್ಯಕ್ಷರಾಗಿ;

(ಬಿ) ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು, ಒಬ್ಬ ಸದಸ್ಯನಾಗಿ,

(ಸಿ) ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರದ ಅಧ್ಯಕ್ಷ ಅಥವಾ ಮೂರು ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಯಲ್ಲಿ ವಿದ್ಯುಚ್ಛಕ್ತಿ ಮಂಡಲಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸಿದ ಒಬ್ಬ ವ್ಯಕ್ತಿಯು ಸದಸ್ಯನಾಗಿ, ಮತ್ತು

ಕರ್ನಾಟಕ ಸರ್ಕಾರದ ವಿದ್ಯುಚ್ಛಕ್ತಿ ಇಲಾಖೆಯ ಪ್ರಭಾರದಲ್ಲಿರುವ ಕಾರ್ಯದರ್ಶಿಯು, ಆಯ್ಕೆ ಸಮಿತಿಯ ಸಂಚಾಲಕನಾಗಿ ಕಾರ್ಯನಿರ್ವಹಿಸತಕ್ಕದ್ದು.

(3) (ಎ) ಆಯ್ಕೆ ಸಮಿತಿಯು, ತ್ವರಿತವಾಗಿ ಕಾರ್ಯನಿರ್ವಹಿಸತಕ್ಕದ್ದು ಮತ್ತು ನಿವೃತ್ತಿ ಹೊಂದುವ ಸದಸ್ಯನ ಅವಧಿಯು ಪೂರ್ಣಗೊಂಡಾಗ ಪರಿಣಾಮಕಾರಿಯಾಗಿ ಕಾರ್ಯಭಾರವಹಿಸುವುದಕ್ಕಾಗಿ ಹೊಸ ಸದಸ್ಯರನ್ನು ಸಕಾಲದಲ್ಲಿ ನೇಮಕ ಮಾಡಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗುವಂತೆ ಆಯ್ಕೆಯನ್ನು ಸಾಮಾನ್ಯವಾಗಿ ವಿಳಂಬವಿಲ್ಲದೆ ಮತ್ತು ಅವಧಿ ಮುಕ್ತಾಯವಾದ ಕಾರಣದ ಹೊರತಾಗಿ ಖಾಲಿ ಸ್ಥಾನವುಂಟಾದ ಎರಡು ತಿಂಗಳ ಒಳಗೆ ಅಂತಿಮಗೊಳಿಸತಕ್ಕದ್ದು.

(ಬಿ) ಸದಸ್ಯರ ಆಯ್ಕೆ ಮತ್ತು ನೇಮಕಾತಿಯ ಕ್ರಮ ಮತ್ತು ವಿಧಾನ ಮತ್ತು ಸದಸ್ಯರ ಪೈಕಿ ಒಬ್ಬನನ್ನು ಅಧ್ಯಕ್ಷನೆಂದು ಪದನಾಮ ಮಾಡುವುದು ನಿಯಮಿಸಬಹುದಾದಂತೆ ಇರತಕ್ಕದ್ದು.

(ಸಿ) ಆಯ್ಕೆಯ ಉದ್ದೇಶಗಳಿಗಾಗಿ, ಆಯ್ಕೆ ಸಮಿತಿಯು ವ್ಯಕ್ತಿಗಳಿಂದ ಅರ್ಜಿಗಳನ್ನು ಆಹ್ವಾನಿಸಬಹುದು ಅಥವಾ ಆಯ್ಕೆ ಸಮಿತಿಯು ತಾನು ಸೂಕ್ತವೆಂದು ಪರಿಗಣಿಸಬಹುದಾದಂಥ ಮೂಲಗಳಿಂದ ಮತ್ತು ಅಂಥ ಇತರ ರೀತಿಯಿಂದ ನಾಮನಿರ್ದೇಶನ ಕೋರಬಹುದು.

(4) ಆಯ್ಕೆ ಸಮಿತಿಯು, ಆಯೋಗದಲ್ಲಿನ ಪ್ರತಿಯೊಂದು ಖಾಲಿಸ್ಥಾನಕ್ಕಾಗಿ ಈ ಅಧಿನಿಯಮದಲ್ಲಿ ಉಪಬಂಧಿಸಲಾದಂಥ ವಿದ್ಯಾರ್ಹತೆ ಮತ್ತು ಅನುಭವವನ್ನು ಹೊಂದಿರತಕ್ಕ ಇಬ್ಬರು ಸೂಕ್ತ ವ್ಯಕ್ತಿಗಳನ್ನು ಆಯ್ಕೆ ಮಾಡತಕ್ಕದ್ದು ಮತ್ತು ಆಯ್ಕೆ ಸಮಿತಿಯು ಹಾಗೆ ಸಂಕ್ಷಿಪ್ತ ಪಟ್ಟಿಯಲ್ಲಿ ಹೆಸರಿಸಿದ ವ್ಯಕ್ತಿಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಅಧಿಸೂಚಿಸತಕ್ಕದ್ದು. ರಾಜ್ಯ ಸರ್ಕಾರವು, ಆಯ್ಕೆ ಸಮಿತಿಯ ಶಿಫಾರಸುಗಳನ್ನು ಸ್ವೀಕರಿಸಿದ ಹದಿನೈದು ದಿನಗಳ ಒಳಗಾಗಿ ಆಯ್ಕೆ ಸಮಿತಿಯು ಸಂಕ್ಷಿಪ್ತ ಪಟ್ಟಿಯಲ್ಲಿ ಹೆಸರಿಸಿದ ಇಬ್ಬರು ಅಭ್ಯರ್ಥಿಗಳ ಪೈಕಿ ಒಬ್ಬರನ್ನು ಸದಸ್ಯನೆಂಬುದಾಗಿ ನೇಮಕ ಮಾಡತಕ್ಕದ್ದು.

(5) ಆಯ್ಕೆ ಸಮಿತಿಯ ಎಲ್ಲಾ ತೀರ್ಮಾನಗಳೂ ಬಹುಮತದಿಂದ ಕೈಗೊಂಡವುಗಳಾಗಿರತಕ್ಕದ್ದು.

**5. ಆಯೋಗದ ಸದಸ್ಯನಾಗಿ ನೇಮಕಗೊಳ್ಳಲು ಷರತ್ತುಗಳು.**- (1) ಸದಸ್ಯರು ಸಮರ್ಥ, ಪ್ರಾಮಾಣಿಕ ಮತ್ತು ಗಣ್ಯ ವ್ಯಕ್ತಿಗಳಾಗಿದ್ದು, ಅವರಿಗೆ ಇಂಜಿನಿಯರಿಂಗ್, ಹಣಕಾಸು, ಅರ್ಥಶಾಸ್ತ್ರ, ವಾಣಿಜ್ಯ, ಕಾನೂನು ಅಥವಾ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಸಾಕಷ್ಟು ತಿಳಿವಳಿಕೆ ಮತ್ತು ಅನುಭವವಿದ್ದು ಅವುಗಳ ಬಗ್ಗೆ ವ್ಯವಹರಿಸುವ ಸಾಮರ್ಥ್ಯವನ್ನು ತೋರಿದವರಾಗಿರತಕ್ಕದ್ದು, ಮತ್ತು ಎಲ್ಲಾ ಕಾಲದಲ್ಲಿ,-

(ಎ) ಒಬ್ಬ ಸದಸ್ಯನು ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಪದವೀಧರನಾಗಿದ್ದು, ವಿದ್ಯುಚ್ಛಕ್ತಿಯ ಉತ್ಪಾದನೆ, ರವಾನೆ ಅಥವಾ ವಿತರಣೆಯಲ್ಲಿ ಕನಿಷ್ಟ ಇಪ್ಪತ್ತೈದು ವರ್ಷಗಳ ಅನುಭವ ಹೊಂದಿದವನಾಗಿರತಕ್ಕದ್ದು ಮತ್ತು ಸದರಿ ಕ್ಷೇತ್ರದಲ್ಲಿ ಉನ್ನತ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದವನಾಗಿರತಕ್ಕದ್ದು ;

(ಬಿ) ಇಬ್ಬರು ಸದಸ್ಯರು ಕಾನೂನು, ಹಣಕಾಸು, ಅರ್ಥಶಾಸ್ತ್ರ, ವಾಣಿಜ್ಯ ಅಥವಾ ಆಡಳಿತ ಕ್ಷೇತ್ರದಲ್ಲಿ ಅರ್ಹತೆ ಹೊಂದಿದವರಾಗಿರತಕ್ಕದ್ದು, ಕನಿಷ್ಠ ಇಪ್ಪತ್ತೈದು ವರ್ಷಗಳ ಕಾರ್ಯನಿರತ ಅನುಭವ ಹೊಂದಿದವರಾಗಿದ್ದು ಮತ್ತು ಸದರಿ ಕ್ಷೇತ್ರದಲ್ಲಿ ಉನ್ನತ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದವರಾಗಿರತಕ್ಕದ್ದು :

ಪರಂತು, ಯಾವುದೇ ಸಮಯದಲ್ಲಿ ಆಯೋಗವು, ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಒಬ್ಬ ಸದಸ್ಯನಿಗಿಂತ ಹೆಚ್ಚಿನ ಸದಸ್ಯರನ್ನು ಒಳಗೊಂಡಿರತಕ್ಕದ್ದಲ್ಲ ;

(2) ಒಬ್ಬ ವ್ಯಕ್ತಿಯು, ಅವನು ಸಂಸತ್ತಿನ ಅಥವಾ ಯಾವುದೇ ರಾಜ್ಯ ವಿಧಾನಮಂಡಲದ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದ ಸದಸ್ಯನಾಗಿದ್ದರೆ ಅಥವಾ ರಾಜಕೀಯ ಪಕ್ಷದಲ್ಲಿ ಯಾವುದೇ ಹುದ್ದೆಯನ್ನು ಹೊಂದಿದ್ದರೆ, ಅವನು ಸದಸ್ಯನಾಗಿ ನೇಮಕಗೊಳ್ಳಲು ಅನರ್ಹನಾಗತಕ್ಕದ್ದು.

(3) ಸದಸ್ಯರಾಗಿ ನೇಮಕಗೊಳ್ಳಲು ಪರಿಗಣಿಸಲಾಗುವ ವ್ಯಕ್ತಿಗಳು, ಆಯ್ಕೆ ಸಮಿತಿಯ ಸಂಚಾಲಕನಿಗೆ ಈ ಮುಂದಿನವುಗಳನ್ನು ತಿಳಿಸತಕ್ಕದ್ದು:-

(ಎ) ತನ್ನ ಸ್ವಂತ ಹೆಸರಿನಲ್ಲಿ ಅಥವಾ ಯಾವುದೇ ಫರ್ಮು, ವ್ಯಕ್ತಿಗಳ ಸಂಸ್ಥೆ ಅಥವಾ ನಿಗಮಿತ ನಿಕಾಯದ ಹೆಸರಿನಲ್ಲಿ ಅಥವಾ ಯಾರೇ ಸಂಬಂಧಿಕರ ಹೆಸರಿನಲ್ಲಿ ತಾನು ಹೊಂದಿರುವ, ಈ ಮುಂದಿನ ಯಾವುದೇ ವ್ಯವಹಾರವನ್ನು ಅಥವಾ ಅದರಲ್ಲಿನ ಯಾವುದೇ ಹಣಕಾಸಿನ ಹಿತಾಸಕ್ತಿಯನ್ನು ಹೊಂದಿರುವ ಯಾವುದೇ ಹುದ್ದೆ, ಉದ್ಯೋಗ ಅಥವಾ ಸಮಾಲೋಚನಾ ಒಪ್ಪಂದ ಅಥವಾ ವ್ಯವಸ್ಥೆ: -

(i) ವಿದ್ಯುಚ್ಛಕ್ತಿಯ ಉತ್ಪಾದನೆ, ರವಾನೆ, ವಿತರಣೆ ಅಥವಾ ಸರಬರಾಜು;

(ii) ವಿದ್ಯುಚ್ಛಕ್ತಿಯ ಉತ್ಪಾದನೆಗಾಗಿ ಯಾವುದೇ ಇಂಧನದ ತಯಾರಿಕೆ, ಮಾರಾಟ ಅಥವಾ ಸರಬರಾಜು ;

(iii) ವಿದ್ಯುಚ್ಛಕ್ತಿಯ ಉತ್ಪಾದನೆ, ರವಾನೆ, ವಿತರಣೆ, ಸರಬರಾಜು ಅಥವಾ ಬಳಕೆಗಾಗಿ ಯಂತ್ರೋಪಕರಣಗಳು, ಸ್ಥಾವರ, ಸಾಧನ ಸಲಕರಣೆ, ಸಲಕರಣೆ ಅಥವಾ ಜೋಡಣೆಗಳ ತಯಾರಿಕೆ, ಮಾರಾಟ, ಗುತ್ತಿಗೆ, ಬಾಡಿಗೆ, ಸರಬರಾಜು ಅಥವಾ ಇತರ ರೀತಿಯ ವ್ಯವಹರಣೆ ; ಮತ್ತು

(iv) ಮೇಲೆ (i), (ii) ಮತ್ತು (iii)ನೇ ಖಂಡಗಳಲ್ಲಿ ಉಲ್ಲೇಖಿಸಲಾದ ಯಾವುವೇ ವ್ಯವಹಾರಗಳಿಗೆ ವೃತ್ತಿಸೇವೆಗಳನ್ನು ಒದಗಿಸುವ ಯಾವುದೇ ವಸ್ತು ; ಮತ್ತು

(ಬಿ) ನಿಯಮಿಸಬಹುದಾದಂಥ ಇತರ ವಿವರಗಳು ಮತ್ತು ಮಾಹಿತಿಗಳು.

***ವಿವರಣೆ.***- ಈ ಪ್ರಕರಣದ ಉದ್ದೇಶಕ್ಕಾಗಿ **"ಸಂಬಂಧಿ"** ಎಂಬ ಪದವು, ಕಂಪನಿಗಳ ಅಧಿನಿಯಮ, 1956ರ 6ನೇ ಪ್ರಕರಣದ ಅಡಿಯಲ್ಲಿ ಪರಿಭಾಷಿಸಲಾದಂತೆ ಅದೇ ಅರ್ಥವನ್ನು ಹೊಂದಿರತಕ್ಕದ್ದು ಮತ್ತು ಒಬ್ಬ ಸದಸ್ಯ ಮತ್ತು ಅವನ ಸಂಬಂಧಿಕರು ಒಂದು ಸಾರ್ವಜನಿಕ ಕಂಪನಿಯಲ್ಲಿ ಷೇರು ಬಂಡವಾಳ ನೀಡಿಕೆಯ ಒಟ್ಟಾರೆ ಶೇ. 2 ರಷ್ಟಕ್ಕಿಂತ ಕಡಿಮೆಯ ಷೇರು ಬಂಡವಾಳಗಳನ್ನು ಹೊಂದಿದ್ದಲ್ಲಿ ಅವರನ್ನು ಆ ಸಾರ್ವಜನಿಕ ಕಂಪನಿಯ ಯಾವುದೇ ವ್ಯವಹಾರದಲ್ಲಿ ಹಣಕಾಸಿನ ಹಿತಾಸಕ್ತಿಯನ್ನು ಹೊಂದಿರುವರೆಂದು ಭಾವಿಸತಕ್ಕದ್ದಲ್ಲ.

(4) ವ್ಯಕ್ತಿಗಳಿಂದ ಸ್ವೀಕರಿಸಲಾದ ವಿವರಗಳನ್ನು, ಸದಸ್ಯನಾಗಿ ನೇಮಕ ಮಾಡಲು ವ್ಯಕ್ತಿಗಳನ್ನು ಆಯ್ಕೆ ಮಾಡುವ ಮತ್ತು ಶಿಫಾರಸ್ಸು ಮಾಡುವ ಸಮಯದಲ್ಲಿ ಪರ್ಯಾಲೋಚನೆಗಾಗಿ ಆಯ್ಕೆ ಸಮಿತಿಯ ಮುಂದೆ ಇಡತಕ್ಕದ್ದು.

(5) ಒಬ್ಬ ವ್ಯಕ್ತಿಯನ್ನು ಸದಸ್ಯನಾಗಿ ಶಿಫಾರಸ್ಸು ಮಾಡುವುದಕ್ಕೆ ಮೊದಲು ಅಂಥ ವ್ಯಕ್ತಿಯು (3)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದಂತೆ ಅಥವಾ ಇತರ ರೀತಿಯಲ್ಲಿ ಯಾವುದೇ ಹಣಕಾಸು ಅಥವಾ ಇತರ ಹಿತಾಸಕ್ತಿಯನ್ನು ಹೊಂದಿಲ್ಲವೆಂಬ ಬಗ್ಗೆ ಆಯ್ಕೆ ಸಮಿತಿಯು ತೃಪ್ತಿ ಹೊಂದಿರತಕ್ಕದ್ದು. ಇಲ್ಲದಿದ್ದರೆ ಆತನು ಒಬ್ಬ ಸದಸ್ಯನಾಗಿ ತನ್ನ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವಲ್ಲಿ ಬಾಧಕವಾಗುವ ಸಂಭವವಿರುತ್ತದೆ.

(6) ಪ್ರತಿಯೊಬ್ಬ ಸದಸ್ಯನು, ತಾನು ಸದಸ್ಯನಾಗಿ ಅಧಿಕಾರ ವಹಿಸಿಕೊಳ್ಳುವುದಕ್ಕೆ ಮೊದಲು ಅಥವಾ ಪ್ರಭಾರವನ್ನು ವಹಿಸಿಕೊಂಡ ತರುವಾಯ ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇರೆಗೆ ರಾಜ್ಯ ಸರ್ಕಾರವು ಅನುಮತಿಸಬಹುದಾದಂಥ ಮೂರು ತಿಂಗಳನ್ನು ಮೀರದ ಅಂಥ ಅವಧಿಯೊಳಗೆ ಅವನ ನೇಮಕಾತಿಯ ಒಂದು ಷರತ್ತಾಗಿ (3)ನೇ ಉಪ ಪ್ರಕರಣದಲ್ಲಿ ನಮೂದಿಸಲಾದ ವ್ಯವಹಾರಗಳಲ್ಲಿನ ಹಿತಾಸಕ್ತಿಯಿಂದ ತನ್ನನ್ನು ತಾನು ವರ್ಜಿಸಿಕೊಳ್ಳತಕ್ಕದ್ದು.

(7) ಒಬ್ಬ ವ್ಯಕ್ತಿಯು, ಸದಸ್ಯನಾಗಿ ನೇಮಕಗೊಳ್ಳುವಾಗ ಅವನು ರಾಜ್ಯ ಅಥವಾ ಕೇಂದ್ರ ಸರ್ಕಾರದ ಅಥವಾ ಯಾವುದೇ ಸಾರ್ವಜನಿಕ ವಲಯ ನಿಗಮದಲ್ಲಿ ಅಥವಾ ಯಾವುದೇ ಸರ್ಕಾರದ ನಿಕಾಯದಲ್ಲಿ ಯಾವುದೇ ಹುದ್ದೆಯನ್ನು ಹೊಂದಿದ್ದರೆ ಅಥವಾ ಯಾರೇ ವ್ಯಕ್ತಿಯ ಸೇವೆಯಲ್ಲಿ ಇತರ ರೀತಿಯಲ್ಲಿ ಲಾಭದಾಯಕವಾಗಿ ಉದ್ಯೋಗದಲ್ಲಿದ್ದರೆ ಅಥವಾ ತೊಡಗಿದ್ದರೆ, ಅವನು ತನ್ನ ರಾಜೀನಾಮೆಯನ್ನು ಸಲ್ಲಿಸತಕ್ಕದ್ದು ಅಥವಾ ಆ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದತಕ್ಕದ್ದು.

(8) ಒಬ್ಬ ಸದಸ್ಯನು, ಯಾವುದೇ ಕಾರಣದಿಂದಾಗಿ ಸದಸ್ಯನಾಗಿರುವುದು ನಿಂತುಹೋದ ತರುವಾಯದ ಎರಡು ವರ್ಷಗಳ ಅವಧಿಯೊಳಗಿನ ಯಾವುದೇ ಸಮಯದಲ್ಲಿ ರಾಜ್ಯ ಸರ್ಕಾರದ ಸೇವೆಯಲ್ಲಿ ಅಥವಾ ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿ ಅಥವಾ ನಿಯಂತ್ರಣದಲ್ಲಿರುವ ಯಾವುದೇ ನಿಗಮಿತ ನಿಕಾಯದಲ್ಲಿ ಅಥವಾ ಸಂಸ್ಥೆಯಲ್ಲಿ ಅಥವಾ ಉದ್ಯಮದಲ್ಲಿ ಅಥವಾ ಕರ್ನಾಟಕದಲ್ಲಿ ವಿದ್ಯುಚ್ಛಕ್ತಿ ವಲಯದೊಂದಿಗೆ ವ್ಯವಹರಿಸುವ ನಿಕಾಯದಲ್ಲಿ ನೇಮಕಗೊಳ್ಳತಕ್ಕದ್ದಲ್ಲ.

(9) ಒಬ್ಬ ವ್ಯಕ್ತಿಯು, ಸದಸ್ಯನಾಗಿ ಹುದ್ದೆಯನ್ನು ಹೊಂದಿರುವವರೆಗೆ ಮತ್ತು ಯಾವುದೇ ಕಾರಣದಿಂದಾಗಿ ಸದಸ್ಯನಾಗಿರುವುದು ನಿಂತುಹೋದ ತರುವಾಯ ಎರಡು ವರ್ಷಗಳ ಅವಧಿಗಾಗಿ ಅವನು ರಾಜ್ಯದ ಒಳಗೆ ಅಥವಾ ರಾಜ್ಯದ ಹೊರಗೆ, ಈ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ ಹೇಳಲಾದ ಯಾವುದೇ ಹುದ್ದೆ ಅಥವಾ ಉದ್ಯೋಗ ಅಥವಾ ಸಮಾಲೋಚನಾ ಒಪ್ಪಂದ ಅಥವಾ ವ್ಯವಹಾರಗಳನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಆರ್ಜಿಸತಕ್ಕದ್ದಲ್ಲ, ಹೊಂದಿರತಕ್ಕದ್ದಲ್ಲ ಅಥವಾ ನಿರ್ವಹಿಸತಕ್ಕದ್ದಲ್ಲ ಮತ್ತು ಅಂಥ ಯಾವುದೇ ಹಿತಾಸಕ್ತಿಯನ್ನು ಅನೈಚ್ಛಿಕವಾಗಿ ಅಥವಾ ಉತ್ತರಾಧಿಕಾರದ ಮೂಲಕ ಅಥವಾ ಮರಣ ಶಾಸನದ ವ್ಯವಸ್ಥೆಯ ಮೂಲಕ ಹೊಂದಿದರೆ ಅಂಥ ಹಿತಾಸಕ್ತಿಯನ್ನು ಹಾಗೆ ಆರ್ಜಿಸಿದ ಮೂರು ತಿಂಗಳ ಅವಧಿಯ ಒಳಗಾಗಿ ಅಂಥ ಹಿತಾಸಕ್ತಿಯಿಂದ ತನ್ನನ್ನು ತಾನು ವರ್ಜಿಸಿಕೊಳ್ಳತಕ್ಕದ್ದು.

(10) ಒಬ್ಬ ಸದಸ್ಯನು, ಯಾವುದೇ ಕಾರಣದಿಂದಾಗಿ ಸದಸ್ಯನಾಗಿರುವುದು ನಿಂತುಹೋದ ತರುವಾಯ ಮೂರು ವರ್ಷಗಳ ಅವಧಿಯೊಳಗಾಗಿ ಆಯೋಗದ ಮುಂದೆ ಹಾಜರಾಗತಕ್ಕದ್ದಲ್ಲ ಅಥವಾ ಆಯೋಗವು ಒಳಗೊಂಡಂತೆ ಯಾರೇ ವ್ಯಕ್ತಿಯನ್ನು ಇತರ ರೀತಿಯಲ್ಲಿ ಪ್ರತಿನಿಧಿಸತಕ್ಕದ್ದಲ್ಲ.

**6. ಸದಸ್ಯರ ಅಧಿಕಾರಾವಧಿ, ಸೇವಾ ಷರತ್ತುಗಳು, ಇತ್ಯಾದಿ.**- (1) ಪ್ರತಿಯೊಬ್ಬ ಸದಸ್ಯನು ಅವನು ಸದಸ್ಯನಾಗಿ ನೇಮಕಗೊಂಡ ದಿನಾಂಕದಿಂದ ಐದು ವರ್ಷಗಳ ಅವಧಿಗೆ ಅಥವಾ ಅರವತ್ತೈದು ವರ್ಷಗಳ ವಯಸ್ಸಿನವರೆಗೆ - ಇವುಗಳಲ್ಲಿ ಯಾವುದು ಮೊದಲೋ ಆವರೆಗೆ-ಹುದ್ದೆಯನ್ನು ಹೊಂದಿರತಕ್ಕದ್ದು ಮತ್ತು

ಅವನು ನೇಮಕಾತಿಯ ಅವಧಿಯು ಮುಕ್ತಾಯವಾದ ನಂತರ ಯಾವುದೇ ಸಮಯದಲ್ಲಿ ಆಯೋಗದಲ್ಲಿ ಮರು ನೇಮಕಾತಿಗೆ ಅರ್ಹನಾಗಿರತಕ್ಕದ್ದಲ್ಲ :

ಪರಂತು, ಒಬ್ಬ ಸದಸ್ಯನು, ಸದಸ್ಯನಾಗಿ ಮತ್ತು ಅಧ್ಯಕ್ಷನಾಗಿ ಆಯೋಗದಲ್ಲಿ ಐದು ವರ್ಷಗಳಿಗೆ ಮೀರದ ಸಂಯೋಜಿತ ಅಧಿಕಾರಾವಧಿಗೆ ಒಳಪಟ್ಟು ಅಧ್ಯಕ್ಷನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದು :

ಮತ್ತು ಪರಂತು, ಮೊದಲು ನೇಮಕಗೊಂಡ ಎಲ್ಲ ಸದಸ್ಯರ ಏಕಕಾಲದ ನಿವೃತ್ತಿಯನ್ನು ತಪ್ಪಿಸುವ ಕ್ರಮವಾಗಿ ಮೊದಲ ಮೂವರು ಸದಸ್ಯರನ್ನು ಮೂರು ವರ್ಷಗಳು, ನಾಲ್ಕು ವರ್ಷಗಳು ಮತ್ತು ಐದು ವರ್ಷಗಳ ಬೇರೆ ಬೇರೆ ಅವಧಿಗಾಗಿ ನೇಮಕ ಮಾಡತಕ್ಕದ್ದು :

ಮತ್ತು ಪರಂತು, ಯಾರೇ ವ್ಯಕ್ತಿಯನ್ನು ಅವನಿಗೆ ಅರವತ್ತೆರಡು ವರ್ಷ ವಯಸ್ಸು ಪೂರ್ಣಗೊಂಡ ನಂತರ ಸದಸ್ಯನಾಗಿ ನೇಮಕ ಮಾಡಿಕೊಳ್ಳತಕ್ಕದ್ದಲ್ಲ.

(2) ಅಧ್ಯಕ್ಷ ಮತ್ತು ಇತರ ಸದಸ್ಯರು ನಿಯಮಿಸಬಹುದಾದ ಅಂಥ ಸಂಭಾವನೆ ಮತ್ತು ಇತರ ಭತ್ಯೆಗಳನ್ನು ಸ್ವೀಕರಿಸತಕ್ಕದ್ದು ಮತ್ತು ಅಂಥ ಸೇವಾ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು :

ಪರಂತು, ಒಂದು ಬಾರಿ ನಿಯಮಿಸಲಾದ ಸೇವಾ ಷರತ್ತುಗಳನ್ನು ಅವರ ನೇಮಕಾತಿ ಅವಧಿಯ ಸಂದರ್ಭದಲ್ಲಿ ಸದಸ್ಯರಿಗೆ ಅನನುಕೂಲವಾಗುವಂತೆ ಬದಲಾಯಿಸತಕ್ಕದ್ದಲ್ಲ.

(3) ಅಧ್ಯಕ್ಷ ಮತ್ತು ಪ್ರತಿಯೊಬ್ಬ ಇತರ ಸದಸ್ಯನು ತನ್ನ ಹುದ್ದೆಯನ್ನು ವಹಿಸಿಕೊಳ್ಳುವುದಕ್ಕೆ ಮೊದಲು ಅಧಿಕಾರ ಸ್ವೀಕಾರದ ಮತ್ತು ಗೌಪ್ಯತೆಯ ಪ್ರಮಾಣ ವಚನವನ್ನು ನಿಯಮಿಸಬಹುದಾದಂಥ ಕ್ರಮದಲ್ಲಿ, ಅಂಥ ರೀತಿಯಲ್ಲಿ ಮತ್ತು ಅಂಥ ಪ್ರಾಧಿಕಾರದ ಸಮಕ್ಷಮ ಸ್ವೀಕರಿಸತಕ್ಕದ್ದು.

**7. ಸದಸ್ಯರನ್ನು ತೆಗೆದುಹಾಕುವುದು.**- (1) (2) ಮತ್ತು (3)ನೇ ಉಪ ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು, ರಾಜ್ಯಪಾಲರು, ಯಾರೇ ಸದಸ್ಯನನ್ನು ,-

(ಎ) ಅವನು ಅವಿಮುಕ್ತ ದಿವಾಳಿ ಎಂಬುದಾಗಿ ನ್ಯಾಯನಿರ್ಣೀತನಾಗಿದ್ದರೆ, ಅಥವಾ

(ಬಿ) ನೈತಿಕ ಅಧಃಪತನವನ್ನು ಒಳಗೊಂಡ ಅಪರಾಧದ ದೋಷಸಿದ್ಧಿಯಾಗಿದ್ದರೆ, ಅಥವಾ

(ಸಿ) ಅಂಥ ಸದಸ್ಯನಾಗಿ ಕಾರ್ಯನಿರ್ವಹಿಸಲು ದೈಹಿಕವಾಗಿ ಅಥವಾ ಮಾನಸಿಕವಾಗಿ ಅಸಮರ್ಥನಾದರೆ, ಅಥವಾ

(ಡಿ) ಯುಕ್ತ ಕಾರಣವಿಲ್ಲದೇ ಕನಿಷ್ಠ ಮೂರು ತಿಂಗಳ ಅವಧಿಯವರೆಗೆ ತನ್ನ ಕಾರ್ಯಚಟುವಟಿಕೆಗಳನ್ನು ನಡೆಸಲು ತಿರಸ್ಕರಿಸಿದರೆ ಅಥವಾ ವಿಫಲನಾಗಿದ್ದರೆ, ಅಥವಾ

(ಇ) ಸದಸ್ಯನಾಗಿ ತನ್ನ ನೇಮಕಾತಿಯ ಯಾವುವೇ ಷರತ್ತುಗಳನ್ನು ಪೂರೈಸುವುದನ್ನು ನಿಲ್ಲಿಸಿದರೆ, ಅಥವಾ

(ಎಫ್) ಸದಸ್ಯನಾಗಿ ತನ್ನ ಕಾರ್ಯಚಟುವಟಿಕೆಗಳನ್ನು ನಿಷ್ಪಕ್ಷಪಾತವಾಗಿ ನಿರ್ವಹಿಸುವಲ್ಲಿ ಬಾಧಕವಾಗಬಹುದಾದ ಅಂಥ ಹಣಕಾಸು ಅಥವಾ ಇತರ ಹಿತಾಸಕ್ತಿಯನ್ನು ಹೊಂದಿದರೆ, ಅಥವಾ

(ಜಿ) ಅವನು ಅಧಿಕಾರದಲ್ಲಿ ಮುಂದುವರೆಯುವುದರಿಂದ ಸಾರ್ವಜನಿಕ ಹಿತಾಸಕ್ತಿಗೆ ಅಥವಾ ಈ ಅಧಿನಿಯಮದ ಧ್ಯೇಯ ಮತ್ತು ಉದ್ದೇಶಗಳಿಗೆ ಬಾಧಕವಾಗಬಹುದು ಎಂಬ ರೀತಿಯಲ್ಲಿ ಅವನು ನಡೆದುಕೊಂಡಿದ್ದರೆ ಅಥವಾ ತನ್ನ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದ್ದರೆ,

- ಅವನನ್ನು ಅವನ ಹುದ್ದೆಯಿಂದ ತೆಗೆದುಹಾಕಬಹುದು.

(2) (ಎ) ಒಬ್ಬ ಸದಸ್ಯನು ಆಪಾದನೆಯನ್ನು ಲಿಖಿತವಾಗಿ ಒಪ್ಪಿಕೊಂಡ ಹೊರತು, ಯಾರೇ ಸದಸ್ಯನನ್ನು ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯ ಶಿಫಾರಸ್ಸಿನ ಮೇರೆಗೆ ಕರ್ನಾಟಕದ ಉಚ್ಚ ನ್ಯಾಯಾಲಯದ ಒಬ್ಬ ಹಾಲಿ ನ್ಯಾಯಾಧೀಶನು ಸೂಕ್ತ ಸಮಯದಲ್ಲಿ ತನಿಖೆಯನ್ನು ನಡೆಸಿ ಅದರ ಒಂದು ವರದಿಯನ್ನು ರಾಜ್ಯಪಾಲರಿಗೆ ಸಲ್ಲಿಸುವವರೆಗೆ (1)ನೇ ಉಪ ಪ್ರಕರಣದ (ಸಿ), (ಡಿ), (ಇ), (ಎಫ್) ಮತ್ತು (ಜಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಕಾರಣಗಳಿಗಾಗಿ ಅವನ್ನನ್ನು ಹುದ್ದೆಯಿಂದ ತೆಗೆದುಹಾಕತಕ್ಕದ್ದಲ್ಲ.

(ಬಿ) (ಎ) ಖಂಡದ ಅಡಿಯಲ್ಲಿ ಒಬ್ಬ ಸದಸ್ಯನ ವಿರುದ್ಧ ತನಿಖೆ ಇತ್ಯರ್ಥವಾಗದೆ ಉಳಿದಿದ್ದರೆ, (ಎ) ಖಂಡದ ಅಡಿಯಲ್ಲಿ ತನಿಖೆ ನಡೆಸಲು ನೇಮಕನಾದ ನ್ಯಾಯಾಧೀಶನು ಅಮಾನತ್ತಿಗಾಗಿ ಶಿಪಾರಸ್ಸು ಮಾಡಿದ್ದರೆ, ರಾಜ್ಯಪಾಲರು ಆ ಸದಸ್ಯನನ್ನು ಅಧ್ಯಕ್ಷ ಅಥವಾ ಸದಸ್ಯನಾಗಿ ಕಾರ್ಯ ನಿರ್ವಹಿಸುವುದರಿಂದ ಅಮಾನತ್ತುಗೊಳಿಸಬಹುದು.

(3) ರಾಜ್ಯಪಾಲರು, (2)ನೇ ಉಪ ಪ್ರಕರಣದ ಅಡಿಯಲ್ಲಿನ ಶಿಫಾರಸ್ಸುಗಳ ಮೇರೆಗೆ ಕಾರ್ಯನಿರ್ವಹಿಸತಕ್ಕದ್ದು ಮತ್ತು (2)ನೇ ಉಪ ಪ್ರಕರಣದ ಅಡಿಯಲ್ಲಿ ವರದಿಯನ್ನು ಸ್ವೀಕರಿಸಿದ ಮೂವತ್ತು ದಿನಗಳ ಅವಧಿಯ ಒಳಗೆ ಆ ತೀರ್ಮಾನವನ್ನು ಸಂಬಂಧಪಟ್ಟ ಸದಸ್ಯನಿಗೆ ತಿಳಿಸತಕ್ಕದ್ದು.

(4) ತೆಗೆದುಹಾಕಲಾದ ಒಬ್ಬ ಸದಸ್ಯನು, ಯಾವುದೇ ಕಾಲದಲ್ಲಿ ಆಯೋಗದಲ್ಲಿ ಅಥವಾ ರಾಜ್ಯ ಸರ್ಕಾರದಲ್ಲಿ ಅಥವಾ ಯಾವುದೇ ರಾಜ್ಯ ಸರ್ಕಾರದ ಉದ್ಯಮಗಳಲ್ಲಿ ಸದಸ್ಯನಾಗಿ ಅಥವಾ ಇತರ ಯಾವುದೇ ಸಾಮರ್ಥ್ಯದಲ್ಲಿ ಪುನರ್ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದಲ್ಲ.

(5) ಈ ಪ್ರಕರಣದ ಅಡಿಯಲ್ಲಿ ತೆಗೆದುಹಾಕಲ್ಪಟ್ಟ ಸದಸ್ಯನು ಅಧ್ಯಕ್ಷನಾಗಿದ್ದರೆ, ಅವನು ಅಧ್ಯಕ್ಷನಾಗಿರುವುದು ನಿಂತುಹೋಗತಕ್ಕದ್ದು.

(6) ಸದಸ್ಯನನ್ನು ತೆಗೆದುಹಾಕುವುದರಿಂದ ಉಂಟಾಗುವ ಖಾಲಿ ಸ್ಥಾನವನ್ನು ಸದಸ್ಯನ ಅಥವಾ ಅಧ್ಯಕ್ಷರ ಪದಕ್ಕೆ ನೇಮಕಕ್ಕಾಗಿ ಉಪಬಂಧಿಸಲಾದ ರೀತಿಯಲ್ಲಿ ತುಂಬತಕ್ಕದ್ದು.

**8. ಕಾರ್ಯದರ್ಶಿ, ಸಿಬ್ಬಂದಿ, ಸಮಾಲೋಚಕರು ಮುಂತಾದವರ ನೇಮಕ.-** (1) ಆಯೋಗವು ರಚಿಸಿದ ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಲಾದಂಥ ಕರ್ತವ್ಯಗಳನ್ನು ಮತ್ತು ಅಧಿಕಾರಗಳನ್ನು ಅಧ್ಯಕ್ಷರ ನಿಯಂತ್ರಣದಲ್ಲಿ ಚಲಾಯಿಸಲು ಮತ್ತು ನಿರ್ವಹಿಸಲು ಒಂದು ಸಲಕ್ಕೆ ಐದು ವರ್ಷಗಳಿಗೆ ಮೀರದ ಒಂದು ಅವಧಿಗೆ ಕಾರ್ಯದರ್ಶಿಯಾಗಿ ಒಬ್ಬ ವ್ಯಕ್ತಿಯನ್ನು ಆಯೋಗವು ನೇಮಕ ಮಾಡತಕ್ಕದ್ದು.

(2) ಆಯೋಗದ ಮುಂದಿರುವ ಎಲ್ಲ ವಿಷಯಗಳಲ್ಲಿ, ವಿಚಾರಣೆಗಳಲ್ಲಿ ಮತ್ತು ವ್ಯವಹರಣೆಗಳಲ್ಲಿ ಗ್ರಾಹಕರ ಸಾಮಾನ್ಯ ಹಿತಾಸಕ್ತಿಯನ್ನು ಪ್ರತಿನಿಧಿಸುವ ಒಬ್ಬ ಹಿರಿಯ ಅಧಿಕಾರಿಯನ್ನು ಆಯೋಗವು ಹೊಂದಿರತಕ್ಕದ್ದು :

ಪರಂತು, ಗ್ರಾಹಕರ ಹಿತಾಸಕ್ತಿಯನ್ನು ಪ್ರತಿನಿಧಿಸುವ ಸಲುವಾಗಿ ಮಾಡಿದ ಅಂಥ ಹಿರಿಯ ಅಧಿಕಾರಿಯ ನೇಮಕವು, ಪ್ರತಿಯೊಬ್ಬ ಗ್ರಾಹಕನ ಮತ್ತು ವಿನಿಯಮಗಳಲ್ಲಿ ಅಥವಾ ಇತರ ರೀತಿಯಲ್ಲಿ ಆಯೋಗವು

ಮಾನ್ಯಮಾಡಬಹುದಾದ ಗ್ರಾಹಕರ ವೇದಿಕೆಗಳಿಂದ ಮತ್ತು ಸಂಸ್ಥೆಗಳ ಪ್ರತಿನಿಧಿಗಳ ಇತರ ಹಕ್ಕುಗಳ ಜೊತೆಗೆ ಹೆಚ್ಚಿಗೆಯಾಗಿ ಇರತಕ್ಕದ್ದು ಮತ್ತು ಯಾವುದೇ ರೀತಿಯಲ್ಲಿ ನ್ಯೂನಗೊಳಿಸುವ ರೀತಿಯಲ್ಲಿ ಇರತಕ್ಕದ್ದಲ್ಲ.

(3) ಆಯೋಗವು, ರಾಜ್ಯ ಸರ್ಕಾರದ ಅನುಮೋದನೆಯೊಡನೆ, ಆಯೋಗದ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ತನಗೆ ನೆರವು ನೀಡಲು ಬೇಕಾದಷ್ಟು ಸಂಖ್ಯೆಯ, ಸ್ವರೂಪದ ಮತ್ತು ಪ್ರವರ್ಗದ ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ನಿರ್ಧರಿಸತಕ್ಕದ್ದು.

(4) ಆಯೋಗದ ಕಾರ್ಯದರ್ಶಿ, ಅಧಿಕಾರಿಗಳು ಮತ್ತು ಇತರ ನೌಕರರಿಗೆ ಸಂದಾಯವಾಗತಕ್ಕ ಅಥವಾ ಅವರ ಸಂಬಂಧದಲ್ಲಿಯ ಸಂಬಳಗಳು, ಭತ್ಯೆಗಳು ಮತ್ತು ನಿವೃತ್ತಿ ವೇತನಗಳು ಸೇರಿದಂತೆ ಸದಸ್ಯರಿಗೆ ಸಂದಾಯವಾಗತಕ್ಕ ಸಂಬಳಗಳನ್ನು ಮತ್ತು ಭತ್ಯೆಗಳನ್ನು ಮತ್ತು ಆಡಳಿತ ವೆಚ್ಚಗಳನ್ನು ರಾಜ್ಯದ ಸಂಚಿತ ನಿಧಿಗೆ ಖರ್ಚು ಹಾಕತಕ್ಕದ್ದು.

(5) ಕಾರ್ಯದರ್ಶಿ, ಅಧಿಕಾರಿಗಳು ಮತ್ತು ಇತರ ನೌಕರರ ಆಯ್ಕೆಯ ವಿಧಾನ ಮತ್ತು ರೀತಿಗಳು ಮತ್ತು ಅವರ ಸೇವಾ ಷರತ್ತುಗಳು, ರಾಜ್ಯ ಸರ್ಕಾರದ ಪೂರ್ವಾನುಮತಿಯೊಡನೆ ಆಯೋಗವು ವಿನಿಯಮದ ಮೂಲಕ ನಿರ್ದಿಷ್ಟಪಡಿಸಬಹುದಾದಂಥವುಗಳಾಗಿರತಕ್ಕದ್ದು.

(6) ಆಯೋಗವು ಕಾಲಕಾಲಕ್ಕೆ ಆಯೋಗದ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ತನಗೆ ನೆರವು ನೀಡಲು ಅಗತ್ಯವಿರುವ ಸಮಾಲೋಚಕರನ್ನು ಆಯೋಗವು ನಿರ್ಧರಿಸಬಹುದಾದ ಷರತ್ತುಗಳು ಮತ್ತು ನಿಬಂಧನೆಗಳ ಮೇಲೆ ನೇಮಕಮಾಡಲು ಹಕ್ಕುಳ್ಳದ್ದಾಗಿರತಕ್ಕದ್ದು.

(7) ಆಯೋಗವು, ಅನುಸೂಚಿಯಲ್ಲಿ ಉಪಬಂಧಿಸಿದಂತೆ ವಾರ್ಷಿಕ ಬಜೆಟನ್ನು ತಯಾರಿಸತಕ್ಕದ್ದು.

## ಭಾಗ III

## ಆಯೋಗದ ನಡೆವಳಿಗಳು, ಅಧಿಕಾರಗಳು ಮತ್ತು ಪ್ರಕಾರ್ಯಗಳು

**9. ಆಯೋಗದ ನಡೆವಳಿಗಳು.**- (1) ಆಯೋಗದ ಕೇಂದ್ರ ಕಾರ್ಯಸ್ಥಾನವು ಬೆಂಗಳೂರಿನಲ್ಲಿರತಕ್ಕದ್ದು ಆದರೆ ಆಯೋಗವು ರಾಜ್ಯದ ಇತರ ಸ್ಥಳಗಳಲ್ಲಿ ಅದರ ನಡೆವಳಿಗಳನ್ನು, ಸಮಾಲೋಚನೆಗಳನ್ನು ಮತ್ತು ವಿಚಾರಣೆಗಳನ್ನು ನಡೆಸಲು ಹಕ್ಕುಳ್ಳದ್ದಾಗಿರತಕ್ಕದ್ದು.

(2) (ಎ) ಆಯೋಗವು ತನ್ನ ನಡೆವಳಿಗಳನ್ನು ನಡೆಸುವುದಕ್ಕಾಗಿ ಮತ್ತು ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ವಿನಿಯಮಗಳನ್ನು ರಚಿಸಲು ಸಂಪೂರ್ಣ ಅಧಿಕಾರ ಹೊಂದಿರತಕ್ಕದ್ದು ಮತ್ತು ರಚಿಸಿದ ಅಂಥ ಎಲ್ಲ ವಿನಿಯಮಗಳನ್ನು ಅಧಿಸೂಚಿಸತಕ್ಕದ್ದು.

(ಬಿ) ಆಯೋಗವು ಇತರ ರೀತಿಯಲ್ಲಿ ಅಧಿಸೂಚಿಸಿದ ಹೊರತು ಆಯೋಗದ ಮುಂದಿರುವ ಎಲ್ಲ ವಿಚಾರಣೆಗಳನ್ನು ಮತ್ತು ವ್ಯವಹರಣೆಗಳನ್ನು ಬಹಿರಂಗವಾಗಿ ತೀರ್ಮಾನಿಸತಕ್ಕದ್ದು.

(3) ಆಯೋಗದ ಸದಸ್ಯರಲ್ಲಿ ಭಿನ್ನಾಭಿಪ್ರಾಯಗಳಿದ್ದ ಪಕ್ಷದಲ್ಲಿ ಬಹುಮತದ ಅಭಿಪ್ರಾಯವು ಪ್ರಭಾವವುಳ್ಳದ್ದಾಗಿರತಕ್ಕದ್ದು ಮತ್ತು ಆಯೋಗದ ಅಭಿಪ್ರಾಯವನ್ನು ಬಹುಮತದ ಅಭಿಪ್ರಾಯದಂತೆ ವ್ಯಕ್ತಪಡಿಸತಕ್ಕದ್ದು. ಆಯೋಗದ ಪ್ರತಿಯೊಬ್ಬ ಸದಸ್ಯನು ಒಂದು ಮತವನ್ನು ಮಾತ್ರ ಹೊಂದಿರತಕ್ಕದ್ದು.

(4) ಅಧ್ಯಕ್ಷನು, ಅಧ್ಯಕ್ಷನ ಅಥವಾ ಸದಸ್ಯನ ಪದವು ರಿಕ್ತವಾಗಿರುವ ಕಾರಣ, ಇಬ್ಬರು ಸದಸ್ಯರು ಮಾತ್ರ ಹಾಜರಿದ್ದ ಅಥವಾ ಹಾಜರಿದ್ದ ಮೂವರು ಸದಸ್ಯರೊಡನೆ ಆಯೋಗವು ವ್ಯವಹಾರಗಳನ್ನು ನಡೆಸಲು ಸಾಧ್ಯವಿಲ್ಲದಂಥ ಸ್ವರೂಪದ ಅಸಮರ್ಥತೆ ಉಂಟಾದ ಸಂದರ್ಭದ ಹೊರತು, ನಿರ್ಣಾಯಕ ಅಥವಾ ಎರಡನೆ

ಮತವನ್ನು ಹೊಂದಿರತಕ್ಕದ್ದಲ್ಲ. ಅಧ್ಯಕ್ಷರು ಅಥವಾ ಸಂದರ್ಭಾನುಸಾರ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಹಿರಿಯ ಸದಸ್ಯನು ಅಂಥ ರಿಕ್ತತೆಯ ಅಥವಾ ಅಸಮರ್ಥತೆಯ ಅವಧಿಯಲ್ಲಿ ಎರಡನೆ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

(5) ಆಯೋಗದ ಸಭೆಯ ಕೋರಂ ಸಂಖ್ಯೆ ಎರಡು ಆಗಿರತಕ್ಕದ್ದು :

ಪರಂತು, ಆಯೋಗವು ಕೈಕೊಂಡ ಯಾವುದೇ ಹಿಂದಿನ ತೀರ್ಮಾನವನ್ನು ಪರಿಷ್ಕರಿಸುವುದಕ್ಕಾಗಿ ಅಥವಾ ಪ್ರಸ್ತಾವಿತ ಠರಾವಿನ ಪರವಾಗಿ ಅಥವಾ ವಿರುದ್ಧವಾಗಿ ಸಮಾನ ಮತಗಳು ಬಂದುದರಿಂದಾಗಿ ತೀರ್ಮಾನಿಸಲಾಗಿದ್ದ ಯಾವುದೇ ವಿಷಯದ ಪರಿಗಣನೆಗಾಗಿ ಸಭೆಯ ಕೋರಂ, ಸ್ವತಃ ಹಾಜರಿರುವ ಆಯೋಗದ ಎಲ್ಲ ಸದಸ್ಯರಷ್ಟು ಇರತಕ್ಕದ್ದು.

(6) ಅಧ್ಯಕ್ಷರು ನಿರ್ದೇಶಿಸಬಹುದಾದ ಅಂಥ ಸ್ಥಳದಲ್ಲಿ ಮತ್ತು ಕಾಲದಲ್ಲಿ ಆಯೋಗದ ಒಂದು ಸಭೆಯನ್ನು ಕರೆಯಲು ಅಧ್ಯಕ್ಷರು ಕಾರ್ಯದರ್ಶಿಯವರಿಗೆ ಸೂಚಿಸಬಹುದು ಇದರ ಜೊತೆಗೆ ಯಾವೊಬ್ಬ ಸದಸ್ಯನು, ಅಧ್ಯಕ್ಷರಿಗೆ ಲಿಖಿತ ನೋಟೀಸನ್ನು ಕಳುಹಿಸಿ ಯಾವುದೇ ಕಾಲದಲ್ಲಿ ಸಭೆಯನ್ನು ನಡೆಸುವಂತೆ ಅಧ್ಯಕ್ಷರನ್ನು ವಿನಂತಿಸಿಕೊಳ್ಳಬಹುದು. ಸದಸ್ಯರಿಗೆ ಎಲ್ಲ ಸಭೆಗಳ ನೋಟೀಸನ್ನು ಲಿಖಿತವಾಗಿ ಕೊಡತಕ್ಕದ್ದು.

(7) ಆಯೋಗವು, ಸದಸ್ಯರಿಗೆ ಕಾಗದ ಪತ್ರಗಳನ್ನು ಕಳುಹಿಸಿಕೊಡುವ ಮೂಲಕ ಜರೂರಿನ ವಿಷಯಗಳನ್ನು ತೀರ್ಮಾನಿಸಲು ಹಕ್ಕುಳ್ಳದ್ದಾಗಿರತಕ್ಕದ್ದು.

(8) ಆಯೋಗದ ಎಲ್ಲ ತೀರ್ಮಾನಗಳು, ನಿರ್ದೇಶನಗಳು ಮತ್ತು ಆದೇಶಗಳು ಲಿಖಿತದಲ್ಲಿರತಕ್ಕದ್ದು ಮತ್ತು ಸಮರ್ಥಿಸಲು ಕಾರಣಗಳನ್ನು ನೀಡತಕ್ಕದ್ದು. ಆಯೋಗದ ತೀರ್ಮಾನಗಳು, ನಿರ್ದೇಶನಗಳು ಮತ್ತು ಆದೇಶಗಳು, ಯಾವೊಬ್ಬ ವ್ಯಕ್ತಿಯೂ ಪರಿವೀಕ್ಷಿಸುವುದಕ್ಕೆ ಲಭ್ಯವಾಗಿರತಕ್ಕದ್ದು ಮತ್ತು ಅವುಗಳ ಪ್ರತಿಗಳನ್ನು, ಆಯೋಗವು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಲಭ್ಯವಾಗುವಂತೆ ಸಹ ಮಾಡತಕ್ಕದ್ದು.

**10. ಆಯೋಗದ ಅಧಿಕಾರಗಳು.**- (1) ಆಯೋಗವು, ಅಧಿನಿಯಮದ ಅಡಿಯಲ್ಲಿ ಯಾವುದೇ ವಿಚಾರಣೆ ಅಥವಾ ವ್ಯವಹರಣೆಗಳ ಉದ್ದೇಶಕ್ಕಾಗಿ ಈ ಮುಂದಿನ ವಿಷಯಗಳ ಸಂಬಂಧದಲ್ಲಿ ಒಂದು ದಾವೆಯ ವಿಚಾರಣೆ ನಡೆಸುವಾಗ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (ಕೇಂದ್ರ ಅಧಿನಿಯಮ 1908ರ 5) ಅಡಿಯಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾದ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಯಾವೊಬ್ಬ ಸಾಕ್ಷಿದಾರನಿಗೆ ಸಮನು ನೀಡುವುದು ಮತ್ತು ಅವನ ಹಾಜರಾತಿಯನ್ನು ಅಗತ್ಯಪಡಿಸುವುದು ಮತ್ತು ಅವನನ್ನು ಪ್ರಮಾಣಮಾಡಿಸುವ ಮೂಲಕ ಅವನ ವಿಚಾರಣೆ ನಡೆಸುವುದು;

(ಬಿ) ಸಾಕ್ಷ್ಯವಾಗಿ ಹಾಜರುಪಡಿಸತಕ್ಕ ಯಾವುದೇ ದಸ್ತಾವೇಜು ಅಥವಾ ಇತರ ಮುಖ್ಯ ವಸ್ತುವನ್ನು ಪತ್ತೆ ಮಾಡುವುದು ಮತ್ತು ಹಾಜರುಪಡಿಸುವುದು;

(ಸಿ) ಅಫಿಡಾವಿತ್ತಿನ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಯಾವುದೇ ನ್ಯಾಯಾಲಯ ಅಥವಾ ಕಛೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಕೋರುವುದು;

(ಇ) ಸಾಕ್ಷಿಗಳ ಪರೀಕ್ಷೆಗಾಗಿ ಕಮೀಷನ್‌ಗಳನ್ನು ಹೊರಡಿಸುವುದು;

(ಎಫ್) ಪಕ್ಷಕಾರರು ಹಾಜರಾಗುವುದು ಮತ್ತು ಹಾಜರಾಗದಿರುವ ಪರಿಣಾಮಗಳು;

(ಜಿ) ವಿಚಾರಣೆಯ ಕಾಲದಲ್ಲಿ ಮುಂದೂಡಿಕೆಗಾಗಿ ಅವಕಾಶ ನೀಡುವುದು; ಮತ್ತು

(ಹೆಚ್) ಅದರ ತೀರ್ಮಾನಗಳು, ನಿರ್ದೇಶನಗಳು ಮತ್ತು ಆದೇಶಗಳನ್ನು ಪುನರ್ ಪರಿಶೀಲಿಸುವುದು.

(2) ಆಯೋಗವು, ಯಾವೊಬ್ಬ ವ್ಯಕ್ತಿಯನ್ನು,-

(ಎ) ಈ ಅಧಿನಿಯಮದ ಉದ್ದೇಶಕ್ಕಾಗಿ ಅಥವಾ ಈ ಅಧಿನಿಯಮದ ಅಡಿಯಲ್ಲಿ ಆಯೋಗದ ಪ್ರಕಾರ್ಯಗಳ ನೆರವೇರಿಕೆಗಾಗಿ ಪರೀಕ್ಷಿಸುವುದು ಅಗತ್ಯವೆಂದು ಅಥವಾ ಸುಸಂಗತವೆಂದು ಆಯೋಗವು ಪರಿಗಣಿಸುವ ವಿದ್ಯುಚ್ಛಕ್ತಿಯ ಉತ್ಪಾದನೆ, ರವಾನೆ, ವಿತರಣೆ ಅಥವಾ ಸರಬರಾಜು ಅಥವಾ ಬಳಕೆಗೆ ಸಂಬಂಧಪಡುವ, ಮೇಲ್ಕಂಡ ಕ್ಷೇತ್ರಗಳನ್ನು ಒಳಗೊಂಡಿರುವ ಯಾವುದೇ ಉದ್ಯಮದ ಕಾರ್ಯ ನಿರ್ವಹಣೆಗೆ ಸಂಬಂಧಿಸಿದ ಯಾವುದೇ ವಿಷಯ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದ ಕೋರಿಕೆ ಪತ್ರದಲ್ಲಿ ನಿರ್ದಿಷ್ಟಪಡಿಸಬಹುದಾದ ಅಥವಾ ವಿವರಿಸಬಹುದಾದ ದಸ್ತಾವೇಜುಗಳಾಗಿರುವ ಹಾಗೆ ಅಗತ್ಯಪಡಿಸಲಾದ ವ್ಯಕ್ತಿಯು ತನ್ನ ಅಭಿರಕ್ಷೆಯಲ್ಲಿ ಅಥವಾ ನಿಯಂತ್ರಣದಲ್ಲಿ ಹೊಂದಿರುವ ಅಂಥ ಪುಸ್ತಕಗಳು, ಲೆಕ್ಕಪತ್ರಗಳು ಅಥವಾ ಇತರ ದಸ್ತಾವೇಜುಗಳನ್ನು ಈ ಸಂಬಂಧದಲ್ಲಿ ಆಯೋಗವು ನಿರ್ದಿಷ್ಟಪಡಿಸುವ ಒಬ್ಬ ಅಧಿಕಾರಿಯ ಮುಂದೆ ಹಾಜರುಪಡಿಸಲು ಮತ್ತು ಅವನು ಪರೀಕ್ಷಿಸಲು ಮತ್ತು ಇಟ್ಟುಕೊಳ್ಳಲು ಅವಕಾಶಕೊಡಲು, ಮತ್ತು

(ಬಿ) ಈ ಅಧಿನಿಯಮದ ಉದ್ದೇಶಗಳಿಗಾಗಿ ಅಗತ್ಯವಾಗಬಹುದಾದಂಥ ಮಾಹಿತಿಯನ್ನು ಅಥವಾ ಇತರ ಯಾವೊಬ್ಬ ವ್ಯಕ್ತಿಯು ನಡೆಸುವ ಯಾವುದೇ ಚಟುವಟಿಕೆಯ ಸಂಬಂಧದಲ್ಲಿ ತನ್ನ ಸ್ವಾಧೀನತೆಯಲ್ಲಿರಬಹುದಾದ ಅಂಥ ಇತರ ಮಾಹಿತಿಯನ್ನು ಹಾಗೆ ನಿರ್ದಿಷ್ಟಪಡಿಸಲಾದ ಅಧಿಕಾರಿಗೆ ಒದಗಿಸಲು,

-ಅಧಿಕಾರ ಹೊಂದಿರತಕ್ಕದ್ದು.

(3) ಸಾಕ್ಷ್ಯಗಳ ಹಾಜರಾತಿಯನ್ನು ಅಗತ್ಯಪಡಿಸುವ ಉದ್ದೇಶಕ್ಕಾಗಿ ಆಯೋಗದ ಅಧಿಕಾರವ್ಯಾಪ್ತಿಯ ಪರಿಮಿತಿಗಳು, ಭಾರತ ದೇಶದ ಪರಿಮಿತಿಗಳಾಗಿರತಕ್ಕದ್ದು.

(4) ಈ ಅಧಿನಿಯಮದ ಅಡಿಯಲ್ಲಿ ಯಾವುದೇ ವಿಚಾರಣೆ ಅಥವಾ ವ್ಯವಹರಣೆಗಳು ನಡೆಯುವ ಕಾಲದಲ್ಲಿ ಯಾವುದರ ಸಂಬಂಧದಲ್ಲಿ ಅಂಥ ವಿಚಾರಣೆಯನ್ನು ನಡೆಸಲಾಗುತ್ತಿದೆಯೋ ಆ ಯಾವುದೇ ಘಟಕದ ಅಥವಾ ವ್ಯಕ್ತಿಯ ಸಂಬಂಧದಲ್ಲಿ ಅಥವಾ ಅಂಥ ವಿಚಾರಣೆಯಲ್ಲಿ ಯಾವುದನ್ನು ಹಾಜರುಪಡಿಸಬೇಕೆಂದು ಅಗತ್ಯಪಡಿಸಲಾಗಿದೆಯೋ ಅಂಥ ಘಟಕದ ಮಾಲೀಕನ ಸಂಬಂಧದಲ್ಲಿ ಅದರ ಯಾವುದೇ ಪುಸ್ತಕ ಅಥವಾ ಕಾಗದ ಪತ್ರಗಳು ಅಥವಾ ದಸ್ತಾವೇಜುಗಳನ್ನು ನಾಶಪಡಿಸಲಾಗುತ್ತಿದೆ, ವಿರೂಪಗೊಳಿಸಲಾಗುತ್ತಿದೆ, ಬದಲಾಯಿಸಲಾಗುತ್ತಿದೆ, ಸುಳ್ಳಾಗಿ ತೋರಿಸಲಾಗುತ್ತಿದೆ ಅಥವಾ ಬಚ್ಚಿಡಲಾಗುತ್ತಿದೆ ಅಥವಾ ಹಾಗೆ ಮಾಡಬಹುದು ಎಂದು ನಂಬಲು ಆಯೋಗಕ್ಕೆ ಯಾವುದೇ ಕಾರಣಗಳಿದ್ದರೆ, ಅದು ಲಿಖಿತ ಆದೇಶದ ಮೂಲಕ ಆಯೋಗದ ಯಾವೊಬ್ಬ ಅಧಿಕಾರಿಗೆ ಕಂಪನಿಗಳ ಅಧಿನಿಯಮ, 1956ರ (ಕೇಂದ್ರ ಅಧಿನಿಯಮ 1956ರ 1) 240 ಮತ್ತು 240ಎ ಪ್ರಕರಣಗಳ ಅಡಿಯಲ್ಲಿ ಪರಿವೀಕ್ಷಣೆಗಾಗಿ ನೇಮಕನಾದ ಪರಿವೀಕ್ಷಕನು ಚಲಾಯಿಸಬಹುದಾದ ಪ್ರವೇಶದ, ಶೋಧನೆಯ ಮತ್ತು ವಶಪಡಿಸಿಕೊಳ್ಳುವ ಅಧಿಕಾರಗಳನ್ನು ಚಲಾಯಿಸಲು ಅಧಿಕಾರ ನೀಡಬಹುದು.

(5) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಆಯೋಗವು, ವಿಶೇಷ ಅಥವಾ ಸಾಮಾನ್ಯ ಆದೇಶದ ಮೂಲಕ, ಉತ್ಪಾದನಾ ಕಂಪನಿಗಳು, ಅಥವಾ ಲೈಸೆನ್ಸ್‌ಧಾರಕರೂ

ಸೇರಿದಂತೆ ಯಾವೊಬ್ಬ ವ್ಯಕ್ತಿಯನ್ನು, ವಿದ್ಯುಚ್ಛಕ್ತಿಯ ಉತ್ಪಾದನೆ, ರವಾನೆ, ವಿತರಣೆ ಮತ್ತು ಸರಬರಾಜು ಅಥವಾ ಬಳಕೆಗೆ ಸಂಬಂಧಪಟ್ಟ ಅಂಥ ವ್ಯಕ್ತಿಯು ನಡೆಸುವ ಚಟುವಟಿಕೆಗಳಿಗೆ ಸಂಬಂಧಪಡುವ ಯಾವುದೇ ಸಂಘಟನೆ ಮತ್ತು ವ್ಯವಹಾರ, ಉತ್ಪಾದನಾ ವೆಚ್ಚ ಮತ್ತು ನಿಯಮಿಸಬಹುದಾದ ಇತರ ಅವಶ್ಯಕತೆಗಳಿಗೆ ಸಂಬಂಧಿಸಿದ ಅಂಥ ಇತರ ಮಾಹಿತಿಯೂ ಸೇರಿದಂತೆ ಅಂಥ ವ್ಯಕ್ತಿ ಅಥವಾ ಇತರ ಯಾವೊಬ್ಬ ವ್ಯಕ್ತಿಯ ಅಥವಾ ಉದ್ಯಮದ ನಡುವಿನ ಸಂಬಂಧದ ಮಾಹಿತಿಯನ್ನು, ಈ ಅಧಿನಿಯಮದ ಅಡಿಯಲ್ಲಿ ಆಯೋಗವು ತನ್ನ ಪ್ರಕಾರ್ಯಗಳನ್ನು ನೆರವೇರಿಸಲು ಸಾಧ್ಯವಾಗುವಂತೆ ನಿಯತಕಾಲಿಕವಾಗಿ ಅಥವಾ ಅಗತ್ಯಪಡಿಸಿದಾಗಲೆಲ್ಲ ಆಯೋಗಕ್ಕೆ ಒದಗಿಸುವಂತೆ ಯಾವೊಬ್ಬ ವ್ಯಕ್ತಿಯನ್ನು ಆಯೋಗವು ಕೋರಬಹುದು.

(6) ಆಯೋಗವು ಯಾವೊಬ್ಬ ವ್ಯಕ್ತಿಯಿಂದ ಮಾಹಿತಿ, ವಿವರಗಳು, ಪುಸ್ತಕಗಳು, ಲೆಕ್ಕಪತ್ರಗಳು ಮತ್ತು ಇತರ ದಸ್ತಾವೇಜುಗಳನ್ನು ಕೋರಲು ಮತ್ತು ಅವುಗಳನ್ನು ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ, ಕೇಂದ್ರೀಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಅಥವಾ ಇತರ ಸರ್ಕಾರಿ ಪ್ರಾಧಿಕಾರಗಳಿಗೆ ಒದಗಿಸುವ ಉದ್ದೇಶಕ್ಕಾಗಿ ವಿಚಾರಣೆ ನಡೆಸುವುದಕ್ಕಾಗಿ ಮೇಲ್ಕಂಡ ಅಧಿಕಾರಗಳನ್ನು ಚಲಾಯಿಸಲು ಹಕ್ಕುಳ್ಳದ್ದಾಗಿರತಕ್ಕದ್ದು.

(7) ಆಯೋಗವು ತನ್ನ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ, ಆಯೋಗದ ತೀರ್ಮಾನಗಳಿಂದ ಬಾಧಿತರಾದ ಅಥವಾ ಬಾಧಿತರಾಗುವ ಸಂಭವವಿರುವ ಅಂಥ ವ್ಯಕ್ತಿಗಳನ್ನು ಅಥವಾ ವ್ಯಕ್ತಿಗಳ ಸಮೂಹವನ್ನು, ಆಯೋಗವು ಸೂಕ್ತವೆಂದು ಪರಿಗಣಿಸಬಹುದಾದಷ್ಟರ ಮಟ್ಟಿಗೆ ಸಮಾಲೋಚಿಸಲು ಹಕ್ಕುಳ್ಳದ್ದಾಗಿರತಕ್ಕದ್ದು ಮತ್ತು ಸಮಾಲೋಚಿಸತಕ್ಕದ್ದು.

(8) ಈ ಅಧಿನಿಯಮಕ್ಕನುಸಾರವಾಗಿ ಯಾರಿಗೆ ನೋಟೀಸುಗಳನ್ನು ನೀಡಬಹುದೋ ಆ ಎಲ್ಲ ವ್ಯಕ್ತಿಗಳು ಒದಗಿಸಬೇಕೆಂದು ಆಯೋಗವು ನಿರ್ದೇಶಿಸಿದ ಮಾಹಿತಿ, ವಿವರಗಳು, ಪುಸ್ತಕಗಳು, ಲೆಕ್ಕಪತ್ರಗಳು ಮತ್ತು ಇತರ ದಸ್ತಾವೇಜುಗಳನ್ನು ಯುಕ್ತವಾಗಿ, ವಿಶ್ವಾಸದಿಂದ ಮತ್ತು ಪರಿಣಾಮಕಾರಿಯಾಗಿ ಒದಗಿಸತಕ್ಕದ್ದು. ಆಯೋಗವು ನೀಡಿದ ಅಂಥ ಅಗತ್ಯತೆಗಳನ್ನು, ನಿರ್ದೇಶನಗಳು ಮತ್ತು ಆದೇಶಗಳನ್ನು ಪಾಲಿಸಲು ತಪ್ಪುವುದಕ್ಕಾಗಿ ಅಥವಾ ವಿಳಂಬಕ್ಕಾಗಿ ಆ ವ್ಯಕ್ತಿಗಳು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

(9) ಭಾರತ ವಿದ್ಯುಚ್ಛಕ್ತಿ ಅಧಿನಿಯಮ, 1910ರ 12ರಿಂದ 16ರ ವರೆಗಿನ ಪ್ರಕರಣಗಳಲ್ಲಿ (ಎರಡೂ ಪ್ರಕರಣಗಳೂ ಸೇರಿದಂತೆ) ಮತ್ತು 18 ಹಾಗೂ 19ನೇ ಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ವಿದ್ಯುಚ್ಛಕ್ತಿಯ ರವಾನೆ, ವಿತರಣೆ ಮತ್ತು ಸರಬರಾಜಿಗಾಗಿ, ವಿದ್ಯುಚ್ಛಕ್ತಿ ಸರಬರಾಜು ಮಾರ್ಗಗಳನ್ನು, ಸಾಧನಗಳು ಹಾಗೂ ಸಲಕರಣೆಗಳನ್ನು ಹಾಕುವುದಕ್ಕಾಗಿ, ಆಯೋಗವು, ಲಿಖಿತ ಆದೇಶದ ಮೂಲಕ, ಲೈಸೆನ್ಸ್‌ದಾರರ ಅಥವಾ ಅಧಿನಿಯಮದ ಅಡಿಯಲ್ಲಿ ಸಾರ್ವಜನಿಕರಿಗೆ ವಿದ್ಯುಚ್ಛಕ್ತಿ ರವಾನೆ, ವಿತರಣೆ ಅಥವಾ ಸರಬರಾಜು ಮಾಡುವ ವ್ಯವಹಾರದಲ್ಲಿ ತೊಡಗಿರುವ ಯಾವೊಬ್ಬ ಇತರ ವ್ಯಕ್ತಿಗೆ, ಆಯೋಗವು ಉಪಬಂಧ ಕಲ್ಪಿಸಬಹುದಾದಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೊಳಪಟ್ಟು, ಭಾರತ ಟೆಲಿಗ್ರಾಫ್ ಅಧಿನಿಯಮ, 1885ರ ಅಡಿಯಲ್ಲಿ ಟೆಲಿಗ್ರಾಫ್ ಮಾರ್ಗಗಳನ್ನು ಹಾಗೂ ಕಂಬಗಳನ್ನು ಹಾಕುವುದಕ್ಕೆ ಸಂಬಂಧಿಸಿದಂತೆ ಟೆಲಿಗ್ರಾಫ್ ಅಧಿಕಾರಿಯು ಹೊಂದಿರುವ ಅಧಿಕಾರಗಳ ಪೈಕಿ ಯಾವುವೇ ಅಧಿಕಾರಗಳನ್ನು ನೀಡಬಹುದು.

**11. ಆಯೋಗದ ಪ್ರಕಾರ್ಯಗಳು.-** (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಆಯೋಗವು ಇತರ ವಿಷಯಗಳೊಂದಿಗೆ ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸಲು ಹೊಣೆಯಾಗಿರತಕ್ಕದ್ದು:-

(ಎ) ವಿದ್ಯುಚ್ಛಕ್ತಿಯ ಖರೀದಿ, ವಿತರಣೆ, ಸರಬರಾಜು ಮತ್ತು ಬಳಕೆ, ಸೇವಾ ಗುಣಮಟ್ಟ, ಗ್ರಾಹಕರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಅದೇ ರೀತಿ ಸರಬರಾಜು ಮಾಡಿದ ವಿದ್ಯುಚ್ಛಕ್ತಿಗಾಗಿ, ಶುಲ್ಕಗಳನ್ನು ಸಾಕಷ್ಟಾಗಿ ವಿಧಿಸಿ ಸೂಕ್ತವಾಗಿ ಸಂಗ್ರಹಿಸಿದ ಹೊರತು ಸರಬರಾಜು ಮತ್ತು ವಿತರಣೆ ವ್ಯವಸ್ಥೆಯನ್ನು ನಿರ್ವಹಿಸಲಾಗದೆಂಬುದನ್ನು ಪರಿಗಣಿಸಿ, ಸಂದಾಯವಾಗತಕ್ಕ ದರ ಮತ್ತು ಶುಲ್ಕಗಳನ್ನು ನಿಯಂತ್ರಿಸುವುದು ;

(ಬಿ) ವಿಶೇಷವಾಗಿ ಸೇವಾ ಗುಣಮಟ್ಟ, ಮುಂದುವರಿಕೆ ಮತ್ತು ವಿಶ್ವಾಸಾರ್ಹತೆಯ ಸಂಬಂಧದಲ್ಲಿ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಸರಬರಾಜು ಕೈಗಾರಿಕೆಯಲ್ಲಿ ತೊಡಗಿದ ಘಟಕಗಳ ನಿರ್ವಹಣಾ ಮಟ್ಟ, ವಿದ್ಯುಚ್ಛಕ್ತಿಯ ಸಮರ್ಥ ಬಳಕೆ ಮತ್ತು ಸಂರಕ್ಷಣೆ, ಸೂಕ್ತ ಬೇಡಿಕೆ, ನಿರ್ವಹಣೆ ಮತ್ತು ವಿದ್ಯುಚ್ಛಕ್ತಿಯ ಬಳಕೆಯಲ್ಲಿ ಪೋಲಾಗುವುದನ್ನು ಮತ್ತು ನಷ್ಟವಾಗುವುದನ್ನು ಕಡಿಮೆ ಮಾಡುವುದೂ ಸೇರಿದಂತೆ ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಬಳಕೆಯಲ್ಲಿ ದಕ್ಷತೆ, ಮಿತವ್ಯಯ ಮತ್ತು ಸುರಕ್ಷತೆಯನ್ನು ಹೆಚ್ಚಿಸಲು ಮತ್ತು ಪೂರೈಸಬೇಕಾದ ವಿದ್ಯುಚ್ಛಕ್ತಿಗಾಗಿ ಎಲ್ಲ ಸೂಕ್ತ ಬೇಡಿಕೆಗಳನ್ನು ಪೂರೈಸಲು ಸಾಧ್ಯವಾಗುವಂತೆ ಮಾಡುವುದು ;

(ಸಿ) ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಲೈಸೆನ್ಸುಗಳನ್ನು ನೀಡುವುದು ಮತ್ತು ಲೈಸೆನ್ಸುಗಳಲ್ಲಿ ಒಳಗೊಂಡಿರಬೇಕಾದ ಷರತ್ತುಗಳನ್ನು ನಿರ್ಧರಿಸುವುದು ;

(ಡಿ) ಲೈಸೆನ್ಸುದಾರರ ಕಾರ್ಯನಿರ್ವಹಣೆಯನ್ನು ನಿರ್ವಹಿಸುವುದು ಮತ್ತು ಅವರ ಕಾರ್ಯವನ್ನು ದಕ್ಷವಾಗಿ, ಮಿತವ್ಯಯವಾಗಿ ಮತ್ತು ನ್ಯಾಯಸಮ್ಮತ ರೀತಿಯಲ್ಲಿ ನಿರ್ವಹಿಸುವಂತೆ ಉತ್ತೇಜಿಸುವುದು;

(ಇ) ರಾಜ್ಯದಲ್ಲಿರುವ ವಿದ್ಯುತ್ ಉದ್ಯಮಕ್ಕೆ ಸಂಬಂಧಪಡುವ ಅಥವಾ ಸಂಬಂಧಿಸಿದ ಆಸ್ತಿಗಳ, ಸ್ವತ್ತುಗಳ ಮತ್ತು ಸ್ವತ್ತುಗಳಲ್ಲಿಯ ಹಿತಾಸಕ್ತಿಗಳನ್ನು ನಿಯಂತ್ರಿಸುವುದು ;

(ಎಫ್) ರಾಜ್ಯದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ, ರವಾನೆ, ವಿತರಣೆ ಮತ್ತು ಸರಬರಾಜಿಗೆ ಸಂಬಂಧಪಡುವ ಎಲ್ಲ ವಿಷಯಗಳಲ್ಲಿ ನೆರವು ಮತ್ತು ಸಲಹೆ ನೀಡುವುದು ;

(ಜಿ) ಗ್ರಾಹಕರಿಗೆ ನ್ಯಾಯೋಚಿತ ಸೇವೆ ಒದಗಿಸುವುದನ್ನು ಖಚಿತಪಡಿಸಿಕೊಳ್ಳುವಾಗ ಖಾಸಗಿ ವಲಯವು ಸ್ಪರ್ಧಾತ್ಮಕವಾಗಿ ಮತ್ತು ಪ್ರಗತಿಪರವಾಗಿ ಪಾಲುಗೊಳ್ಳುವುದನ್ನು ಉತ್ತೇಜಿಸುವುದು ;

(ಹೆಚ್) ವಿದ್ಯುಚ್ಛಕ್ತಿಯ ಬೇಡಿಕೆ ಮತ್ತು ಬಳಕೆಯ ಸಂಬಂಧದಲ್ಲಿ ಅಂಕಿಅಂಶಗಳನ್ನು ಮತ್ತು ಮುನ್ಸೂಚನೆಗಳನ್ನು ಸಂಗ್ರಹಿಸುವುದು ಮತ್ತು ಲೈಸೆನ್ಸುಧಾರಕರು ಅಂಥ ಅಂಕಿಅಂಶಗಳನ್ನು ಮತ್ತು ಮುನ್ಸೂಚನೆಗಳನ್ನು ಸಂಗ್ರಹಿಸುವುದನ್ನು ಅಗತ್ಯಪಡಿಸುವುದು ;

(ಐ) ವಿದ್ಯುಚ್ಛಕ್ತಿಯ ಉತ್ಪಾದನೆ, ರವಾನೆ, ವಿತರಣೆ ಮತ್ತು ಸರಬರಾಜಿನ ಉದ್ದೇಶಕ್ಕಾಗಿ ಇತರರ ಸಮನ್ವಯದೊಡನೆ ಪೂರ್ವಭಾವಿ ಯೋಜನೆಗಳನ್ನು ಮತ್ತು ಸ್ಕೀಮುಗಳನ್ನು ರೂಪಿಸುವಂತೆ ಲೈಸೆನ್ಸುದಾರರನ್ನು ಅಗತ್ಯಪಡಿಸುವುದು ;

(ಜೆ) ರಾಜ್ಯದಲ್ಲಿರುವ ವಿದ್ಯುಚ್ಛಕ್ತಿ ಕೈಗಾರಿಕೆಗಾಗಿ ಸೂಕ್ತ ನಡತೆ ಸಂಹಿತೆಗಳನ್ನು ಮತ್ತು ಗುಣಮಟ್ಟಗಳನ್ನು ಮತ್ತು ಲೈಸೆನ್ಸುದಾರರು ಗ್ರಾಹಕರಿಗೆ ನೀಡುವ ಸೇವೆಗಳ ಗುಣ ಮಟ್ಟವನ್ನು ಸಿದ್ಧಪಡಿಸುವುದು ;

(ಕೆ) ಈ ಅಧಿನಿಯಮದ ಉಪಬಂಧಗಳಿಗನುಸಾರ ವಿವಾದಗಳ ಮತ್ತು ಲೈಸೆನ್ಸುದಾರರ ನಡುವಿನ ಭಿನ್ನಾಭಿಪ್ರಾಯಗಳ ವಿಷಯಗಳಲ್ಲಿ ಮಧ್ಯಸ್ಥಿಕೆ ವ್ಯವಸ್ಥೆ ಮಾಡುವುದು ಅಥವಾ ಮಧ್ಯಸ್ಥಗಾರನನ್ನು (ರನ್ನು) ನೇಮಕ ಮಾಡುವುದು ;

(ಎಲ್) ಪರಿಸರ ನಿಯಂತ್ರಕ ಏಜೆನ್ಸಿಗಳೊಂದಿಗೆ ಸಮನ್ವಯ ಸಾಧಿಸಲು ಮತ್ತು ರಾಜ್ಯದಲ್ಲಿ ವಿದ್ಯುಚ್ಛಕ್ತಿ ವಲಯದ ಮತ್ತು ಬಳಕೆಯ ಸಂಬಂಧದ ಸೂಕ್ತ ಪರಿಸರ ವಿನಿಯಮಗಳಿಗಾಗಿ ಕಾರ್ಯನೀತಿಗಳು ಹಾಗೂ ಕಾರ್ಯವಿಧಾನಗಳನ್ನು ರೂಪಿಸುವುದು ; ಮತ್ತು

(ಎಂ) ವಿದ್ಯುಚ್ಛಕ್ತಿ ವಲಯಕ್ಕೆ ಸಂಬಂಧಪಟ್ಟ ಎಲ್ಲ ಆನುಷಂಗಿಕ ಮತ್ತು ಸಹಾಯಕ ಪ್ರಕಾರ್ಯಗಳನ್ನು ಕೈಗೊಳ್ಳುವುದು.

(2) ಆಯೋಗವು, ಯಾವ ಧ್ಯೇಯಗಳು ಮತ್ತು ಉದ್ದೇಶಗಳಿಗಾಗಿ ಸ್ಥಾಪಿತವಾಗಿದೆಯೋ ಅವುಗಳಿಗೆ ಸುಸಂಗತವಾದ ರೀತಿಯಲ್ಲಿ ಒಂದು ಪ್ರತ್ಯೇಕ ಶಾಸನಾತ್ಮಕ ನಿಗಮಿತ ನಿಕಾಯವಾಗಿ ಆಯೋಗವು ಯಾವಾಗಲೂ ಕಾರ್ಯನಿರ್ವಹಿಸತಕ್ಕದ್ದು ಮತ್ತು ಆಯೋಗದ ಎಲ್ಲ ಕೃತ್ಯಗಳು, ತೀರ್ಮಾನಗಳು ಮತ್ತು ಆದೇಶಗಳು ಅಂಥ ಧ್ಯೇಯಗಳು ಮತ್ತು ಉದ್ದೇಶಗಳನ್ನು ಸಾಧಿಸುವುದಕ್ಕೆ ಅನುಸಾರವಾಗಿರತಕ್ಕದ್ದು ಮತ್ತು ಅವುಗಳನ್ನು ಸಾಧಿಸಲು ಯತ್ನಿಸತಕ್ಕದ್ದು.

(3) ವಿದ್ಯುಚ್ಛಕ್ತಿ ಅಧಿನಿಯಮ, 1910ರ (ಕೇಂದ್ರ ಅಧಿನಿಯಮ 1910ರ 9) 52ನೇ ಪ್ರಕರಣದ ಉಪಬಂಧಗಳಲ್ಲಿ ಅಥವಾ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ ಪ್ರಕರಣ 3(i), (ii) ಮತ್ತು ಪ್ರಕರಣ 76ರಲ್ಲಿ ಏನೇ ಇದ್ದರೂ ಆಯೋಗವು, ವಿನಿಯಮಗಳಿಗನುಸಾರವಾಗಿ, ಲೈಸೆನ್ಸ್‌ದಾರರ ನಡುವೆ ಉದ್ಭವಿಸುವ ವಿವಾದಗಳ ಬಗ್ಗೆ ನ್ಯಾಯ ನಿರ್ಣಯ ಮಾಡಲು ಮತ್ತು ಇತ್ಯರ್ಥಗೊಳಿಸಲು ಮಧ್ಯಸ್ಥಗಾರನಾಗಿ ಕಾರ್ಯನಿರ್ವಹಿಸಲು ಅಥವಾ ಮಧ್ಯಸ್ಥಗಾರನನ್ನು ಅಥವಾ ಮಧ್ಯಸ್ಥಗಾರರನ್ನು ನಾಮನಿರ್ದೇಶಿಸಲು ಅಧಿಕಾರ ಹೊಂದಿರತಕ್ಕದ್ದು ಮತ್ತು ಈ ಅಧಿನಿಯಮದ ಅಡಿಯಲ್ಲಿ ನೀಡಲಾಗುವ ಎಲ್ಲ ಲೈಸೆನ್ಸುಗಳಲ್ಲಿ ಇದು ಒಂದು ಷರತ್ತಾಗಿರತಕ್ಕದ್ದು.

## ಭಾಗ IV

## ರಾಜ್ಯ ಸರ್ಕಾರದ ಅಧಿಕಾರಗಳು

**12. ರಾಜ್ಯ ಸರ್ಕಾರದ ಸಾಮಾನ್ಯ ಅಧಿಕಾರಗಳು.-** (1) ರಾಜ್ಯ ಸರ್ಕಾರವು, ಒಟ್ಟಾರೆ ಯೋಜನೆ ರೂಪಿಸುವುದು ಮತ್ತು ಸಮನ್ವಯವೂ ಸೇರಿದಂತೆ, ರಾಜ್ಯದಲ್ಲಿ ವಿದ್ಯುಚ್ಛಕ್ತಿಗೆ ಸಂಬಂಧಪಡುವ ಎಲ್ಲ ವಿಷಯಗಳ ಮೇಲೆ ಕಾರ್ಯನೀತಿ ನಿರ್ದೇಶನಗಳನ್ನು ನೀಡಲು ಅಧಿಕಾರ ಹೊಂದಿರತಕ್ಕದ್ದು :

ಪರಂತು, ಅಂಥ ಕಾರ್ಯನೀತಿ ನಿರ್ದೇಶನಗಳು, ಈ ಅಧಿನಿಯಮದ ಮೂಲಕ ಸಾಧಿಸಬೇಕಾದ ಧ್ಯೇಯಗಳಿಗೆ ಸುಸಂಗತವಾಗಿರತಕ್ಕದ್ದು ಮತ್ತು ಅದಕ್ಕನುಸಾರವಾಗಿ ಗ್ರಾಹಕರ ವಿವಿಧ ವರ್ಗಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವುದಕ್ಕಾಗಿ ದರಗಳ ಸ್ವರೂಪದ ನಿರ್ಧರಣೆಯೂ ಸೇರಿದಂತೆ, ಆದರೆ ನಿರ್ಧರಣೆಗೆ ಸೀಮಿತವಾಗದಂತೆ, ಆಯೋಗದ ಪ್ರಕಾರ್ಯಗಳಿಗೆ ಮತ್ತು ಅಧಿಕಾರಗಳಿಗೆ ಪ್ರತಿಕೂಲವಾಗಿ ಪರಿಣಮಿಸತಕ್ಕದ್ದಲ್ಲ ಅಥವಾ ಅಡ್ಡಿಬರತಕ್ಕದ್ದಲ್ಲ:

ಮತ್ತು ಪರಂತು, ರಾಜ್ಯ ಸರ್ಕಾರವು ಭಾಗ VIIIರ ಅಡಿಯಲ್ಲಿ ನಿರ್ಧರಿಸಿದ ದರದಲ್ಲಿ (ಟ್ಯಾರಿಫ್) ಯಾವೊಬ್ಬ ಗ್ರಾಹಕನಿಗೆ ಅಥವಾ ಗ್ರಾಹಕರ ವರ್ಗಕ್ಕೆ ಸಹಾಯಧನ ನೀಡಲು ಅಗತ್ಯಪಡಿಸಿದರೆ, ರಾಜ್ಯ ಸರ್ಕಾರವು, ಸಹಾಯಧನ ನೀಡಿಕೆಯಿಂದ ಬಾಧಿತನಾದ ವ್ಯಕ್ತಿಗೆ ಪರಿಹಾರವಾಗಿ, ಆಯೋಗವು ನಿರ್ದೇಶಿಸಬಹುದಾದ ರೀತಿಯಲ್ಲಿ, ರಾಜ್ಯ ಸರ್ಕಾರವು ಒದಗಿಸಿದ ಸಹಾಯಧನವನ್ನು ಅನುಷ್ಠಾನಗೊಳಿಸಲು, ಲೈಸೆನ್ಸ್‌ದಾರನಿಗೆ ಅಥವಾ ಯಾರೇ ಇತರ ವ್ಯಕ್ತಿಗೆ, ಒಂದು ಷರತ್ತಾಗಿ ಮೊಬಲಗನ್ನು ಸಂದಾಯ ಮಾಡತಕ್ಕದ್ದು.

[1][ಮತ್ತು ಪರಂತು, ನಿರ್ದಿಷ್ಟಪಡಿಸಿದ ಗ್ರಾಹಕರು ಅಥವಾ ಗ್ರಾಹಕರ ವರ್ಗಕ್ಕಾಗಿ ರಾಜ್ಯ ಸರ್ಕಾರವು ಪ್ರಕಟಿಸಿದ ನೀತಿಯನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರವು ಎರಡನೆಯ ಪರಂತುಕದ ಅಡಿಯಲ್ಲಿ ಸಂದಾಯ ಮಾಡತಕ್ಕ ಮೊಬಲಗನ್ನು ಹಾಗೂ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಹಾಗೂ ಅಂಥ ಮೊಬಲಗನ್ನು ಯಾವ ಸಮಯದೊಳಗೆ ಸಂದಾಯ ಮಾಡಬೇಕೆಂಬುದನ್ನು ಆಯೋಗವು ನಿರ್ಧರಿಸತಕ್ಕದ್ದು.][1]

1. 2001ರ ಅಧಿನಿಯಮ ಸಂಖ್ಯೆ 26ರ ಮೂಲಕ ದಿನಾಂಕ 10-11-2001 ರಿಂದ ಸೇರಿಸಲಾಗಿದೆ (ಅಧಿಸೂಚನೆ ಸಂಖ್ಯೆ ಡಿಇ 61 ಪಿ ಎಸ್ ಆರ್ 2001, ದಿನಾಂಕ 9-11-2001 ರನ್ವಯ)

(2) ಅಧಿನಿಯಮಿತಿಗೊಳಿಸಲಾದ ಯಾವುವೇ ಶಾಸನಾತ್ಮಕ ಪ್ರಸ್ತಾವನೆಗಳು ವಿದ್ಯುಚ್ಛಕ್ತಿ ವಲಯಕ್ಕೆ ಬಾಧಕವಾಗಿರುವ ಸಂದರ್ಭದಲ್ಲಿ ರಾಜ್ಯ ಸರ್ಕಾರವು ಆಯೋಗದೊಡನೆ ಸಮಾಲೋಚಿಸತಕ್ಕದ್ದು ಮತ್ತು ಅಂಥ ಸೂಕ್ತ ಕಾಲದೊಳಗೆ ಆಯೋಗವು ಯಾವುದೇ ಶಿಫಾರಸ್ಸನ್ನು ಮಾಡಿದ್ದರೆ, ಅದನ್ನು ಯಥೋಚಿತವಾಗಿ ಪರಿಗಣಿಸತಕ್ಕದ್ದು.

## ಭಾಗ V

## ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಪುನರ್‌ರಚನೆ ಮತ್ತು ಮಂಡಲಿಯ ಪ್ರಕಾರ್ಯಗಳ ವರ್ಗಾವಣೆ, ಸ್ವತ್ತುಗಳ, ದಾಯಿತ್ವಗಳ ವರ್ಗಾವಣೆ ಇತ್ಯಾದಿ

**13. ಕರ್ನಾಟಕ ವಿದ್ಯುಚ್ಛಕ್ತಿ ರವಾನೆ ನಿಗಮ.-** (1) ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಅರವತ್ತು ದಿನಗಳೊಳಗೆ ರಾಜ್ಯ ಸರ್ಕಾರವು ಕಂಪನಿಗಳ ಅಧಿನಿಯಮ, 1956ರ ಉಪಬಂಧಗಳ ಅಡಿಯಲ್ಲಿ, ಕರ್ನಾಟಕ ವಿದ್ಯುಚ್ಛಕ್ತಿ ರವಾನೆ ನಿಗಮ (ಕೆ.ಪಿ.ಟಿ.ಸಿ.) ಎಂದು ಕರೆಯಲಾಗುವ, ವಿದ್ಯುಚ್ಛಕ್ತಿಯ ಖರೀದಿ, ರವಾನೆ, ಮಾರಾಟ ಮತ್ತು ಸರಬರಾಜಿನ ವ್ಯವಹಾರದಲ್ಲಿ ತೊಡಗುವ ಪ್ರಧಾನ ಉದ್ದೇಶಗಳೊಡನೆ, ಒಂದು ಕಂಪನಿಯನ್ನು ನಿಗಮಿತಗೊಳಿಸತಕ್ಕದ್ದು.

(2) 12ನೇ ಪ್ರಕರಣಕ್ಕೊಳಪಟ್ಟು, ಕರ್ನಾಟಕ ವಿದ್ಯುಚ್ಛಕ್ತಿ ರವಾನೆ ನಿಗಮವು (ಕೆ.ಪಿ.ಟಿ.ಸಿ.), ವಿದ್ಯುಚ್ಛಕ್ತಿಗೆ ಸಂಬಂಧಪಡುವ ಎಲ್ಲ ಯೋಜನೆಗಳನ್ನು ಮತ್ತು ಸಮನ್ವಯ ಕಾರ್ಯಗಳನ್ನು ಕೈಕೊಳ್ಳುವ ಪ್ರಧಾನ ಕಂಪನಿಯಾಗಿರತಕ್ಕದ್ದು. ಕೆ.ಪಿ.ಟಿ.ಸಿ.ಯು, ವಿದ್ಯುಚ್ಛಕ್ತಿ ಉತ್ಪಾದಿಸುವ ಕಂಪನಿಗಳು, ರಾಜ್ಯ ಸರ್ಕಾರ, ಆಯೋಗ, ಪ್ರಾದೇಶಿಕ ವಿದ್ಯುಚ್ಛಕ್ತಿ ಮಂಡಳಿ ಮತ್ತು ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರದ ಸಮನ್ವಯದೊಡನೆ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಅಗತ್ಯತೆಗಳನ್ನು ನಿರ್ಧರಿಸಿ ವಿದ್ಯುಚ್ಛಕ್ತಿ ರವಾನೆ ಮತ್ತು ವಿದ್ಯುಚ್ಛಕ್ತಿ ರವಾನೆಗೆ ಸಂಬಂಧಪಟ್ಟ ಕಾರ್ಯವನ್ನು ಕೈಗೊಳ್ಳುವ ಪ್ರಧಾನ ಕಂಪನಿ ಸಹ ಆಗಿರತಕ್ಕದ್ದು.

(3) ಕೆಪಿಟಿಸಿಯು, ಹೆಚ್ಚಿನ ಅಧಿಕ ವೋಲ್ಟೇಜ್ ರವಾನೆ ವ್ಯವಸ್ಥೆಯ [1][ಕಾರ್ಯಾಚರಣೆಗಳಿಗೆ XXX][1] ಹೊಣೆಯಾಗಿರತಕ್ಕದ್ದು ಮತ್ತು ದಕ್ಷ ರೀತಿಯಲ್ಲಿ ವಿದ್ಯುಚ್ಛಕ್ತಿ ವ್ಯವಸ್ಥೆಯನ್ನು ನಿರ್ವಹಣೆ ಮಾಡತಕ್ಕದ್ದು.

1. 2001ರ ಅಧಿನಿಯಮ ಸಂಖ್ಯೆ 26ರ ಮೂಲಕ ದಿನಾಂಕ 10-11-2001ರಿಂದ ಬಿಟ್ಟುಬಿಡಲಾಗಿದೆ.

(4) ಕೆಪಿಟಿಸಿಯು, ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರಕಾರ್ಯಗಳನ್ನು ಮತ್ತು ಈ ಅಧಿನಿಯಮದ ಅಡಿಯಲ್ಲಿ ಆಯೋಗವು ಅದಕ್ಕೆ ನೀಡುವ ಲೈಸೆನ್ಸಿನ ಅಡಿಯಲ್ಲಿ ಅದಕ್ಕೆ ವಹಿಸಿಕೊಡಬಹುದಾದ ಅಂಥ ಇತರ ಪ್ರಕಾರ್ಯಗಳನ್ನು ಕೈಕೊಳ್ಳತಕ್ಕದ್ದು.

(5) VIIನೇ ಅಧ್ಯಾಯದ ಅಡಿಯಲ್ಲಿ ಕೆಪಿಟಿಸಿಗೆ ಲೈಸೆನ್ಸ್ ನೀಡಿದ ತರುವಾಯ, ಕೆಪಿಟಿಸಿಯು, ಲೈಸೆನ್ಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910 ಮತ್ತು ವಿದ್ಯುಚ್ಛಕ್ತಿ

(ಸರಬರಾಜು) ಅಧಿನಿಯಮ, 1948ರ ಅಥವಾ ಅವುಗಳ ಅಡಿಯಲ್ಲಿ ರಚಿತವಾದ ನಿಯಮಗಳ ಅಡಿಯಲ್ಲಿ ಅಧಿಕಾರಗಳು, ಕರ್ತವ್ಯಗಳು ಹಾಗೂ ಪ್ರಕಾರ್ಯಗಳೂ ಸೇರಿದಂತೆ, ಅಂಥ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ಹಾಗೆ ವಹಿಸಿಕೊಡಲಾದ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ಕೈಕೊಳ್ಳುವುದು ಮತ್ತು ಯಥೋಚಿತವಾಗಿ ನೆರವೇರಿಸುವುದು ಕೆಪಿಟಿಸಿಯ ಬಾಧ್ಯತೆಯಾಗಿರತಕ್ಕದ್ದು.

(6) (1), (2) ಮತ್ತು (3)ನೇ ಉಪ ಪ್ರಕರಣಗಳಿಗೊಳಪಟ್ಟು ಮತ್ತು ಕೆಪಿಟಿಸಿಯ ಒಟ್ಟಾರೆ ಮೇಲ್ವಿಚಾರಣೆ ಮತ್ತು ನಿಯ0ತ್ರಣಕ್ಕೊಳಪಟ್ಟು, ಅಧೀನ ಅಥವಾ ಸಹಭಾಗಿಯಾದ ಅನೇಕ ವಿದ್ಯುಚ್ಛಕ್ತಿ ರವಾನೆ [1][xxx][1] ಕ0ಪನಿಗಳನ್ನು ರಾಜ್ಯದಲ್ಲಿ ಸ್ಥಾಪಿಸಬಹುದು ಮತ್ತು ಆಯೋಗವು ಕೆಪಿಟಿಸಿಯೊಡನೆ ಸಮಾಲೋಚಿಸಿ, ಈ ಅಧಿನಿಯಮದ ನಿಬ0ಧನೆಗಳ ಅಡಿಯಲ್ಲಿ ಅ0ಥ ವಿದ್ಯುಚ್ಛಕ್ತಿ ರವಾನೆ [1][xxx][1] ಕ0ಪನಿಗಳಿಗೆ ಲೈಸೆನ್ಸನ್ನು ನೀಡಬಹುದು.

1. 2001ರ ಅಧಿನಿಯಮ ಸಂಖ್ಯೆ 26ರ ಮೂಲಕ ದಿನಾಂಕ 10-11-2001ರಿಂದ ಬಿಟ್ಟುಬಿಡಲಾಗಿದೆ.

**14. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಪುನರ್‌ರಚನೆ.-** (1) ಈ ಅಧಿನಿಯಮದ ಧ್ಯೇಯಗಳು ಮತ್ತು ಉದ್ದೇಶಗಳನ್ನು ಜಾರಿಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರವು ಸಿದ್ಧಪಡಿಸಿದ ವರ್ಗಾವಣೆ ಯೋಜನೆಯು ಪ್ರಕಟವಾದ ದಿನಾಂಕದಂದು ಮತ್ತು ದಿನಾಂಕದಿಂದ ಅಥವಾ ನಿಯಮಿಸಬಹುದಾದ ಅಂಥ ಮುಂದಿನ ದಿನಾಂಕದಿಂದ (ಇದರಲ್ಲಿ ಇನ್ನು ಮುಂದೆ ಪ್ರಥಮ ವರ್ಗಾವಣೆಯ ಜಾರಿ ದಿನಾಂಕವೆಂದು ಉಲ್ಲೇಖಿಸಲಾಗಿದೆ) ಪ್ರಥಮ ವರ್ಗಾವಣೆಯು ಜಾರಿಯಾದ ದಿನಾಂಕಕ್ಕೆ ಮೊದಲು, ಮಂಡಲಿಗೆ ಸೇರಿದ ಯಾವುದೇ ಸ್ವತ್ತು, ಸ್ವತ್ತಿನಲ್ಲಿಯ ಹಿತಾಸಕ್ತಿ, ಹಕ್ಕುಗಳು ಮತ್ತು ಹೊಣೆಗಾರಿಕೆಗಳು, ರಾಜ್ಯ ಸರ್ಕಾರ ಮತ್ತು ಮಂಡಲಿಯ ನಡುವೆ ಒಪ್ಪಿಕೊಳ್ಳಬಹುದಾದ ಅಂಥ ನಿಬಂಧನೆಗಳ ಮೇಲೆ ರಾಜ್ಯ ಸರ್ಕಾರದಲ್ಲಿ ನಿಹಿತವಾಗತಕ್ಕದ್ದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರದಲ್ಲಿ ನಿಹಿತವಾದ ಯಾವುದೇ ಸ್ವತ್ತು, ಸ್ವತ್ತಿನಲ್ಲಿಯ ಹಿತಾಸಕ್ತಿ, ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಅಥವಾ ಅದರ ಭಾಗವನ್ನು, ರಾಜ್ಯ ಸರ್ಕಾರವು ಕೆಪಿಟಿಸಿಯಲ್ಲಿ ಅಥವಾ ಯಾವುದೇ ವಿದ್ಯುಚ್ಛಕ್ತಿ ಉತ್ಪಾದನಾ ಕಂಪನಿಯಲ್ಲಿ ಅಥವಾ ಕಂಪನಿಗಳಲ್ಲಿ, (1)ನೇ ಉಪ ಪ್ರಕರಣದ ಅಡಿಯಲ್ಲಿ ಪ್ರಕಟವಾದ ವರ್ಗಾವಣೆ ಯೋಜನೆಗನುಸಾರ, ಅಂಥ ಯೋಜನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ರಾಜ್ಯ ಸರ್ಕಾರದ ಅಂಥ ಇತರ ಸ್ವತ್ತು, ಹಕ್ಕು ಮತ್ತು ಹೊಣೆಗಾರಿಕೆಗಳೊಡನೆ, ರಾಜ್ಯ ಸರ್ಕಾರ ಮತ್ತು ಕೆಪಿಟಿಸಿ ಅಥವಾ ಯಾವುದೇ ವಿದ್ಯುಚ್ಛಕ್ತಿ ಉತ್ಪಾದನಾ ಕಂಪನಿ ಅಥವಾ ಸಂದರ್ಭಾನುಸಾರ ಕಂಪನಿಗಳ ನಡುವೆ ಒಪ್ಪಿಕೊಳ್ಳಬಹುದಾದ ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಪುನಃ ನಿಹಿತಗೊಳಿಸಬಹುದು.

(3) ಮಂಡಲಿಯು, ಕೆಪಿಟಿಸಿಗೆ ಸ್ವತ್ತು ಮುಂತಾದುವುಗಳ ಪ್ರಥಮ ವರ್ಗಾವಣೆಯ ಜಾರಿ ದಿನಾಂಕದಿಂದ ವಿಘಟಿತವಾಗತಕ್ಕದ್ದು. ಮಂಡಲಿಯ ಅಧ್ಯಕ್ಷರು ಮತ್ತು ಸದಸ್ಯರು ತಮ್ಮ ಹುದ್ದೆಗಳನ್ನು ಖಾಲಿಮಾಡಿರುವುದಾಗಿ ಭಾವಿಸತಕ್ಕದ್ದು. ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910 ಅಥವಾ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948 ಅಥವಾ ಅವುಗಳ ಅಡಿಯಲ್ಲಿ ರಚಿತವಾದ ನಿಯಮಗಳ ಅಡಿಯಲ್ಲಿಯ, ಅಂಥ ಪ್ರಕಾರ್ಯಗಳನ್ನು, ಕರ್ತವ್ಯಗಳನ್ನು, ಹಕ್ಕುಗಳನ್ನು ಮತ್ತು ಚಲಾಯಿಸತಕ್ಕ ಅಧಿಕಾರಗಳನ್ನು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ, ಪ್ರಥಮ ವರ್ಗಾವಣೆಯ ಜಾರಿ ದಿನಾಂಕದಿಂದ ಸಂದರ್ಭಾನುಸಾರ ಕೆಪಿಟಿಸಿ ಅಥವಾ ಯಾವುದೇ ವಿದ್ಯುಚ್ಛಕ್ತಿ ಉತ್ಪಾದನಾ ಕಂಪನಿ ಅಥವಾ ಕಂಪನಿಗಳು ಚಲಾಯಿಸಬಹುದಾದವುಗಳಾಗಿರತಕ್ಕದ್ದು.

(4) ಈ ಪ್ರಕರಣದಲ್ಲಿ ಏನೇ ಇದ್ದರೂ ಸಹ,-

(ಎ) ವರ್ಗಾವಣೆ ಯೋಜನೆಯು, ಯಾರೇ ವ್ಯಕ್ತಿಗೆ ಅಥವಾ ರಾಜ್ಯ ಸರ್ಕಾರದ ಸಂಪೂರ್ಣ ಸ್ವಾಮ್ಯದಲ್ಲಿಲ್ಲದ ಉದ್ಯಮಕ್ಕೆ ಯಾವುದೇ ಸ್ವತ್ತಿನ ಅಥವಾ ಹಕ್ಕುಗಳ ವರ್ಗಾವಣೆಯನ್ನು ಒಳಗೊಂಡಿದ್ದಲ್ಲಿ, ವರ್ಗಾವಣೆ ಪಡೆದವನು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡಬೇಕಾದ ನ್ಯಾಯೋಚಿತ ಬೆಲೆಗಾಗಿ ಮಾತ್ರ ವರ್ಗಾವಣೆಯನ್ನು ಜಾರಿಗೊಳಿಸತಕ್ಕದ್ದು, ಮತ್ತು

(ಬಿ) ವರ್ಗಾವಣೆ ಯೋಜನೆಗನುಸಾರವಾಗಿ ಯಾವುದೇ ಸ್ವರೂಪದ ವ್ಯವಹಾರವನ್ನು ಮಾಡಿದಲ್ಲಿ, ಮೂರನೇ ಪಕ್ಷಕಾರರೂ ಸೇರಿದಂತೆ ಎಲ್ಲ ವ್ಯಕ್ತಿಗಳಿಗೆ ಬಂಧಕವಾಗತಕ್ಕದ್ದು.

(5) ರಾಜ್ಯ ಸರ್ಕಾರವು, ಕೆಪಿಟಿಸಿಯೊಡನೆ [1][ಅಥವಾ ಸಂದರ್ಭಾನುಸಾರ ಲೈಸೆನ್ಸ್‌ದಾರನೊಡನೆ][1] ಸಮಾಲೋಚಿಸಿದ ತರುವಾಯ, ಈ ಪ್ರಕರಣದ ಅಡಿಯಲ್ಲಿ ಕೆಪಿಟಿಸಿಯಲ್ಲಿ [1][ಅಥವಾ ಸಂದರ್ಭಾನುಸಾರ ಲೈಸೆನ್ಸ್‌ದಾರನಲ್ಲಿ][1] ನಿಹಿತವಾದ ವಿತರಣಾ ಪ್ರಕಾರ್ಯಗಳು, ಯಾವುದೇ ಸ್ವತ್ತು, ಸ್ವತ್ತಿನಲ್ಲಿಯ ಹಿತಾಸಕ್ತಿ, ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಸೇರಿದಂತೆ ಯಾವುದೇ ಪ್ರಕಾರ್ಯವನ್ನು ಹೆಚ್ಚಿನ ಲೈಸೆನ್ಸ್‌ದಾರನಿಗೆ (ವರ್ಗಾವಣೆ ಪಡೆದ ಲೈಸೆನ್ಸ್‌ದಾರ) ವರ್ಗಾವಣೆ ಯೋಜನೆಯನ್ನು ರೂಪಿಸಬಹುದು ಮತ್ತು ಈ ಅಧಿನಿಯಮದ ಅಡಿಯಲ್ಲಿ ವರ್ಗಾವಣೆ ಯೋಜನೆಯಂತೆ ಅದನ್ನು ಪ್ರಕಟಿಸಬಹುದು. ಈ ಉಪ ಪ್ರಕರಣದ ಅಡಿಯಲ್ಲಿ ಅಧಿಸೂಚಿಸಬೇಕಾದ ವರ್ಗಾವಣೆಯು, (2)ನೇ ಉಪ-ಪ್ರಕರಣದ ಅಡಿಯಲ್ಲಿ ವರ್ಗಾವಣೆ ಯೋಜನೆಯಂತೆ ಪರಿಣಾಮಕಾರಿ ಯಾಗಿರತಕ್ಕದ್ದು ಮತ್ತು ನಿರ್ದಿಷ್ಟಪಡಿಸಲಾದ ದಿನಾಂಕದಿಂದ (ಎರಡನೇ ವರ್ಗಾವಣೆ ಜಾರಿ ದಿನಾಂಕ) ಪರಿಣಾಮಕಾರಿಯಾಗಿರತಕ್ಕದ್ದು.

1. 2005ರ 4ನೇ ಅಧಿನಿಯಮದ ಮೂಲಕ ದಿನಾಂಕ: 24.12.2004 ರಿಂದ ಸೇರಿಸಲಾಗಿದೆ

(6) ಈ ಪ್ರಕರಣದ ಅಡಿಯಲ್ಲಿ ವರ್ಗಾವಣೆ ಯೋಜನೆಯು ಇತರ ವಿಷಯಗಳೊಂದಿಗೆ,-

(ಎ) (i) ಪ್ರಶ್ನಿತ ಸ್ವತ್ತು, ಹಕ್ಕುಗಳು ಮತ್ತು ಹೊಣೆಗಾರಿಕೆಗಳನ್ನು ನಿರ್ದಿಷ್ಟಪಡಿಸುವ ಅಥವಾ ವಿವರಿಸುವ ಮೂಲಕ;

(ii) ವರ್ಗಾವಣೆ ಮಾಡುವವನ ಉದ್ಯಮದ ನಿರ್ದಿಷ್ಟಪಡಿಸಿದ ಭಾಗದಲ್ಲಿ ಒಳಗೊಂಡಿರುವ ಎಲ್ಲ ಸ್ವತ್ತು, ಸ್ವತ್ತಿನಲ್ಲಿಯ ಹಿತಾಸಕ್ತಿ, ಹಕ್ಕುಗಳು ಮತ್ತು ಹೊಣೆಗಾರಿಕೆಗಳಿಗೆ ಉಲ್ಲೇಖಿಸುವ ಮೂಲಕ;

(iii) ಭಾಗಶಃ ಒಂದು ರೀತಿಯಲ್ಲಿ ಮತ್ತು ಭಾಗಶಃ ಇನ್ನೊಂದು ರೀತಿಯಲ್ಲಿ,

ಹಂಚಿಕೆ ಮಾಡಬೇಕಾದ ಸ್ವತ್ತು, ಸ್ವತ್ತಿನಲ್ಲಿಯ ಹಿತಾಸಕ್ತಿ, ಹಕ್ಕುಗಳು ಮತ್ತು ಹೊಣೆಗಾರಿಕೆಗಳ ಸಂಬಂಧದಲ್ಲಿ ಅರ್ಥ ವಿವರಣೆ ಮಾಡಬಹುದು;

(ಬಿ) ಯೋಜನೆಯಲ್ಲಿ ನಿರ್ದಿಷ್ಟಪಡಿಸಿದ ಅಥವಾ ವಿವರಿಸಿದ ಯಾವುವೇ ಹಕ್ಕುಗಳನ್ನು ಅಥವಾ ಹೊಣೆಗಾರಿಕೆಗಳನ್ನು ಸಂದರ್ಭಾನುಸಾರ ವರ್ಗಾವಣೆ ಮಾಡಿದವನು ಅಥವಾ ವರ್ಗಾವಣೆ ಪಡೆದವನು ಜಾರಿಗೊಳಿಸತಕ್ಕದ್ದು ಅಥವಾ ಅವನ ವಿರುದ್ಧ ಜಾರಿಗೊಳಿಸತಕ್ಕದ್ದೆಂದು ಉಪಬಂಧ ಕಲ್ಪಿಸಬಹುದು ;

(ಸಿ) ಈ ಯೋಜನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ಯಾರೇ ವ್ಯಕ್ತಿಯೊಡನೆ ಅಂಥ ಲಿಖಿತ ಒಪ್ಪಂದಗಳನ್ನು ಮಾಡಿಕೊಳ್ಳಲು ಅಥವಾ ಅವನ ಪರವಾಗಿ ಅಂಥ ಇತರ ಲಿಖಿತ ಪ್ರಶ್ನೆಗಳನ್ನು ಬರೆದುಕೊಡಲು, ಕೆಪಿಟಿಸಿಯ ಅಥವಾ ಲೈಸೆನ್ಸ್‌ದಾರನ ಮೇಲೆ ಒಂದು ಹೊಣೆಗಾರಿಕೆಯನ್ನು ವಿಧಿಸತಕ್ಕದ್ದು;

(ಡಿ) ಕೆಪಿಟಿಸಿಯೊಡನೆ, ವಿದ್ಯುಚ್ಛಕ್ತಿ ಪಡೆದುಕೊಳ್ಳುವುದಕ್ಕೆ ಮತ್ತು ಖರೀದಿ ಒಪ್ಪಂದಗಳಿಗೆ ಸಂಬಂಧಪಡುವ ಹೊಣೆಗಾರಿಕೆಯನ್ನು ಯಾರೇ ವರ್ಗಾವಣೆ ಪಡೆದ ಲೈಸೆನ್ಸ್‌ದಾರನ ಮೇಲೆ ವಿಧಿಸತಕ್ಕದ್ದು ; ಮತ್ತು

(ಇ) ಪರಿಣಾಮವುಳ್ಳದ್ದೆಂದು ಪರಿಗಣಿಸಬೇಕಾದ ಯಾವುದೇ ವರ್ಗಾವಣೆ ಅಥವಾ ವ್ಯವಹಾರದ ಸಂಬಂಧದಲ್ಲಿಯ ಆದೇಶವನ್ನು ನಿರ್ದಿಷ್ಟಪಡಿಸುವ ಉಪಬಂಧವು ಒಳಗೊಂಡಂತೆ ವರ್ಗಾವಣೆ ಮಾಡುವ ಲೈಸೆನ್ಸ್‌ದಾರನು ಸೂಕ್ತವೆಂದು ಭಾವಿಸಬಹುದಾದ ಅಂಥ ಪೂರಕ, ಆನುಷಂಗಿಕ ಹಾಗೂ ತತ್ಪರಿಣಾಮದ ಉಪಬಂಧಗಳನ್ನು ರಚಿಸಬಹುದು.

(7) ವರ್ಗಾವಣೆ ಯೋಜನೆಯು, ಪರಿಣಾಮಕಾರಿಯಾಗುವ ದಿನಾಂಕಕ್ಕೆ ಮೊದಲು, ಮಂಡಲಿಯ ಅಥವಾ ಕೆಪಿಟಿಸಿಯ ಅಥವಾ ವಿದ್ಯುಚ್ಛಕ್ತಿ ಉತ್ಪಾದನಾ ಕಂಪನಿಯ ಅಥವಾ ಕಂಪನಿಗಳ ಮೂಲಕ ಅವುಗಳೊಂದಿಗೆ ಅಥವಾ ಪರವಾಗಿ, ವಹಿಸಿದ ಎಲ್ಲ ಋಣಗಳು ಮತ್ತು ಹೊಣೆಗಾರಿಕೆಗಳು, ಮಾಡಿಕೊಂಡ ಎಲ್ಲ ಕರಾರುಗಳು ಮತ್ತು ಮಾಡುವುದರಲ್ಲಿ ತೊಡಗಿದ ಎಲ್ಲ ವಿಷಯಗಳನ್ನು ಮತ್ತು ವಸ್ತುಗಳನ್ನು, ಸಂಬಂಧಪಟ್ಟ ವರ್ಗಾವಣೆ ಯೋಜನೆಯಲ್ಲಿ ನಿರ್ದಿಷ್ಟಪಡಿಸಲಾದಷ್ಟರಮಟ್ಟಿಗೆ ಮಂಡಲಿಯಿಂದ, ಮಂಡಲಿಯೊಡನೆ ಅಥವಾ ರಾಜ್ಯ ಸರ್ಕಾರದ ಅಥವಾ ಕೆಪಿಟಿಸಿ ಅಥವಾ ವರ್ಗಾವಣೆ ಪಡೆದವನ ಪರವಾಗಿ ವಹಿಸಲಾಗಿದೆ ಎಂದು ಮಾಡಿಕೊಳ್ಳಲಾಗಿದೆ ಎಂದು ಮತ್ತು ಮಾಡಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಸಂದರ್ಭಾನುಸಾರ ಮಂಡಲಿಯ ಅಥವಾ ವರ್ಗಾವಣೆ ಮಾಡುವವನ ಮೂಲಕ ಅಥವಾ ವಿರುದ್ಧವಾಗಿ ಹೂಡಲಾದ ಎಲ್ಲ ದಾವೆಗಳು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ಮುಂದುವರಿಸಬಹುದು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರ ಅಥವಾ ಸಂಬಂಧಪಟ್ಟ ವರ್ಗಾವಣೆ ಪಡೆದವನ ಮೂಲಕ ಅಥವಾ ವಿರುದ್ಧ ಹೂಡಬಹುದು.

(8) ರಾಜ್ಯ ಸರ್ಕಾರವು ರೂಪಿಸಿದ ವರ್ಗಾವಣೆ ಯೋಜನೆಗನುಸಾರ, ಕೆಪಿಟಿಸಿಯು [1][ಅಥವಾ ಸಂದರ್ಭಾನುಸಾರ ಲೈಸೆನ್ಸ್‌ದಾರನು][1], ತನ್ನ ಉದ್ಯಮದ ಯಾವುದೇ ಭಾಗವನ್ನು ಇನ್ನೊಂದು ಕಂಪನಿಯಲ್ಲಿ ಅಥವಾ ನಿಗಮಿತ ನಿಕಾಯದಲ್ಲಿ ಅಥವಾ ವ್ಯಕ್ತಿಯಲ್ಲಿ ನಿಹಿತಗೊಳಿಸಲು ಅಗತ್ಯಪಡಿಸಿದರೆ, ಆಯೋಗವು, ವರ್ಗಾವಣೆ ಪಡೆದವನಿಗೆ ವಹಿಸಿಕೊಡಲಾದ ಪ್ರಕಾರ್ಯಗಳನ್ನು ಮತ್ತು ಚಟುವಟಿಕೆಗಳನ್ನು ನೆರವೇರಿಸುವುದು ವರ್ಗಾವಣೆ ಪಡೆದವನಿಗೆ ಸಾಧ್ಯವಾಗುವಂತೆ ಲೈಸೆನ್ಸನ್ನು ತಿದ್ದುಪಡಿ ಮಾಡತಕ್ಕದ್ದು.

1. 2005ರ 4ನೇ ಅಧಿನಿಯಮದ ಮೂಲಕ ದಿನಾಂಕ: 24.12.2004 ರಿಂದ ಸೇರಿಸಲಾಗಿದೆ

**15. ಸಿಬ್ಬಂದಿ ವರ್ಗಕ್ಕೆ ಸಂಬಂಧಪಡುವ ಉಪಬಂಧಗಳು.–** (1) ರಾಜ್ಯ ಸರ್ಕಾರವು, 14ನೇ ಪ್ರಕರಣದ ಅಡಿಯಲ್ಲಿ ರೂಪಿಸಲಾದ ವರ್ಗಾವಣೆ ಯೋಜನೆಯಲ್ಲಿ ಮಂಡಲಿಯಿಂದ ಸಂದರ್ಭಾನುಸಾರ ಕೆಪಿಟಿಸಿಗೆ ಅಥವಾ ಉತ್ಪಾದನಾ ಕಂಪನಿಗೆ ಅಥವಾ ಕಂಪನಿಗಳಿಗೆ ಅಥವಾ ಕೆಪಿಟಿಸಿಯಿಂದ ವರ್ಗಾವಣೆ ಪಡೆದವನಿಗೆ, ಸಿಬ್ಬಂದಿ ವರ್ಗಾವಣೆಗಾಗಿ, 14ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಲಾದಂತೆ, ಕೆಪಿಟಿಸಿಯಲ್ಲಿ ಅಥವಾ ಹೆಚ್ಚಿನ ವರ್ಗಾವಣೆ ಪಡೆದವನಲ್ಲಿ ಸ್ವತ್ತುಗಳು, ಹಕ್ಕುಗಳು ಮತ್ತು ಹೊಣೆಗಾರಿಕೆಗಳು ನಿಹಿತವಾದ ಮೇಲೆ ಉಪಬಂಧ ಕಲ್ಪಿಸಬಹುದು ಮತ್ತು ಅಂಥ ವರ್ಗಾವಣೆಗಳು 14ನೇ ಪ್ರಕರಣದ ಅಡಿಯಲ್ಲಿ ವರ್ಗಾವಣೆಗಳ ಸಂಬಂಧದಲ್ಲಿಯ ರೀತಿಯಲ್ಲಿಯೇ ಪರಿಣಾಮಕಾರಿಯಾಗಿರತಕ್ಕದ್ದು.

***ವಿವರಣೆ.–*** ಈ ಪ್ರಕರಣದ ಮತ್ತು 16ನೇ ಪ್ರಕರಣದ ಉದ್ದೇಶಕ್ಕಾಗಿ "ಸಿಬ್ಬಂದಿ" ಎಂದರೆ, ವರ್ಗಾವಣೆಯು ಪರಿಣಾಮಕಾರಿಯಾದ ದಿನಾಂಕದಂದು ಸಂದರ್ಭಾನುಸಾರ ಮಂಡಲಿಯ ಅಥವಾ ಕೆಪಿಟಿಸಿಯ ನೌಕರರಾಗಿರುವ ವ್ಯಕ್ತಿಗಳು.

(2) ಅಂಥ ವರ್ಗಾವಣೆ ಯೋಜನೆಯ ತರುವಾಯ, ಸಿಬ್ಬಂದಿಯು, ವರ್ಗಾವಣೆ ಯೋಜನೆಗನುಸಾರ ನಿರ್ಧರಿಸಬಹುದಾದ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ, ಕೆಪಿಟಿಸಿಯಲ್ಲಿ ಅಥವಾ ಉತ್ಪಾದನಾ ಕಂಪೆನಿಯಲ್ಲಿ ಅಥವಾ ಕಂಪೆನಿಗಳಲ್ಲಿ ಅಥವಾ ವರ್ಗಾವಣೆ ಪಡೆದ ಕಂಪೆನಿಯಲ್ಲಿ ಹುದ್ದೆಯನ್ನು ಅಥವಾ ಸೇವೆಯನ್ನು ಧಾರಣ ಮಾಡತಕ್ಕದ್ದು :

ಪರಂತು, ವರ್ಗಾವಣೆಯ ಮೇಲಿನ ಅಂಥ ನಿಬಂಧನೆಗಳು ಮತ್ತು ಷರತ್ತುಗಳು, ಸಂಬಂಧಪಟ್ಟ ವರ್ಗಾವಣೆ ಯೋಜನೆಗೆ ಮೊದಲು ಅವರಿಗೆ ಅನ್ವಯವಾಗುತ್ತಿದ್ದವುಗಳಿಗಿಂತ ಕಡಿಮೆ ಅನುಕೂಲಕರವಾಗಿರತಕ್ಕದ್ದಲ್ಲ ಮತ್ತು ಸಿಬ್ಬಂದಿಯ ಸೇವಾ ಮುಂದುವರಿಕೆಯನ್ನು ಕಾಯ್ದುಕೊಂಡು ಬರತಕ್ಕದ್ದು :

ಮತ್ತು ಪರಂತು, (1) ಮತ್ತು (2)ನೇ ಉಪ ಪ್ರಕರಣಗಳ ಅಡಿಯಲ್ಲಿಯ ಅಂಥ ಯಾವುದೇ ಯೋಜನೆಯು, ಸಂದರ್ಭಾನುಸಾರ ರಾಜ್ಯ ಸರ್ಕಾರ, ಮಂಡಲಿ ಅಥವಾ ಕೆಪಿಟಿಸಿಯ ಮತ್ತು ನೌಕರರ ನಡುವೆ ಮಾಡಿಕೊಳ್ಳಲಾದ ತ್ರಿಪಕ್ಷೀಯ ಒಪ್ಪಂದಗಳಿಗೆ ಸುಸಂಗತವಾಗಿರತಕ್ಕದ್ದು.

(3) ಕೈಗಾರಿಕಾ ವಿವಾದಗಳ ಅಧಿನಿಯಮ, 1947 ಅಥವಾ ಅನ್ವಯವಾಗತಕ್ಕ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ ಮತ್ತು ಈ ಅಧಿನಿಯಮದಲ್ಲಿ ಮಾಡಲಾದ ಉಪಬಂಧಗಳನ್ನು ಹೊರತುಪಡಿಸಿ, (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಸಿಬ್ಬಂದಿಯ ನಿಯೋಜನೆಯ ವರ್ಗಾವಣೆಯು, ವರ್ಗಾವಣೆ ಯೋಜನೆಯಲ್ಲಿ ಉಪಬಂಧಿಸಿದುದನ್ನು ಉಳಿದು, ಈ ಅಧಿನಿಯಮದಲ್ಲಿ ಅಥವಾ ಯಾವುದೇ ಇತರ ಕೇಂದ್ರ ಅಥವಾ ರಾಜ್ಯ ಕಾನೂನಿನ ಅಡಿಯಲ್ಲಿ ಅಥವಾ ಸಾಮಾನ್ಯ ಕಾನೂನಿನ ಅಡಿಯಲ್ಲಿ ಯಾವುದೇ ಪರಿಹಾರಕ್ಕೆ ಅಂಥ ನೌಕರರನ್ನು ಹಕ್ಕುಳ್ಳವರನ್ನಾಗಿಸುವುದಿಲ್ಲ.

**16. ವರ್ಗಾವಣೆಗಳ ವ್ಯತ್ಯಾಸ.**- 15ನೇ ಪ್ರಕರಣದ (2)ನೇ ಉಪ ಪ್ರಕರಣದ ಪರಂತುಕಕ್ಕೆ ಒಳಪಟ್ಟು, ರಾಜ್ಯ ಸರ್ಕಾರವು, 14 ಮತ್ತು 15ನೇ ಪ್ರಕರಣಗಳ ಸಂಬಂಧದ ವರ್ಗಾವಣೆಗಳು, ಜಾರಿ ದಿನಾಂಕದಿಂದ ಹನ್ನೆರಡು ತಿಂಗಳುಗಳ ಅವಧಿಗಾಗಿ ತಾತ್ಕಾಲಿಕವಾಗಿರತಕ್ಕದ್ದೆಂದು ಉಪಬಂಧಿಸಬಹುದು ಮತ್ತು ರಾಜ್ಯ ಸರ್ಕಾರವು ಸೂಕ್ತವೆಂದು ಭಾವಿಸಬಹುದಾದಂತೆ, ಅಂಥ ರೀತಿಯಲ್ಲಿ ನಿಬಂಧನೆಗಳನ್ನು ಬದಲಾಯಿಸಲು, ವ್ಯತ್ಯಾಸ ಮಾಡಲು, ಮಾರ್ಪಾಡು ಮಾಡಲು, ಸೇರಿಸಲು ಅಥವಾ ಅನ್ಯಥಾ ಬದಲಾಯಿಸಲು ಹಕ್ಕನ್ನು ಉಳಿಸಿಕೊಳ್ಳತಕ್ಕದ್ದು.

## ಭಾಗ VI

## ಉತ್ಪಾದನಾ ಕಂಪನಿಗಳು ಮತ್ತು ಉತ್ಪಾದನಾ ಕೇಂದ್ರಗಳು

**17. ಉತ್ಪಾದನಾ ಕಂಪನಿಗಳು ಮತ್ತು ಕೇಂದ್ರಗಳು.**- (1) ಆಯೋಗವು ಅನುಮೋದನೆ ಮಾಡಿದ ರೀತಿಯಲ್ಲಿ, ವಿದ್ಯುಚ್ಛಕ್ತಿಯ ಖರೀದಿಗಾಗಿ ವಿದ್ಯುಚ್ಛಕ್ತಿ ಉತ್ಪಾದನಾ ಕಂಪನಿಯೊಡನೆ, ಲೈಸೆನ್ಸ್‌ದಾರನು ಅಥವಾ ಸಗಟು ಖರೀದಿದಾರನು ಅಥವಾ ಯಾವೊಬ್ಬ ಇತರ ವ್ಯಕ್ತಿಯು ಒಪ್ಪಂದ ಮಾಡಿಕೊಳ್ಳಬಹುದು ಮತ್ತು ಆಯೋಗವು ನೀಡಿದ ಅಂಥ ಅನುಮೋದನೆಯು, ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ 43ಎ ಪ್ರಕರಣದ ಅರ್ಥದೊಳಗೆ, ರಾಜ್ಯ ಸರ್ಕಾರವು ನೀಡುವ ಒಪ್ಪಿಗೆಯ ಪರಿಣಾಮವನ್ನು ಹೊಂದಿರತಕ್ಕದ್ದು :

ಪರಂತು, ಈ ಉಪ ಪ್ರಕರಣದ ಅಡಿಯಲ್ಲಿ ಆಯೋಗವು ನೀಡಿದ ಅನುಮೋದನೆಯು, ರಾಜ್ಯ ಸರ್ಕಾರದ ಅಥವಾ ಯಾವುದೇ ಇತರ ಕಾನೂನಿನ, ನಿಯಮದ ಅಥವಾ ವಿನಿಯಮದ ಅಡಿಯ ಯಾವುದೇ ಪ್ರಾಧಿಕಾರದ ಅನುಮೋದನೆಗಳನ್ನು ಅಥವಾ ಮಂಜೂರಾತಿಗಳನ್ನು ಪಡೆದುಕೊಳ್ಳಲು ಇರುವ ಅಗತ್ಯತೆಗಳಿಗೆ ಯಾವುದೇ ರೀತಿ ಬಾಧಕವಾಗತಕ್ಕದ್ದಲ್ಲ.

(2) ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ 44ನೇ ಪ್ರಕರಣದ ಉಪಬಂಧಗಳು, ಹೊಸ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರದ ಸ್ಥಾಪನೆಗೆ ಅಥವಾ ಆರ್ಜನೆಗೆ ಒಪ್ಪಿಗೆಗಾಗಿ ಬಂದ ಅರ್ಜಿಗಳ ಸಂಬಂಧದಲ್ಲಿ ಅಥವಾ ಈ ಮುಂದಿನ ಮಾರ್ಪಾಡುಗಳಿಗೊಳಪಟ್ಟು, ವಿದ್ಯುಚ್ಛಕ್ತಿಗಾಗಿ ಅರ್ಜಿದಾರನ ಅವಶ್ಯಕತೆಗಳನ್ನು ಪೂರೈಸುವುದಕ್ಕಾಗಿ, ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರದಲ್ಲಿ ವಿದ್ಯುತ್ ಉತ್ಪಾದನೆಗೆ ಸಂಬಂಧಪಡುವ ಯಾವುದೇ ಪ್ರಧಾನ ಘಟಕವನ್ನು ಅಥವಾ ಯಂತ್ರ ಸ್ಥಾವರವನ್ನು ಅಥವಾ ಕಾಮಗಾರಿಗಳನ್ನು ವಿಸ್ತರಿಸುವುದಕ್ಕೆ ಅಥವಾ ಬದಲಾಯಿಸುವುದಕ್ಕೆ ಅನ್ವಯವಾಗತಕ್ಕದ್ದು.

(ಎ) ಅರ್ಜಿದಾರನು, ಮಂಡಲಿಯ ಬದಲು ಆಯೋಗಕ್ಕೆ ಲಿಖಿತ ಪೂರ್ವಾನುಮತಿಗಾಗಿ ಅರ್ಜಿ ಸಲ್ಲಿಸತಕ್ಕದ್ದು ಮತ್ತು ಅದನ್ನು ಪಡೆದುಕೊಳ್ಳತಕ್ಕದ್ದು.

(ಬಿ) ಆಯೋಗವು, ಒಪ್ಪಿಗೆಯನ್ನು ನೀಡುವ ಅಥವಾ ನಿರಾಕರಿಸುವ ಬಗ್ಗೆ ಕಾರಣಗಳನ್ನು ದಾಖಲಿಸತಕ್ಕದ್ದು.

(3) ಯಾವುದೇ ವಿದ್ಯುಚ್ಛಕ್ತಿ ಉತ್ಪಾದನಾ ಕಂಪನಿ ಅಥವಾ ಕೇಂದ್ರವು, ಸಗಟು ಖರೀದಿದಾರನಿಗೆ ಅಥವಾ ಲೈಸೆನ್ಸ್‌ದಾರನಿಗೆ ಅಥವಾ ಆಯೋಗವು ನಿರ್ದಿಷ್ಟವಾಗಿ ಪ್ರಾಧಿಕರಿಸಿದ ಇತರ ವ್ಯಕ್ತಿಗೆ ವಿದ್ಯುಚ್ಛಕ್ತಿಯನ್ನು ಮಾರಾಟ ಮಾಡುವಷ್ಟರಮಟ್ಟಿಗೆ ಹೊರತಾಗಿ, ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಮಾರಾಟ ಅಥವಾ ಸರಬರಾಜಿನ ಅಥವಾ ವಿದ್ಯುಚ್ಛಕ್ತಿ ರವಾನೆಯ ವ್ಯವಹಾರದಲ್ಲಿ ತೊಡಗತಕ್ಕದ್ದಲ್ಲ.

(4) ಯಾವುದೇ ವಿದ್ಯುಚ್ಛಕ್ತಿ ಉತ್ಪಾದನಾ ಕಂಪನಿಯು ಅಥವಾ ಉತ್ಪಾದನಾ ಕೇಂದ್ರವು, ಯಾವುದೇ ಕಾಲದಲ್ಲಿ ಆಯೋಗದ ಲಿಖಿತ ಪೂರ್ವಾನುಮತಿ ಇಲ್ಲದೆ, ವಿದ್ಯುಚ್ಛಕ್ತಿಯ ಉತ್ಪಾದನೆ, ರವಾನೆ, ವಿತರಣೆ ಅಥವಾ ಸರಬರಾಜು ವ್ಯವಹಾರಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ವಿದ್ಯುಚ್ಛಕ್ತಿಯನ್ನು ರವಾನೆ ಮಾಡುವ, ಸರಬರಾಜು ಮಾಡುವ ಅಥವಾ ರವಾನೆ ಅಥವಾ ಸರಬರಾಜು ಮಾಡುವ ಆಶಯವಿರುವ ಯಾವೊಬ್ಬ ಇತರ ಲೈಸೆನ್ಸ್‌ದಾರನ ಅಥವಾ ವ್ಯಕ್ತಿಯ ಲೈಸೆನ್ಸನ್ನು ಅಥವಾ ಉದ್ಯಮವನ್ನು ಖರೀದಿಯ ಮೂಲಕ ಅಥವಾ ಅನ್ಯಥಾ ಆರ್ಜಿಸತಕ್ಕದ್ದಲ್ಲ ಅಥವಾ ಅವನೊಂದಿಗೆ ಜೊತೆಗೂಡತಕ್ಕದ್ದಲ್ಲ :

ಪರಂತು, ಆಯೋಗವು ಒಪ್ಪಿಗೆ ನೀಡುವ ಮೊದಲು, ವಿನಿಯಮಗಳ ಮೂಲಕ ಆಯೋಗವು ನಿರ್ದಿಷ್ಟಪಡಿಸಬಹುದಾದಂತೆ, ಆಕ್ಷೇಪಣೆಗಳನ್ನು ಆಹ್ವಾನಿಸಿ ಅಂಥ ನೋಟೀಸುಗಳನ್ನು ಪ್ರಕಟಿಸಬಹುದು.

## ಭಾಗ VII

## ವಿದ್ಯುಚ್ಛಕ್ತಿ ರವಾನೆ ಮತ್ತು ಸರಬರಾಜಿಗೆ ಲೈಸೆನ್ಸ್ ನೀಡುವಿಕೆ

**18. ಲೈಸೆನ್ಸಿನ ಅವಶ್ಯಕತೆ.-** (1) ಈ ಅಧಿನಿಯಮದ ಅಡಿಯಲ್ಲಿ ಲೈಸೆನ್ಸಿನ ಅಥವಾ ವಿನಾಯತಿಯ ಮೂಲಕ ಈ ಮುಂದಿನ ವ್ಯವಹಾರಗಳನ್ನು ಮಾಡಲು ಪ್ರಾಧಿಕೃತನಾದ ಅಥವಾ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ ಅಡಿಯಲ್ಲಿ ಪ್ರಾಧಿಕೃತನಾದ ಅಥವಾ ಇತರ ಯಾವುದೇ ಪ್ರಾಧಿಕಾರದ ಮೂಲಕ ವಿನಾಯಿತಿಗೊಳಿಸಲ್ಪಟ್ಟ ವ್ಯಕ್ತಿಗಳ ಹೊರತಾಗಿ ಯಾರೇ ವ್ಯಕ್ತಿಯು, ರಾಜ್ಯದಲ್ಲಿ ,-

(ಎ) ವಿದ್ಯುಚ್ಛಕ್ತಿಯ ರವಾನೆಯ; ಅಥವಾ

(ಬಿ) ವಿದ್ಯುಚ್ಛಕ್ತಿಯ ಸಗಟು ಸರಬರಾಜು ಒಳಗೊಂಡಂತೆ ಸರಬರಾಜಿನ ,

-ವ್ಯವಹಾರದಲ್ಲಿ ತೊಡಗತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದಲ್ಲಿ ವಿವರಿಸಲಾದಂತೆ ಯಾವೊಬ್ಬ ವ್ಯಕ್ತಿಯು ವಿದ್ಯುಚ್ಛಕ್ತಿಯ ರವಾನೆ ಅಥವಾ ಸರಬರಾಜಿನ ವ್ಯವಹಾರದಲ್ಲಿ ತೊಡಗಿದ್ದಾನೆಯೇ, ಅಥವಾ ತೊಡಗಿಲ್ಲವೇ ಅಥವಾ ತೊಡಗುವುದರಲ್ಲಿದ್ದಾನೆಯೇ ಎಂಬುದಕ್ಕೆ ಸಂಬಂಧಿಸಿದಂತೆ, ಯಾವುದೇ ಭಿನ್ನಾಭಿಪ್ರಾಯ ಅಥವಾ ವಿವಾದ ಉದ್ಭವಿಸಿದಲ್ಲಿ ಈ ವಿಷಯವನ್ನು ಆಯೋಗಕ್ಕೆ ಉಲ್ಲೇಖಿಸತಕ್ಕದ್ದು ಮತ್ತು ಆಯೋಗದ ತೀರ್ಮಾನವು ಅಂತಿಮವಾಗಿರತಕ್ಕದ್ದು.

(3) ಆಯೋಗವು, ಲೈಸೆನ್ಸ್‌ದಾರನಲ್ಲದ ಯಾವೊಬ್ಬ ವ್ಯಕ್ತಿಯು ಪ್ರವರ್ತಿಸುವುದನ್ನು ನಿಲ್ಲಿಸುವಂತೆ ಮತ್ತು ತನ್ನ ಸಲಕರಣೆಗಳ ಸಂಪರ್ಕ ತಪ್ಪಿಸುವಂತೆ ಆದೇಶ ನೀಡಲು ಅಧಿಕಾರ ಹೊಂದಿರತಕ್ಕದ್ದು.

(4) ಈ ಅಧಿನಿಯಮದ ಇತರ ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಮತ್ತು 3ನೇ ಪ್ರಕರಣಕ್ಕೆ ಸಂಬಂಧಿಸಿದಂತೆ ಆಯೋಗದ ಸ್ಥಾಪನೆಯಾಗುವವರೆಗೆ, ರಾಜ್ಯದಲ್ಲಿ ಈ ಅಧಿನಿಯಮದ ಉಪಬಂಧಗಳಿಗೆ ಸುಸಂಗತವಾಗಿ ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂತೆ, ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇರೆಗೆ, ಆದರೆ ಈ ಮುಂದಿನ ಷರತ್ತುಗಳಿಗೊಳಪಟ್ಟು ವಿದ್ಯುಚ್ಛಕ್ತಿಯ ರವಾನೆ ಅಥವಾ ಸರಬರಾಜಿನ ವ್ಯವಹಾರದಲ್ಲಿ ತೊಡಗಲು ಯಾರೇ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಹನ್ನೆರಡು ತಿಂಗಳುಗಳ ಅವಧಿಯವರೆಗೆ ಈ ಪ್ರಕರಣದ ಅಡಿಯಲ್ಲಿ ತಾತ್ಕಾಲಿಕ ಲೈಸೆನ್ಸ್‌ಗಳನ್ನು ನೀಡಲು ಅಧಿಕಾರ ಹೊಂದಿರತಕ್ಕದ್ದು: -

(ಎ) ಆಯೋಗವು ರಚನೆಯಾದ ಮೇಲೆ, ರಾಜ್ಯ ಸರ್ಕಾರದಿಂದ ಮಂಜೂರಾದ ಪ್ರತಿಯೊಂದು ತಾತ್ಕಾಲಿಕ ಲೈಸೆನ್ಸ್‌ಗಳನ್ನು ಆಯೋಗದ ಮುಂದೆ ಇಡತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅವುಗಳನ್ನು ಆಯೋಗದಿಂದ ಲೈಸೆನ್ಸ್ ಮಂಜೂರಾತಿಗಾಗಿರುವ ಅರ್ಜಿಗಳೆಂಬುದಾಗಿ ಪರಿಗಣಿಸತಕ್ಕದ್ದು; ಮತ್ತು

(ಬಿ) ಈ ಪ್ರಕರಣದ ಮೇರೆಗೆ ಮಂಜೂರು ಮಾಡಲಾದ ಪ್ರತಿಯೊಂದು ತಾತ್ಕಾಲಿಕ ಲೈಸೆನ್ಸ್‌ನ ಸಿಂಧುತ್ವವು ಮತ್ತು ಪರಿಣಾಮಕಾರಿಯಾಗಿರುವುದು, ಆಯೋಗದ ತೀರ್ಮಾನವು ತಾತ್ಕಾಲಿಕ ಲೈಸೆನ್ಸ್ ದಾರನಿಗೆ ತಿಳಿಸಲಾದ ದಿನಾಂಕದಿಂದ ಕೊನೆಗೊಳ್ಳತಕ್ಕದ್ದು.

(5) ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಆಯೋಗವು ಮಂಜೂರು ಮಾಡಲು ಹಕ್ಕು ಹೊಂದಿರುವ ಅಂಥ ಅಧಿಕಾರಗಳು, ಹಕ್ಕುಗಳು ಮತ್ತು ಅಧಿಕಾರ ನೀಡುವಿಕೆಯನ್ನು ತಾತ್ಕಾಲಿಕ ಲೈಸೆನ್ಸ್‌ದಾರನಿಗೆ (4)ನೇ ಉಪ-ಪ್ರಕರಣದ ಅಡಿಯಲ್ಲಿ ಪ್ರದಾನ ಮಾಡಲು ರಾಜ್ಯ ಸರ್ಕಾರವು ಹಕ್ಕು ಹೊಂದಿರತಕ್ಕದ್ದು.

(6) ರಾಜ್ಯ ಸರ್ಕಾರದಿಂದ ಅಥವಾ ಯಾವುದೇ ಸಕ್ಷಮ ಪ್ರಾಧಿಕಾರದಿಂದ, ಭಾರತ ವಿದ್ಯುಚ್ಛಕ್ತಿ ಅಧಿನಿಯಮ, 1910ರ ಉಪಬಂಧಗಳ ಅಡಿಯಲ್ಲಿ ನೀಡಲಾದ ಎಲ್ಲಾ ಲೈಸೆನ್ಸ್‌ಗಳನ್ನು ತಾತ್ಕಾಲಿಕ ಲೈಸೆನ್ಸ್‌ಗಳೆಂದು ಪರಿಗಣಿಸತಕ್ಕದ್ದು ಮತ್ತು (4) ಮತ್ತು (5)ನೇ ಉಪ ಪ್ರಕರಣಗಳ ಅಡಿಯಲ್ಲಿ ಉಪಬಂಧಿಸಲಾದ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು. ಮಾಡಿಕೊಳ್ಳಲಾದ ಎಲ್ಲಾ ವಿದ್ಯುಚ್ಛಕ್ತಿ ಖರೀದಿ ಒಪ್ಪಂದಗಳು, ರವಾನೆ ಸೇವೆಗಳ ಒಪ್ಪಂದಗಳು ಮತ್ತು ಇತರ ಕರಾರುಗಳು ಪೂರ್ಣ ಸಾಮರ್ಥ್ಯ ಮತ್ತು ಪರಿಣಾಮದೊಂದಿಗೆ ಮುಂದುವರಿಯತಕ್ಕದ್ದು ಮತ್ತು ಅವುಗಳನ್ನು ಉತ್ತರಾಧಿಕಾರಿ ಅಸ್ತಿತ್ವಗಳಿಗೆ ವರ್ಗಾಯಿಸಲಾಗುವುದು.

**19. ಆಯೋಗದಿಂದ ಲೈಸೆನ್ಸ್‌ಗಳ ನೀಡಿಕೆ.-** (1) ಆಯೋಗವು, ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ರೀತಿಯಲ್ಲಿ ಮಾಡಲಾದ ಅರ್ಜಿಗಳನ್ನು ಸ್ವೀಕರಿಸಿದ ಮೇಲೆ ಮತ್ತು ಅಂಥ ಫೀಜುಗಳನ್ನು (ಯಾವುವಾದರೂ ಇದ್ದಲ್ಲಿ) ಸಂದಾಯ ಮಾಡಿದ ಮೇಲೆ ಈ ಮುಂದಿನವುಗಳ ಬಗ್ಗೆ ಯಾರೇ ವ್ಯಕ್ತಿಗೆ ಅಧಿಕಾರ ನೀಡಿ ಲೈಸೆನ್ಸನ್ನು ನೀಡಬಹುದು:-

(ಎ) ನಿರ್ದಿಷ್ಟ ರವಾನೆ ಪ್ರದೇಶದಲ್ಲಿ ವಿದ್ಯುಚ್ಛಕ್ತಿಯನ್ನು ರವಾನಿಸುವುದಕ್ಕೆ ; ಮತ್ತು / ಅಥವಾ

(ಬಿ) ಲೈಸೆನ್ಸ್‌ದಾರರಿಗೆ ಅಥವಾ ಯಾರೇ ವ್ಯಕ್ತಿಗೆ ನಿರ್ದಿಷ್ಟ ರವಾನೆ ಪ್ರದೇಶದಲ್ಲಿ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವುದಕ್ಕೆ ಅಥವಾ ಸಗಟಿನಲ್ಲಿ ಸರಬರಾಜು ಮಾಡುವುದಕ್ಕೆ .

(2) ಅಂಥ ಲೈಸೆನ್ಸಿನ ಮಂಜೂರಾತಿಗೆ ಸಂಬಂಧಪಟ್ಟಂತೆ, ಈ ಮುಂದಿನ ಉಪಬಂಧಗಳು ಅನ್ವಯವಾಗತಕ್ಕದ್ದು :-

(ಎ) ಲೈಸೆನ್ಸ್‌ಗಾಗಿ ಅರ್ಜಿಯನ್ನು ಸಲ್ಲಿಸಿದ ಯಾವೊಬ್ಬ ವ್ಯಕ್ತಿಯು, ಅರ್ಜಿಯನ್ನು ಸಲ್ಲಿಸಿದ ನಂತರ ಹದಿನಾಲ್ಕು ದಿನಗಳ ಒಳಗಾಗಿ ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ವಿವರಗಳೊಂದಿಗೆ ತನ್ನ ಅರ್ಜಿಯ ನೋಟೀಸನ್ನು ಪ್ರಕಟಿಸತಕ್ಕದ್ದು.

(ಬಿ) ಆಯೋಗವು, ಈ ಮುಂದಿನ ವಿಷಯಗಳು ಪೂರ್ಣಗೊಳ್ಳುವವರೆಗೆ ಲೆಸೆನ್ಸನ್ನು ನೀಡತಕ್ಕದ್ದಲ್ಲ :-

(i) ಲೈಸೆನ್ಸ್‌ಗಾಗಿ ಅರ್ಜಿಗೆ ಸಂಬಂಧಪಟ್ಟಂತೆ ಸ್ವೀಕರಿಸಲಾದ ಎಲ್ಲಾ ಆಕ್ಷೇಪಣೆಗಳನ್ನು ಆಯೋಗವು ಪರಿಗಣಿಸಿರಬೇಕು. ಪರಂತು, ಯಾವುದೇ ಆಕ್ಷೇಪಣೆಯನ್ನು ಮೇಲ್ಕಂಡ (ಎ) ಖಂಡದ ಅಡಿಯಲ್ಲಿ ನೋಟೀಸನ್ನು ಮೊದಲ ಬಾರಿಗೆ ಪ್ರಕಟಿಸಿದ ದಿನಾಂಕದಿಂದ ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ಸಮಯದ ಒಳಗೆ ಸ್ವೀಕರಿಸಿದ್ದ ಹೊರತು ಆಯೋಗವು ಪರಿಗಣಿಸತಕ್ಕದ್ದಲ್ಲ ಮತ್ತು ಅದು ನಲವತ್ತೈದು ದಿನಗಳಿಗಿಂತ ಕಡಿಮೆಯಾಗಿರತಕ್ಕದ್ದಲ್ಲ ; ಮತ್ತು

(ii) ರಕ್ಷಣಾ ಉದ್ದೇಶಗಳಿಗಾಗಿ ಕೇಂದ್ರ ಸರ್ಕಾರದ ಅಧಿಭೋಗದಲ್ಲಿರುವ ಯಾವುದೇ ದಂಡು ಪ್ರದೇಶ, ವಿಮಾನ ನಿಲ್ದಾಣ, ಕೋಟೆ, ಆಯುಧ ಶಾಲೆ, ನೌಕಾನೆಲೆ ಅಥವಾ ಶಿಬಿರ ಅಥವಾ ಯಾವುದೇ ಕಟ್ಟಡ ಅಥವಾ ಸ್ಥಳಗಳು ಪೂರ್ಣವಾಗಿ ಅಥವಾ ಯಾವುದೇ ಭಾಗವೂ ಒಳಗೊಂಡಂತೆ ವಿದ್ಯುಚ್ಛಕ್ತಿಯ ಸರಬರಾಜು ಅಥವಾ ರವಾನೆಗೆ ಲೈಸೆನ್ಸಿಗಾಗಿ ಅರ್ಜಿಯನ್ನು ಸಲ್ಲಿಸಿದ ಸಂದರ್ಭದಲ್ಲಿ ಲೈಸೆನ್ಸ್ ಮಂಜೂರಾತಿಗೆ ಕೇಂದ್ರ ಸರ್ಕಾರದ ಪರವಾಗಿ ಯಾವುದೇ ಆಕ್ಷೇಪಣೆಗಳಿಲ್ಲವೆಂಬುದಾಗಿ ಆಯೋಗವು ಖಚಿತಪಡಿಸಿಕೊಂಡಿರತಕ್ಕದ್ದು ; [1][ಮತ್ತು][1]

1. 2001ರ ಅಧಿನಿಯಮ ಸಂಖ್ಯೆ 26ರ ಮೂಲಕ ದಿನಾಂಕ 10-11-2001ರಿಂದ ಸೇರಿಸಲಾಗಿದೆ.

[1][(iii) ಈ ವಿಷಯವನ್ನು ಕೆ ಪಿ ಟಿ ಸಿ ಯೊಂದಿಗೆ ಸಮಾಲೋಚಿಸುವುದು.][1]

1. 2001ರ ಅಧಿನಿಯಮ ಸಂಖ್ಯೆ 26ರ ಮೂಲಕ ದಿನಾಂಕ 10-11-2001ರಿಂದ ಸೇರಿಸಲಾಗಿದೆ

(ಸಿ) ಸಂಬಂಧಪಟ್ಟ ಯಾವುದೇ ಸ್ಥಳೀಯ ಪ್ರಾಧಿಕಾರದಿಂದ ಆಕ್ಷೇಪಣೆ ಬಂದಾಗ, ಆಯೋಗವು ಆಕ್ಷೇಪಣೆಯು ಸಾಕಷ್ಟಿಲ್ಲವೆಂದು ಅಭಿಪ್ರಾಯಪಟ್ಟರೆ, ಅದನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು ಮತ್ತು ತನ್ನ ಅಂಥ ಅಭಿಪ್ರಾಯಕ್ಕಾಗಿನ ಕಾರಣಗಳನ್ನು ಅಂಥ ಸ್ಥಳೀಯ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು ;

(ಡಿ) ಯಾವುದೇ ಸ್ಥಳೀಯ ಪ್ರಾಧಿಕಾರವು, ಅದರ ಉದ್ದೇಶವನ್ನು ನಿರ್ದಿಷ್ಟಪಡಿಸಿ, ಅಂಥ ಸ್ಥಳೀಯ ಪ್ರಾಧಿಕಾರದ ಸಭೆಗಳಿಗೆ ಸಾಮಾನ್ಯವಾಗಿ ನೀಡಲಾಗುವ ರೀತಿಯಲ್ಲಿ ಅದಕ್ಕಾಗಿ ಒಂದು ತಿಂಗಳ ಮುಂಚೆಯೇ ನೋಟೀಸು ನೀಡಿದ ಮೇಲೆ ನಡೆಸಲಾದ ಅಂಥ ಪ್ರಾಧಿಕಾರದ ಸಭೆಯಲ್ಲಿ ಪಾಸುಮಾಡಿದ ಗೊತ್ತುವಳಿಗೆ ಅನುಸಾರವಾಗಿಯಲ್ಲದೆ ಲೈಸೆನ್ಸ್‌ಗಾಗಿ ಯಾವುದೇ ಅರ್ಜಿಯನ್ನು ಸಲ್ಲಿಸತಕ್ಕದ್ದಲ್ಲ.

(3) ವಿದ್ಯುಚ್ಛಕ್ತಿಯ ರವಾನೆ ಅಥವಾ ಸರಬರಾಜನ್ನು ಯಾವ ಅವಧಿಗೆ, ವ್ಯಕ್ತಿಗೆ ಮತ್ತು ಯಾವ ನಿಬಂಧನೆ ಮತ್ತು ಷರತ್ತುಗಳ ಅಡಿಯಲ್ಲಿ ಮಾಡಲಾಗುವುದು ಎಂಬುದರ ಬಗ್ಗೆ ಲೈಸೆನ್ಸಿನಲ್ಲಿ ನಿರ್ದಿಷ್ಟಪಡಿಸತಕ್ಕದ್ದು ಮತ್ತು

ಅದು ಅಧಿನಿಯಮದ ಉದ್ದೇಶಗಳನ್ನು ಸಾಧಿಸುವುದಕ್ಕಾಗಿ ಆಯೋಗವು ತಾನು ಸೂಕ್ತವೆಂದು ಪರಿಗಣಿಸಬಹುದಾದ ಅಂಥ ಇತರ ಷರತ್ತುಗಳನ್ನು ಸಹ ಒಳಗೊಂಡಿರತಕ್ಕದ್ದು .

(4) (3)ನೇ ಉಪ ಪ್ರಕರಣದ ಸಾಮಾನ್ಯತೆಗೆ ಬಾಧಕವಾಗದಂತೆ ಆ ಉಪ ಪ್ರಕರಣದ ಬಲದಿಂದಾಗಿ ಲೈಸೆನ್ಸಿನಲ್ಲಿ ಒಳಗೊಂಡ ಷರತ್ತುಗಳು, ಲೈಸೆನ್ಸ್‌ದಾರನನ್ನು ಈ ಮುಂದಿನವುಗಳ ಸಂಬಂಧದಲ್ಲಿ ಅಗತ್ಯಪಡಿಸಬಹುದು:-

(ಎ) ಲೈಸೆನ್ಸ್‌ದಾರನಿಂದ ನಿರ್ವಹಿಸಲಾದ ಯಾವುವೇ ವಿದ್ಯುತ್ ಲೈನ್‌ಗಳು, ವಿದ್ಯುತ್ ಸ್ಥಾವರ ಮತ್ತು ಸಂಬಂಧಪಟ್ಟ ಸಾಧನ ಸಲಕರಣೆಯ ಬಳಕೆಗಾಗಿ ಇತರ ವ್ಯಕ್ತಿಗಳೊಂದಿಗೆ ನಿರ್ದಿಷ್ಟ ನಿಬಂಧನೆಗಳ ಮೇಲೆ ಒಪ್ಪಂದಗಳನ್ನು ಮಾಡಿಕೊಳ್ಳುವುದು ;

(ಬಿ) ಆಯೋಗದಿಂದ ನೀಡಲಾದ ಯಾವುದೇ ನಿರ್ದೇಶನವನ್ನು ಪಾಲಿಸುವುದು ;

(ಸಿ) ಲೈಸೆನ್ಸಿನ ನಿಬಂಧನೆಗಳಂತೆ ಕಾರ್ಯನಿರ್ವಹಿಸುವುದು ;

(ಡಿ) ಲೈಸೆನ್ಸ್ ಅಡಿಯಲ್ಲಿ ಉದ್ಭವಿಸುವ ಎಲ್ಲಾ ವಿವಾದಗಳನ್ನು ಆಯೋಗದ ನಿರ್ಧರಣೆಗೆ ಒಪ್ಪಿಸುವುದು;

(ಇ) ಆಯೋಗವು ತನ್ನ ಸ್ವಂತ ಉದ್ದೇಶಕ್ಕಾಗಿ ಅಥವಾ ಕೇಂದ್ರ ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ ಅಥವಾ ಕೇಂದ್ರ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಉದ್ದೇಶಗಳಿಗಾಗಿ ಅಗತ್ಯಪಡಿಸಬಹುದಾದ ಮಾಹಿತಿ, ದಸ್ತಾವೇಜುಗಳು ಮತ್ತು ವಿವರಗಳನ್ನು ಒದಗಿಸುವುದು ;

(ಎಫ್) ಭಾರತ ವಿದ್ಯುಚ್ಛಕ್ತಿ ಅಧಿನಿಯಮ, 1910ರ ಮತ್ತು ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ ಅಥವಾ ಅದರ ಅಡಿಯಲ್ಲಿ ರೂಪಿಸಲಾದ ನಿಯಮಗಳ ಅಗತ್ಯತೆಗಳನ್ನು ಅವುಗಳು ಅನ್ವಯವಾಗುವಷ್ಟರ ಮಟ್ಟಿಗೆ ಪೂರೈಸುವುದು ;

(ಜಿ) ಆಯೋಗವು ವಿನಿಯಮದ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಭಾರತ ವಿದ್ಯುಚ್ಛಕ್ತಿ ಅಧಿನಿಯಮ, 1910 ಮತ್ತು ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ ಅಡಿಯಲ್ಲಿ ಮಂಡಲಿಯ ಅಂಥ ಕಾರ್ಯಚಟುವಟಿಕೆಗಳನ್ನು ಮತ್ತು ಬಾಧ್ಯತೆಗಳನ್ನು ಕೈಗೊಳ್ಳುವುದು ;

(ಹೆಚ್) ಲೈಸೆನ್ಸ್‌ನ ಷರತ್ತುಗಳ ಅಡಿಯಲ್ಲಿ ಅಥವಾ ಅದರಿಂದ ಮಾರ್ಗಾಂತರ ಹೊಂದುವುದಕ್ಕಾಗಿ ಅಗತ್ಯಪಡಿಸಲಾದ ಅಂಥ ವಿಷಯಗಳಿಗೆ ಆಯೋಗದ ಅನುಮೋದನೆಯನ್ನು ಪಡೆಯುವುದು ;

(ಐ) ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ ಉಪಬಂಧಗಳಿಗೆ ಸಂಬಂಧಪಟ್ಟ ಯೋಜನೆಗಳೂ ಸೇರಿದಂತೆ ತಾನು ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಯೋಜನೆಯನ್ನು ಆಯೋಗಕ್ಕೆ ಅಧಿಸೂಚಿಸುವುದು ;

(ಜೆ) ವಿದ್ಯುತ್ತನ್ನು ಮಿತವ್ಯಯಕಾರಿಯಾಗಿ ಮತ್ತು ಒಂದು ಪಾರದರ್ಶಕ ವಿದ್ಯುತ್ ಖರೀದಿ, ಸಂಗ್ರಹಣ ವ್ಯವಸ್ಥೆಯ ಅಡಿಯಲ್ಲಿ ಖರೀದಿಸುವುದು ;

***ವಿವರಣೆ.***-ಈ ಅಧಿನಿಯಮವು ಜಾರಿಗೆ ಬರುವುದಕ್ಕೆ ಮುಂಚೆ ಉತ್ಪಾದನಾ ಕಂಪೆನಿಗಳು ಮತ್ತು ರವಾನೆ ಕಂಪೆನಿಗಳೊಂದಿಗೆ ರಾಜ್ಯ ಸರ್ಕಾರ ಅಥವಾ ಮಂಡಲಿಯು ಮುಕ್ತಾಯಗೊಳಿಸಿದ ಕರಾರುಗಳು 14ನೇ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆ.ಪಿ.ಟಿ.ಸಿ.ಗೆ ಹಸ್ತಾಂತರಗೊಳ್ಳತಕ್ಕದ್ದು ಮತ್ತು ಕೆ.ಪಿ.ಟಿ.ಸಿ.ಯು, ಇತರ ಲೈಸೆನ್ಸ್‌ದಾರರಿಗೆ, ಸಗಟು

ಮಾರಾಟಗಳಿಗೆ, ವಿತರಣೆ ಮತ್ತು ಸರಬರಾಜಿಗಾಗಿ ಅಂಥ ಒಪ್ಪಂದಗಳ ಅಡಿಯಲ್ಲಿ ವಿದ್ಯುತ್ತಿನ ಖರೀದಿ ಅಥವಾ ರವಾನೆಯನ್ನು ಮುಂದುವರಿಸಬಹುದು ;

(ಕೆ) ಮೇಲ್ಕಂಡ (ಜೆ) ಖಂಡದಲ್ಲಿ ಉಲ್ಲೇಖಿಸಲಾದಂತೆ, ರಾಜ್ಯ ಸರ್ಕಾರದಿಂದ ಅಥವಾ ಮಂಡಲಿಯಿಂದ ಆಖೈರುಗೊಳಿಸಲಾದ ಕರಾರುಗಳ ಅಡಿಯಲ್ಲಿ ಕೆಪಿಟಿಸಿಯು ತನ್ನ ಹೊಣೆಗಾರಿಕೆಗಳನ್ನು ಸಂಪೂರ್ಣವಾಗಿ ನಿರ್ವಹಿಸಲು ಸಾಧ್ಯವಾಗುವಂತೆ ಮಾಡಲು ಅಗತ್ಯವಾದಷ್ಟುಮಟ್ಟಿಗೆ ವಿದ್ಯುತ್ತನ್ನು ಕೆಪಿಟಿಸಿಯಿಂದ ಖರೀದಿ ಮಾಡುವುದು ;

(ಎಲ್) ಇತರ ಲೈಸೆನ್ಸ್‌ದಾರರಿಗೆ ಅಥವಾ ಗ್ರಾಹಕರಿಗೆ ಸಗಟು ರೂಪದಲ್ಲಿ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವುದು.

(5) (3)ನೇ ಉಪ-ಪ್ರಕರಣದ ಸಾಮಾನ್ಯತೆಗೆ ಬಾಧಕವಾಗದಂತೆ, ಆಯೋಗವು ಮಂಜೂರು ಮಾಡಿದ ಒಂದು ಲೈಸೆನ್ಸಿನಲ್ಲಿ ಒಳಗೊಂಡ ಷರತ್ತುಗಳು ಅಂಥ ಲೈಸೆನ್ಸ್‌ದಾರನನ್ನು ಶುಲ್ಕ ಪದ್ಧತಿ ರೂಪಿಸುವಂತೆ ಅಥವಾ ಆಯೋಗವು ನಿಗದಿಪಡಿಸಬಹುದಾದ ಅಗತ್ಯತೆಗಳೊಂದಿಗೆ ಕಾಲಕಾಲಕ್ಕೆ ಅದರ ದರಗಳನ್ನು ಲೆಕ್ಕ ಹಾಕುವಂತೆ ಅಗತ್ಯಪಡಿಸತಕ್ಕದ್ದು.

(6) ಭಾರತ ವಿದ್ಯುಚ್ಛಕ್ತಿ ಅಧಿನಿಯಮ, 1910ರ ಅನುಸೂಚಿಯಲ್ಲಿ ಒಳಗೊಂಡ ಉಪಬಂಧಗಳು ಅವುಗಳನ್ನು ವ್ಯಕ್ತವಾಗಿ ಮಾರ್ಪಾಟು ಮಾಡಿದ ಅಥವಾ ಸರಬರಾಜು ಲೈಸೆನ್ಸ್‌ನಿಂದ ಹೊರತುಪಡಿಸಿರುವುದನ್ನುಳಿದು ಈ ಭಾಗದ ಅಡಿಯಲ್ಲಿ ಮಂಜೂರಾದ ಪ್ರತಿಯೊಂದು ಸರಬರಾಜು ಲೈಸೆನ್ಸ್‌ನೊಂದಿಗೆ ಮತ್ತು ಅದರ ಭಾಗದಲ್ಲಿ ಒಳಗೊಂಡಿರುವುದಾಗಿ ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು, ಆಯೋಗವು ಮಾಡಲು ಅಧಿಕಾರ ಹೊಂದಿರುವ ಅಂಥ ಸೇರ್ಪಡೆಗಳು, ಮಾರ್ಪಾಟುಗಳು ಅಥವಾ ವಿನಾಯಿತಿಗಳಿಗೆ ಒಳಪಟ್ಟು, ರಾಜ್ಯದಲ್ಲಿ ಅದರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಲೈಸೆನ್ಸಿನಿಂದ ಅಧಿಕಾರ ನೀಡಲಾದ ಉದ್ಯಮಕ್ಕೆ ಅನ್ವಯವಾಗತಕ್ಕದ್ದು :

ಪರಂತು, ಇತರ ಲೈಸೆನ್ಸ್‌ದಾರರಿಗೆ ಅವರಿಂದ ಹಂಚಿಕೆಗಾಗಿ ಆಯೋಗವು ವಿದ್ಯುತ್ತಿನ ಸರಬರಾಜಿಗಾಗಿ ಸರಬರಾಜು ಲೈಸೆನ್ಸ್ ಮಂಜೂರು ಮಾಡಿದ್ದಲ್ಲಿ ಸದರಿ ಅನುಸೂಚಿಯ IV, V, VI, VII, VIII, ಮತ್ತು XIIನೇ ಖಂಡಗಳ ಉಪಬಂಧಗಳು, ಅಂಥ ಲೈಸೆನ್ಸ್‌ನ ಅಂಥ ಸರಬರಾಜಿಗೆ ಸಂಬಂಧಪಡುವಷ್ಟರಮಟ್ಟಿಗೆ ಸರಬರಾಜು ಲೈಸೆನ್ಸ್‌ನಲ್ಲಿ ಸೇರಿರುವುದಾಗಿ ಭಾವಿಸತಕ್ಕದ್ದಲ್ಲ.

(7) ಲೈಸೆನ್ಸಿನಲ್ಲಿ ಒಳಗೊಂಡ ಷರತ್ತುಗಳು, ಷರತ್ತುಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಥವಾ ಅವುಗಳ ಮೂಲಕ ಅಥವಾ ಅಡಿಯಲ್ಲಿ ನಿರ್ಧರಿಸಬಹುದಾದ ಅಂಥ ಸಮಯಗಳಲ್ಲಿ, ಅಂಥ ರೀತಿಯಲ್ಲಿ ಮತ್ತು ಅಂಥ ಸಂದರ್ಭಗಳಲ್ಲಿ ಆ ಷರತ್ತುಗಳು ಪರಿಣಾಮಕಾರಿಯಾಗಿರುವುದು ನಿಂತುಹೋಗಬಹುದು ಅಥವಾ ಅವುಗಳನ್ನು ಮಾರ್ಪಾಟುಗೊಳಿಸಬಹುದು ಎಂದು ಉಪಬಂಧ ಕಲ್ಪಿಸುವ ಷರತ್ತುಗಳನ್ನು ಒಳಗೊಳ್ಳಬಹುದು.

(8) ಲೈಸೆನ್ಸಿನಲ್ಲಿ ಮೇಲ್ಕಂಡ (7)ನೇ ಉಪ ಪ್ರಕರಣದ ಕಾರಣದಿಂದಾಗಿ ಸೇರಿಸಲಾದ ಯಾವುವೇ ಉಪಬಂಧಗಳು, ಲೈಸೆನ್ಸಿನ ಷರತ್ತುಗಳ ತಿದ್ದುಪಡಿಗೆ ಸಂಬಂಧಪಟ್ಟಂತೆ 22(5) ಮತ್ತು 23ನೇ ಪ್ರಕರಣಗಳ ಅಡಿಯಲ್ಲಿ ಮಾಡಿದ ಉಪಬಂಧಗಳಿಗೆ ಹೆಚ್ಚುವರಿಯಾಗಿ ಪರಿಣಾಮಕಾರಿಯಾಗಿರತಕ್ಕದ್ದು.

(9) ಲೈಸೆನ್ಸಿನ ನಿಬಂಧನೆಗಳಲ್ಲಿ ಸೂಚಿಸಿದ್ದ ಹೊರತು, ಒಬ್ಬ ವ್ಯಕ್ತಿಗೆ ಈ ಪ್ರಕರಣದ ಅಡಿಯಲ್ಲಿ ಮಾಡಲಾದ ಲೈಸೆನ್ಸಿನ ಮಂಜೂರಾತಿಯು, ಅಂಥ ಉದ್ದೇಶಕ್ಕಾಗಿ ಸರಬರಾಜಿನ ಅದೇ ಪ್ರದೇಶದೊಳಗೆ ಬೇರೊಬ್ಬ ವ್ಯಕ್ತಿಗೆ

ಲೈಸೆನ್ಸ್ ನೀಡಿಕೆಯನ್ನು ನಿರ್ಬಂಧಿಸತಕ್ಕದ್ದಲ್ಲ ಮತ್ತು ಲೈಸೆನ್ಸ್‌ದಾರನು ಯಾವುದೇ ಪ್ರತ್ಯೇಕತೆಯ ಹಕ್ಕನ್ನು ಸಾಧಿಸತಕ್ಕದ್ದಲ್ಲ.

(10) ಈ ಅಧಿನಿಯಮಕ್ಕೆ ಸಂಬಂಧಿಸಿದಂತೆ ಆಯೋಗದಿಂದ ಮಂಜೂರಾದ ಲೈಸೆನ್ಸಿನಲ್ಲಿ ರಾಜ್ಯಾದಾಯದ ವಸೂಲಿಗಾಗಿ ವಿದ್ಯುಚ್ಛಕ್ತಿಯ ಕಳವು, ಮೀಟರಿನಲ್ಲಿ ಹಸ್ತಕ್ಷೇಪ ಮಾಡುವುದು, ವಿದ್ಯುಚ್ಛಕ್ತಿಯ ಮಾರ್ಗಪಲ್ಲಟ ಮಾಡುವುದು ಮತ್ತು ಗ್ರಾಹಕರಿಗೆ ವಿದ್ಯುಚ್ಛಕ್ತಿ ವಿತರಣೆ ಮತ್ತು ಸರಬರಾಜು ಮಾಡುವ ವಿಷಯಗಳಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಲೈಸೆನ್ಸ್‌ದಾರನಿಗೆ ಬಲ ಮತ್ತು ಅಧಿಕಾರವಿರುವಂತೆ ಉಪಬಂಧಿಸಬಹುದು.

(11) ಭಾರತ ವಿದ್ಯುಚ್ಛಕ್ತಿ ಅಧಿನಿಯಮ, 1910 ಮತ್ತು ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948 ಇವುಗಳ ಉಪಬಂಧಗಳ ಅಡಿಯಲ್ಲಿ ಲೈಸೆನ್ಸ್‌ದಾರರಿಗೆ ಮತ್ತು ವ್ಯಕ್ತಿಗಳಿಗೆ ಕೊಡಬಹುದಾದ ಅಂಥ ಅಧಿಕಾರವನ್ನು ಮತ್ತು ಬಲವನ್ನು ಚಲಾಯಿಸುವಂತೆ ಲೈಸೆನ್ಸ್‌ದಾರರಿಗೆ ಮತ್ತು ವ್ಯಕ್ತಿಗಳಿಗೆ ಅಧಿಕಾರ ನೀಡುವ ಹಕ್ಕನ್ನು ಆಯೋಗವು ಹೊಂದಿರತಕ್ಕದ್ದು.

**20. ಲೈಸೆನ್ಸಿನ ಅಗತ್ಯತೆಯಿಂದ ವಿನಾಯಿತಿಗಳು.**- (1) ಸರಬರಾಜು ಲೈಸೆನ್ಸ್ ಹೊಂದಿರುವ ಅಗತ್ಯತೆಯಿಂದ ವಿನಾಯಿತಿ ಮಂಜೂರು ಮಾಡುವುದಕ್ಕೆ ವಿನಿಯಮಗಳನ್ನು ಆಯೋಗವು ರಚಿಸಬಹುದು. ಆದರೆ, ಅವು ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಷರತ್ತುಗಳ (ಯಾವುವಾದರು ಇದ್ದಲ್ಲಿ) ಪಾಲನೆಗೆ ಒಳಪಟ್ಟಿರತಕ್ಕದ್ದು, ಪರಂತು, ಅಂಥ ಯಾವುವೇ ವಿನಿಯಮಗಳ ಮೇರೆಗೆ ಆಯೋಗವು ಯಾವುದೇ ವಿನಾಯಿತಿಯನ್ನು ಈ ಮುಂದಿನವರ ಒಪ್ಪಿಗೆಯ ಹೊರತು ಮಂಜೂರು ಮಾಡತಕ್ಕದ್ದಲ್ಲ: -

(i) ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಬೇಕಾಗಿರುವ ಪ್ರದೇಶದಲ್ಲಿ ಸ್ಥಾಪಿತವಾದ ಸ್ಥಳೀಯ ಪ್ರಾಧಿಕಾರ, ಯಾವುದಾದರೂ ಇದ್ದಲ್ಲಿ ;

(ii) ರಕ್ಷಣಾ ಉದ್ದೇಶಗಳಿಗಾಗಿ ಕೇಂದ್ರ ಸರ್ಕಾರದ ಅಧಿಭೋಗದಲ್ಲಿರುವ ಯಾವುದೇ ದಂಡುಪ್ರದೇಶ, ವಿಮಾನನಿಲ್ದಾಣ, ಕೋಟೆ, ಆಯುಧಶಾಲೆ, ನೌಕಾನೆಲೆ ಅಥವಾ ಶಿಬಿರ ಅಥವಾ ಯಾವುದೇ ಕಟ್ಟಡ ಅಥವಾ ಸ್ಥಳದ ಭಾಗವಾಗಿರುವ ಪ್ರದೇಶ, ಇವುಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡಬೇಕಾದ ಯಾವುದೇ ಸಂದರ್ಭದಲ್ಲಿ, ಕೇಂದ್ರ ಸರ್ಕಾರ ;

(iii) ಒಬ್ಬ ಲೈಸೆನ್ಸ್‌ದಾರನ ಸರಬರಾಜು ಪ್ರದೇಶದೊಳಗೆ ಬರುವ ಯಾವುದೇ ಪ್ರದೇಶದಲ್ಲಿ ಆ ಲೈಸೆನ್ಸ್‌ದಾರ :

ಪರಂತು, (ii)ನೇ ಖಂಡದ ಅಡಿಯಲ್ಲಿ ಬರುವ ಪ್ರಕರಣದ ಹೊರತು, ಅಂಥ ಒಪ್ಪಿಗೆಯನ್ನು ಸಕಾರಣವಿಲ್ಲದೇ ತಡೆಹಿಡಿಯಲಾಗಿದೆ ಎಂದು ಆಯೋಗವು ತೃಪ್ತಿ ಹೊಂದಿದಲ್ಲಿ ಅಂಥ ಯಾವುದೇ ಒಪ್ಪಿಗೆಯ ಅಗತ್ಯವಿರತಕ್ಕದ್ದಲ್ಲ.

(2) ಒಂದು ವಿನಾಯಿತಿಯನ್ನು ,-

(ಎ) ಒಂದು ನಿರ್ದಿಷ್ಟ ಪ್ರವರ್ಗದ ವ್ಯಕ್ತಿಗಳಿಗೆ ; ಅಥವಾ

(ಬಿ) ಒಬ್ಬ ನಿರ್ದಿಷ್ಟ ವ್ಯಕ್ತಿಗೆ ; ಅಥವಾ

(ಸಿ) ಒಂದು ನಿರ್ದಿಷ್ಟ ಅವಧಿಗಾಗಿ,

- ಮಂಜೂರು ಮಾಡಬಹುದು.

(3) ಮಂಜೂರು ಮಾಡಲಾದ ವಿನಾಯಿತಿಯನ್ನು ಆಯೋಗವು ತಾನು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು.

(4) ಮಂಜೂರು ಮಾಡಲಾದ ವಿನಾಯಿತಿಯನ್ನು ಆಯೋಗವು, ಯಾವುದೇ ಸಮಯದಲ್ಲಿ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ರದ್ದುಗೊಳಿಸಬಹುದು.

(5) ಒಂದು ವಿನಾಯಿತಿಯು, ಈ ಹಿಂದೆಯೇ ರದ್ದುಗೊಳಿಸಲಾಗಿದ್ದ ಹೊರತು, ವಿನಾಯಿತಿಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಅವಧಿಗಾಗಿ ಅಥವಾ ವಿನಾಯಿತಿಯ ಮೇರೆಗೆ ಅಥವಾ ಅದರ ಅಡಿಯಲ್ಲಿ ಜಾರಿಯಲ್ಲಿ ಮುಂದುವರಿಯತಕ್ಕದ್ದು.

**21. ಲೈಸೆನ್ಸ್‌ದಾರರ ಸಾಮಾನ್ಯ ಕರ್ತವ್ಯಗಳು ಮತ್ತು ಅಧಿಕಾರಗಳು.-** (1) ಒಂದು ನಿರ್ದಿಷ್ಟ ಪ್ರದೇಶಕ್ಕೆ ಸಂಬಂಧಿಸಿದಂತೆ, ಸರಬರಾಜಿನ ಪ್ರದೇಶದಲ್ಲಿ ಸಂದರ್ಭಾನುಸಾರ ವಿದ್ಯುತ್ ಸರಬರಾಜನ್ನು ಅಥವಾ ರವಾನೆಯನ್ನು ಅಭಿವೃದ್ಧಿ ಪಡಿಸುವುದು, ಒದಗಿಸುವುದು ಮತ್ತು ಸಮರ್ಥ, ಸಹಯೋಗದ ಮತ್ತು ಮಿತವ್ಯಯದ ಒಂದು ವ್ಯವಸ್ಥೆಯನ್ನು ಒದಗಿಸುವುದು ಸರಬರಾಜು ಲೈಸೆನ್ಸ್‌ದಾರನ ಅಥವಾ ವಿದ್ಯುತ್ ರವಾನೆಯ ಲೈಸನ್ಸ್‌ದಾರನ ಕರ್ತವ್ಯವಾಗಿರತಕ್ಕದ್ದು.

(2) ತನ್ನ ಕರ್ತವ್ಯಗಳನ್ನು ನಿರ್ವಹಿಸುವ ಪ್ರತಿಯೊಬ್ಬ ಲೈಸೆನ್ಸ್‌ದಾರನ ವಿದ್ಯುತ್ ವ್ಯವಸ್ಥೆ ಮತ್ತು ವಿದ್ಯುತ್ ಸರಬರಾಜು ಲೈನುಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಸಂಬಂಧಿಸಿದ ನಿಬಂಧನೆ ಮತ್ತು ಷರತ್ತುಗಳ ಸಂಬಂಧದಲ್ಲಿ ಕಾಲಕಾಲಕ್ಕೆ ರೂಪಿಸಲಾಗುವ ವಿನಿಯಮಗಳ ಉಪಬಂಧಗಳನ್ನು ಪಾಲಿಸತಕ್ಕದ್ದು.

(3) (4)ನೇ ಉಪ ಪ್ರಕರಣಕ್ಕೊಳಪಟ್ಟು, ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910ರ 12ರಿಂದ 19ನೇ ಪ್ರಕರಣಗಳು (ಕಾಮಗಾರಿಗಳನ್ನು ನಿರ್ವಹಿಸುವುದಕ್ಕೆ ಸಂಬಂಧಪಟ್ಟಂತೆ) ಈ ಅಧಿನಿಯಮದ ಮೇರೆಗೆ ಒಂದು ಲೈಸೆನ್ಸಿನ ಮೂಲಕ ಅಧಿಕಾರ ಹೊಂದಿರುವ ಒಬ್ಬ ವ್ಯಕ್ತಿಗೆ ಸಂಬಂಧಿಸಿದಂತೆ ಆ ಅಧಿನಿಯಮದ ಮೇರೆಗೆ ಅವನು ಒಬ್ಬ ಲೈಸೆನ್ಸುದಾರನಾಗಿದ್ದರೆ ಹೇಗೋ ಹಾಗೆಯೇ ವಿದ್ಯುತ್ತನ್ನು ರವಾನಿಸಲು ಅಥವಾ ಸರಬರಾಜು ಮಾಡಲು ಪರಿಣಾಮ ಹೊಂದಿರತಕ್ಕದ್ದು.

(4) ಮೇಲೆ (3)ನೇ ಉಪ ಪ್ರಕರಣದಲ್ಲಿ ನಮೂದಿಸಲಾದ ಪ್ರಕರಣಗಳಲ್ಲಿ ಯಾವುದೇ ಪ್ರಕರಣವನ್ನು ಈ ಲೈಸೆನ್ಸಿನ ಮೇರೆಗೆ ಲೈಸೆನ್ಸುದಾರನಿಗೆ ಅನ್ವಯಿಸಿದ್ದರೆ ಲೈಸೆನ್ಸಿನಲ್ಲಿ ಸೇರಿಸಬಹುದಾದಂತೆ ಅಂಥ ನಿಬಂಧನೆಗಳು, ವಿನಾಯಿತಿಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಪರಿಣಾಮ ಹೊಂದಿರತಕ್ಕದ್ದು.

**22. ಲೈಸೆನ್ಸುಗಳ ರದ್ದಿಯಾತಿ.-** (1) ಆಯೋಗವು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳು ಅಥವಾ ವಿನಿಯಮಗಳ ಅಥವಾ ಲೈಸೆನ್ಸಿನ ನಿಬಂಧನೆಗಳು ಮತ್ತು ಷರತ್ತುಗಳ ಅಡಿಯಲ್ಲಿ ಹೊಣೆಗಾರಿಕೆಗಳನ್ನು ನಿರ್ವಹಿಸುವುದಕ್ಕೆ ಸಂಬಂಧಿಸಿದಂತೆ ಯಾರೇ ಲೈಸೆನ್ಸುದಾರನ ನಡತೆ ಅಥವಾ ಕಾರ್ಯನಿರ್ವಹಣೆಯ ಬಗ್ಗೆ,-

(ಎ) ಯಾವೊಬ್ಬ ಗ್ರಾಹಕ ಅಥವಾ ಗ್ರಾಹಕ ಸಂಘ ಅಥವಾ ವ್ಯಾಪಾರೀ ಸಂಘದಿಂದ ಯಾವುದೇ ದೂರನ್ನು ಸ್ವೀಕರಿಸಿದ ನಂತರ ; ಅಥವಾ

(ಬಿ) ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ ಅಥವಾ ಕೇಂದ್ರೀಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಆಯೋಗಕ್ಕೆ ಮಾಡಿದ ಒಂದು ಉಲ್ಲೇಖವನ್ನು ಸ್ವೀಕರಿಸಿದ ನಂತರ ; ಅಥವಾ

(ಸಿ) ವಿದ್ಯುಚ್ಛಕ್ತಿ ಉತ್ಪಾದನೆ, ರವಾನೆ, ವಿತರಣೆ ಅಥವಾ ಸರಬರಾಜು ಮಾಡುವ ಯಾವುದೇ ಕಂಪನಿ ಅಥವಾ ವ್ಯಕ್ತಿಯಿಂದ ಒಂದು ದೂರನ್ನು ಸ್ವೀಕರಿಸಿದ ನಂತರ ; ಅಥವಾ

(ಡಿ) ತನ್ನ ಸ್ವಂತ ತಿಳಿವಳಿಕೆಯ ಮೇರೆಗೆ ಅಥವಾ ಯಾವುದೇ ಮೂಲದಿಂದ ಮಾಹಿತಿಯನ್ನು ಪಡೆದ ನಂತರ

-ವಿಚಾರಣೆಯನ್ನು ನಡೆಸಬಹುದು.

(2) ಅಂತಹ ವಿಚಾರಣೆಯನ್ನು ನಡೆಸಿದ ನಂತರ, ಆಯೋಗವು ಈ ಮುಂದಿನ ಸಂದರ್ಭಗಳಲ್ಲಿ ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ಲೈಸೆನ್ಸನ್ನು ರದ್ದುಪಡಿಸುವುದು ಅಗತ್ಯವೆಂದು ಅಭಿಪ್ರಾಯಪಟ್ಟರೆ, ಎಂದರೆ :-

(ಎ) ಲೈಸೆನ್ಸುದಾರನು ಈ ಅಧಿನಿಯಮದ ಅಥವಾ ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910ರ ಅಥವಾ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ ಅಥವಾ ಈ ಅಧಿನಿಯಮದ ಉಪಬಂಧಗಳೊಂದಿಗೆ ಓದಿಕೊಂಡಂತೆ ರಾಜ್ಯಕ್ಕೆ ಅನ್ವಯವಾಗುವಷ್ಟರಮಟ್ಟಿಗೆ ಅದರ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ಅಥವಾ ಅಡಿಯಲ್ಲಿ ಅಗತ್ಯಪಡಿಸಲಾಗಿರುವ ಯಾವುದೇ ಕಾರ್ಯವನ್ನು ಮಾಡುವಲ್ಲಿ ಅವನು ಉದ್ದೇಶಪೂರ್ವಕವಾಗಿ ಅಥವಾ ಅಸಮಂಜಸವಾಗಿ ತಪ್ಪಿದ್ದಾನೆಂದು ಆಯೋಗವು ಅಭಿಪ್ರಾಯಪಟ್ಟರೆ ;

(ಬಿ) ಲೈಸೆನ್ಸುದಾರನು ತನ್ನ ಲೈಸೆನ್ಸಿನ ಯಾವುವೇ ನಿಬಂಧನೆಗಳು ಮತ್ತು ಷರತ್ತುಗಳನ್ನು ಉಲ್ಲಂಘಿಸಿದ್ದು ಲೈಸೆನ್ಸನ್ನು ರದ್ದುಪಡಿಸಬೇಕಾಗಿದೆಯೆಂಬುದನ್ನು ಅಂಥ ಉಲ್ಲಂಘನೆಯು ಅಂಥ ಲೈಸೆನ್ಸಿನ ಮೂಲಕ ಸ್ಪಷ್ಟವಾಗಿ ಪ್ರಕಟವಾಗಿದ್ದರೆ ;

(ಸಿ) ಲೈಸೆನ್ಸುದಾರನು, ತನ್ನ ಲೈಸೆನ್ಸಿನಲ್ಲಿ ನಿರ್ದಿಷ್ಟಪಡಿಸಲಾದ ಅವಧಿಯೊಳಗಾಗಿ ಅಥವಾ ಆಯೋಗವು ಆದೇಶದ ಮೂಲಕ ಅನುಮತಿಸಬಹುದಾದ ಯಾವುದೇ ಹೆಚ್ಚಿನ ಅವಧಿಯಲ್ಲಿ,-

(i) ತನ್ನ ಲೈಸೆನ್ಸಿನಲ್ಲಿ ವಿಧಿಸಲಾಗಿರುವ ಕರ್ತವ್ಯಗಳನ್ನು ಮತ್ತು ಬಾಧ್ಯತೆಗಳನ್ನು ಪೂರ್ಣವಾಗಿ ಮತ್ತು ಸಮರ್ಥ ರೀತಿಯಲ್ಲಿ ನಿರ್ವಹಿಸುವ ಸ್ಥಿತಿಯಲ್ಲಿ ತಾನು ಇರುವುದಾಗಿ ಆಯೋಗಕ್ಕೆ ಮನವರಿಕೆಯಾಗುವ ರೀತಿಯಲ್ಲಿ ತೋರಿಸಲು ; ಮತ್ತು

(ii) ತನ್ನ ಲೈಸೆನ್ಸಿನ ಮೂಲಕ ಅಗತ್ಯಪಡಿಸಲಾಗಿರುವಂತೆ ಠೇವಣಿಯನ್ನು ಅಥವಾ ಭದ್ರತೆಯನ್ನು ಒದಗಿಸಲು

- ವಿಫಲನಾಗಿರುವಲ್ಲಿ ;

(ಡಿ) ಈ ಲೈಸೆನ್ಸಿನ ಮೂಲಕ ವಿಧಿಸಲಾದಂತೆ, ಲೈಸೆನ್ಸುದಾರನ ಹಣಕಾಸು ಪರಿಸ್ಥಿತಿಯು, ಆತನ ಕರ್ತವ್ಯಗಳನ್ನು ಮತ್ತು ಹೊಣೆಗಾರಿಕೆಗಳನ್ನು ಪೂರ್ಣವಾಗಿ ಮತ್ತು ಸಮರ್ಥವಾಗಿ ನಿರ್ವಹಿಸಲು ಅಸಮರ್ಥವಾಗಿರುವಂಥದ್ದಾಗಿದೆ ಎಂಬುದಾಗಿ ಆಯೋಗವು ಅಭಿಪ್ರಾಯಪಟ್ಟಲ್ಲಿ ,

- ಲೈಸೆನ್ಸನ್ನು ರದ್ದುಪಡಿಸಬಹುದು.

(3) ಉಪ ಪ್ರಕರಣ (1) ಮತ್ತು (2)ರ ಉಪಬಂಧಗಳಲ್ಲಿ ಏನೇ ಇದ್ದರೂ, ಲೈಸೆನ್ಸುದಾರನ ಅರ್ಜಿಯ ಅಥವಾ ಒಪ್ಪಿಗೆಯ ಮೇಲೆ ಮತ್ತು ಲೈಸೆನ್ಸುದಾರನು ಸ್ಥಳೀಯ ಪ್ರಾಧಿಕಾರವಾಗಿರದಿದ್ದಲ್ಲಿ, ಸಂಬಂಧಪಟ್ಟ ಯಾವುದೇ ಸ್ಥಳೀಯ ಪ್ರಾಧಿಕಾರ ಇದ್ದರೆ ಅದರೊಂದಿಗೆ ಸಮಾಲೋಚಿಸಿದ ನಂತರ, ಸಾರ್ವಜನಿಕ ಹಿತಾಸಕ್ತಿಯ

ಮೇರೆಗೆ ಲೈಸೆನ್ಸನ್ನು ರದ್ದು ಮಾಡುವುದು ಅಗತ್ಯವೆಂದು ಆಯೋಗವು ಅಭಿಪ್ರಾಯಪಟ್ಟಲ್ಲಿ ತಾನು ಸೂಕ್ತವೆಂದು ಭಾವಿಸುವಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇರೆಗೆ ರವಾನೆ ಅಥವಾ ಸರಬರಾಜಿನ ಪೂರ್ಣ ಪ್ರದೇಶ ಅಥವಾ ಅದರ ಯಾವುದೇ ಭಾಗಕ್ಕಾಗಿ ಲೈಸೆನ್ಸನ್ನು ರದ್ದುಪಡಿಸಬಹುದು.

(4) ಆಯೋಗವು, ಲೈಸೆನ್ಸುದಾರನಿಗೆ ಅವನ ಲೈಸೆನ್ಸನ್ನು ಯಾವ ಕಾರಣಗಳ ಮೇಲೆ ರದ್ದುಪಡಿಸಲು ಉದ್ದೇಶಿಸಲಾಗಿದೆ ಎಂಬ ಬಗ್ಗೆ 3 ತಿಂಗಳಿಗಿಂತ ಕಡಿಮೆಯಿಲ್ಲದಂತೆ ಲಿಖಿತದಲ್ಲಿ ನೋಟೀಸನ್ನು ನೀಡಿದ ಹೊರತು ಮತ್ತು ಆ ನೋಟೀಸಿನಲ್ಲಿ ಉದ್ದೇಶಿಸಲಾದ ರದ್ದತಿಯ ವಿರುದ್ಧ ಅಂಥ ಸಮಯದೊಳಗೆ ಲೈಸೆನ್ಸುದಾರನು ತೋರಿಸಿರುವ ಯಾವುದೇ ಕಾರಣವನ್ನು ಪರಿಶೀಲಿಸಿದ ಹೊರತು ಮತ್ತು ಅಂಥ ರದ್ದಿಯಾತಿಗೆ ಕಾರಣಗಳನ್ನು ನೀಡಿರುವ ಹೊರತು (2)ನೇ ಅಥವಾ (3)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ಲೈಸೆನ್ಸನ್ನು ರದ್ದುಪಡಿಸತಕ್ಕದ್ದಲ್ಲ.

(5) ಆಯೋಗವು ಲೈಸೆನ್ಸನ್ನು ರದ್ದುಪಡಿಸುವ ಬದಲು, ತಾನು ವಿಧಿಸುವುದು ಸೂಕ್ತವೆಂದು ಭಾವಿಸುವ ಅಂಥ ಇನ್ನೂ ಹೆಚ್ಚಿನ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ಜಾರಿಯಲ್ಲಿ ಉಳಿಯಲು ಅನುಮತಿ ನೀಡಬಹುದು ಮತ್ತು ಹಾಗೆ ವಿಧಿಸಲಾದ ಯಾವುದೇ ಹೆಚ್ಚಿನ ನಿಬಂಧನೆ ಅಥವಾ ಷರತ್ತುಗಳಿಗೆ ಲೈಸೆನ್ಸುದಾರನು ಬದ್ಧನಾಗಿರತಕ್ಕದ್ದು ಮತ್ತು ಅವುಗಳನ್ನು ಪಾಲಿಸತಕ್ಕದ್ದು ಮತ್ತು ಅವು ಲೈಸೆನ್ಸಿನಲ್ಲಿ ಒಳಗೊಂಡಿದ್ದರೆ ಹೇಗೋ ಹಾಗೆ ಅದೇ ಬಲ ಮತ್ತು ಪರಿಣಾಮವನ್ನು ಹೊಂದಿರತಕ್ಕದ್ದು.

**23. ಲೈಸೆನ್ಸ್‌ಗಳ ತಿದ್ದುಪಡಿ.**- (1) ಆಯೋಗವು ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ಅಥವಾ ಅರ್ಜಿದಾರನು ಮಾಡಿಕೊಂಡ ಮನವಿಯ ಮೇಲೆ ಅಥವಾ ಇತರ ರೀತಿಯಲ್ಲಿ ಲೈಸೆನ್ಸ್‌ದಾರನು ಸ್ಥಳೀಯ ಪ್ರಾಧಿಕಾರವಾಗಿರದಿದ್ದಲ್ಲಿ ಸಂಬಂಧಪಟ್ಟ ಯಾವುದೇ ಸ್ಥಳೀಯ ಪ್ರಾಧಿಕಾರದೊಂದಿಗೆ ಸಮಾಲೋಚನೆ ನಡೆಸಿದ ನಂತರ ಅಧಿನಿಯಮದ ಧ್ಯೇಯೋದ್ದೇಶಗಳನ್ನು ಗಣನೆಗೆ ತೆಗೆದುಕೊಂಡು ಲೈಸೆನ್ಸಿನ ನಿಬಂಧನೆಗಳು ಮತ್ತು ಷರತ್ತುಗಳಲ್ಲಿ ಮಾರ್ಪಾಟು ಮತ್ತು ತಿದ್ದುಪಡಿಗಳನ್ನು ಮಾಡಲು ಅನುಮತಿಸಬೇಕಾಗುತ್ತದೆ ಅಥವಾ ಅಗತ್ಯಪಡಿಸಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟಲ್ಲಿ ಹಾಗೆ ಮಾಡಬಹುದಾಗಿದೆ:

ಪರಂತು, 19ನೇ ಪ್ರಕರಣದ(7)ನೇ ಉಪ ಪ್ರಕರಣದಲ್ಲಿ ಅಥವಾ 22ನೇ ಪ್ರಕರಣದ (5)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಲೈಸೆನ್ಸಿನ ಷರತ್ತಿಗೆ ಅನುಸಾರವಾಗಿ ಮಾಡುವ ಮಾರ್ಪಾಟು ಅಥವಾ ತಿದ್ದುಪಡಿಯನ್ನು ಹೊರತುಪಡಿಸಿ ಅಂಥ ಯಾವುದೇ ಮಾರ್ಪಾಟುಗಳನ್ನಾಗಲಿ ಅಥವಾ ತಿದ್ದುಪಡಿಗಳನ್ನಾಗಲಿ ಲೈಸೆನ್ಸ್‌ದಾರನ ಅನುಮತಿಯ ಹೊರತು ಮಾಡತಕ್ಕದ್ದಲ್ಲ.

(2) ಲೈಸೆನ್ಸ್‌ದಾರನು, (1)ನೇ ಉಪ ಪ್ರಕರಣದ ಮೇರೆಗೆ ಯಾವುದೇ ಮಾರ್ಪಾಟು ಅಥವಾ ತಿದ್ದುಪಡಿಗಳನ್ನು ಪ್ರಸ್ತಾವಿಸಿ ಒಂದು ಅರ್ಜಿಯನ್ನು ಹಾಕಿಕೊಂಡಿರುವಲ್ಲಿ ಈ ಮುಂದಿನ ಉಪಬಂಧಗಳು ಅನ್ವಯವಾಗತಕ್ಕದ್ದು:-

(ಎ) ಲೈಸೆನ್ಸ್‌ದಾರನು, ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ವಿವರಗಳೊಂದಿಗೆ ಒಂದು ಅರ್ಜಿಯ ನೋಟೀಸನ್ನು ಪ್ರಕಟಿಸತಕ್ಕದ್ದು;

(ಬಿ) ಆಯೋಗವು, ಅರ್ಜಿಗೆ ಸಂಬಂಧಿಸಿದಂತೆ ನೋಟೀಸನ್ನು ಮೊದಲು ಪ್ರಕಟಿಸಿದ ದಿನಾಂಕದಿಂದ ಅಂಥ ಅವಧಿಯೊಳಗೆ, ಅಂದರೆ ಆಯೋಗವು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದ 45 ದಿನಗಳಿಗಿಂತ ಕಡಿಮೆಯಿರತಕ್ಕದ್ದಲ್ಲದ ಅವಧಿಯೊಳಗೆ ತಾನು ಸ್ವೀಕರಿಸಿರುವ ಎಲ್ಲಾ ಆಕ್ಷೇಪಣೆಗಳನ್ನು ಪರಿಗಣಿಸುವವರೆಗೆ ಯಾವುವೇ ಮಾರ್ಪಾಟುಗಳನ್ನಾಗಲಿ ಅಥವಾ ತಿದ್ದುಪಡಿಗಳನ್ನಾಗಲೀ ಮಾಡತಕ್ಕದ್ದಲ್ಲ ;

(ಸಿ) ರಕ್ಷಣಾ ಉದ್ದೇಶಗಳಿಗಾಗಿ ಕೇಂದ್ರ ಸರ್ಕಾರದ ಅಧಿಭೋಗದಲ್ಲಿರುವ ದಂಡು ಪ್ರದೇಶ, ವಿಮಾನ ನಿಲ್ದಾಣ, ಕೋಟೆ, ಆಯುಧ ಶಾಲೆ, ನೌಕಾನೆಲೆ, ಶಿಬಿರ ಅಥವಾ ಯಾವುದೇ ಕಟ್ಟಡ ಅಥವಾ ಸ್ಥಳಗಳು ಪೂರ್ಣವಾಗಿ ಅಥವಾ ಅದರ ಯಾವುದೇ ಭಾಗವು ಒಳಗೊಂಡಿರುವ ವಿದ್ಯುತ್ ಸರಬರಾಜಾಗುತ್ತಿದ್ದ ಅಂಥ ಪ್ರದೇಶದಲ್ಲಿ ಮಾರ್ಪಾಟುಗಳನ್ನು ಅಥವಾ ತಿದ್ದುಪಡಿಗಳನ್ನು ಮಾಡಲು ಉದ್ದೇಶಿಸಿರುವ ಅರ್ಜಿಯ ಸಂಬಂಧದಲ್ಲಿ ಆಯೋಗವು ಕೇಂದ್ರ ಸರ್ಕಾರದ ಅನುಮತಿಯಿಲ್ಲದೆ ಯಾವುವೇ ಮಾರ್ಪಾಟುಗಳನ್ನು ಅಥವಾ ತಿದ್ದುಪಡಿಗಳನ್ನು ಮಾಡತಕ್ಕದ್ದಲ್ಲ.

(3) ಲೈಸೆನ್ಸ್‌ದಾರನ ಅರ್ಜಿಯ ಮೇರೆಗಲ್ಲದೆ, ಒಂದು ಲೈಸೆನ್ಸಿನಲ್ಲಿ ಯಾವುದೇ ಮಾರ್ಪಾಟು ಅಥವಾ ತಿದ್ದುಪಡಿಗಳನ್ನು ಮಾಡುವುದಕ್ಕೆ ಮೊದಲು, ಆಯೋಗವು ಉದ್ದೇಶಿತ ಮಾರ್ಪಾಟು ಅಥವಾ ತಿದ್ದುಪಡಿಗಳನ್ನು ಪ್ರಕಟಿಸತಕ್ಕದ್ದು ಮತ್ತು ಆಯೋಗವು ವಿನಿಯಮಗಳ ಮೂಲಕ ಹಾಗೆ ನೋಟೀಸನ್ನು ಮೊದಲು ಪ್ರಕಟಿಸಿದ ದಿನಾಂಕದಿಂದ 45 ದಿನಗಳಿಗಿಂತ ಕಡಿಮೆಯಿಲ್ಲದ ಅವಧಿಯೊಳಗಾಗಿ ಅಂಥ ಉದ್ದೇಶಿತ ಮಾರ್ಪಾಟುಗಳು ಅಥವಾ ತಿದ್ದುಪಡಿಗಳ ಬಗ್ಗೆ ತಾನು ಸ್ವೀಕರಿಸಿರುವ ಎಲ್ಲಾ ಆಕ್ಷೇಪಣೆಗಳನ್ನು ಪರಿಶೀಲಿಸತಕ್ಕದ್ದು.

**24. ಲೈಸೆನ್ಸನ್ನು ರದ್ದುಪಡಿಸಿದ ಸಂದರ್ಭದಲ್ಲಿ ಉಪಬಂಧಗಳು.-** (1) ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910ರ 6 ಮತ್ತು 7ನೇ ಪ್ರಕರಣಗಳ ಉಪಬಂಧಗಳಲ್ಲಿ ಏನೇ ಇದ್ದರೂ ಆಯೋಗವು 22ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಒಂದು ಲೈಸೆನ್ಸನ್ನು ರದ್ದುಪಡಿಸುವಾಗ ಈ ಮುಂದಿನ ಉಪಬಂಧಗಳು ಅನ್ವಯಿಸತಕ್ಕದ್ದು :-

(ಎ) ಆಯೋಗವು, ಲೈಸೆನ್ಸುದಾರನಿಗೆ ಲೈಸೆನ್ಸು ರದ್ದಿಯಾತಿಯ ನೋಟೀಸನ್ನು ಜಾರಿ ಮಾಡತಕ್ಕದ್ದು ಮತ್ತು ಅಂಥ ರದ್ದಿಯಾತಿಯು ಯಾವ ದಿನಾಂಕದಿಂದ ಪರಿಣಾಮಕಾರಿಯಾಗತಕ್ಕದ್ದೆಂಬುದನ್ನು ಗೊತ್ತುಪಡಿಸತಕ್ಕದ್ದು;

(ಬಿ) ಆಯೋಗವು, ಯಾರ ಲೈಸೆನ್ಸನ್ನು ರದ್ದುಪಡಿಸಿದೆಯೋ ಅಂಥ ಲೈಸೆನ್ಸುದಾರನ ಉದ್ಯಮವನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ಅರ್ಜಿಗಳನ್ನು ಆಹ್ವಾನಿಸತಕ್ಕದ್ದು ಮತ್ತು ಉದ್ಯಮದ ಮಾರಾಟದ ಸಂಬಂಧದಲ್ಲಿ ನಿಬಂಧನೆಗಳು ಮತ್ತು ಷರತ್ತುಗಳನ್ನು ನಿರ್ಧರಿಸತಕ್ಕದ್ದು;

(ಸಿ) ಆಯೋಗವು, ಲೈಸೆನ್ಸ್‌ದಾರನಿಗೆ ಲಿಖಿತದಲ್ಲಿ ನೋಟೀಸ್ ಮೂಲಕ ಮಾರಾಟ ಮಾಡುವಂತೆ ಅಗತ್ಯಪಡಿಸಬಹುದು ಮತ್ತು ಅನಂತರ ಯಾರ ಅರ್ಜಿಯನ್ನು ಆಯೋಗವು ಅಂಗೀಕರಿಸಿದೆಯೋ ಅಂಥ ವ್ಯಕ್ತಿಗೆ ಲೈಸೆನ್ಸ್ ದಾರನು ಉದ್ಯಮವನ್ನು ಮಾರಾಟ ಮಾಡತಕ್ಕದ್ದು. ಅಂಥ ವ್ಯಕ್ತಿಯನ್ನು ಈ ಪ್ರಕರಣದಲ್ಲಿ 'ಖರೀದಿದಾರ' ಎಂಬುದಾಗಿ ಉಲ್ಲೇಖಿಸಲಾಗಿದೆ ;

(ಡಿ) ಆಯೋಗವು, ಅಂಥ ಉದ್ಯಮಕ್ಕಾಗಿ ಆಡಳಿತಗಾರರ ಮತ್ತು ವಿಶೇಷ ನಿರ್ದೇಶಕರುಗಳ ನೇಮಕಾತಿಯೂ ಸೇರಿದಂತೆ ಸೂಕ್ತ ರೀತಿಯಲ್ಲಿ ಪರಿಗಣಿಸಬಹುದಾದಂತೆ ವಿದ್ಯುಚ್ಛಕ್ತಿ ರವಾನೆ ಮತ್ತು ಸರಬರಾಜಿನ ನಿರ್ವಹಣೆಗಾಗಿ ಲೈಸೆನ್ಸುದಾರನ ಉದ್ಯಮದ ಸಂಬಂಧದಲ್ಲಿ ಮಧ್ಯಂತರ ಏರ್ಪಾಟುಗಳನ್ನು ಮಾಡಬಹುದು ; ಮತ್ತು

(ಇ) ಉದ್ಯಮದ ಲೈಸೆನ್ಸನ್ನು ಈ ಅಧಿನಿಯಮದ ಯಾವುವೇ ಉಪಬಂಧಗಳ ಅನುಸಾರವಾಗಿ ಒಬ್ಬ ಖರೀದಿದಾರನಿಗೆ ಮಾರಾಟ ಮಾಡಿದ ಆ ದಿನಾಂಕದಂದು ಅಥವಾ ಮುಂಚಿನ ಯಾವುದೇ ದಿನಾಂಕ ಯಾವುದಾದರೂ ಇದ್ದರೆ ಆ ದಿನಾಂಕದಂದು ಮತ್ತು ಅಲ್ಲಿಂದ ಪರಿಣಮಿಸುವಂತೆ ಆ ದಿನಾಂಕಕ್ಕೆ ಮುಂಚೆ ಪ್ರಾಪ್ತವಾಗಿರುವ ಯಾವುವೇ ಹೊಣೆಗಾರಿಕೆಗಳನ್ನು ಹೊರತುಪಡಿಸಿ, ಈ ಅಧಿನಿಯಮದ ಮೇರೆಗೆ ಲೈಸೆನ್ಸುದಾರನ

ಎಲ್ಲ ಹಕ್ಕುಗಳು, ಕರ್ತವ್ಯಗಳು, ಬಾಧ್ಯತೆಗಳು ಮತ್ತು ಹೊಣೆಗಾರಿಕೆಗಳು ನಿಂತುಹೋಗತಕ್ಕದ್ದು ಮತ್ತು ಇತ್ಯರ್ಥವಾಗಿರತಕ್ಕದ್ದು.

(2) (1)ನೇ ಉಪ ಪ್ರಕರಣದ ಮೇರೆಗೆ ಒಂದು ಉದ್ಯಮವನ್ನು ಮಾರಾಟ ಮಾಡಿರುವಲ್ಲಿ ಲೈಸೆನ್ಸುದಾರನ ಮೇಲೆ ವಿಧಿಸಲಾದ ಯಾವುವೇ ದಂಡಗಳು, ಚಾರ್ಜುಗಳು ಅಥವಾ ನಷ್ಟಪರಿಹಾರಕ್ಕೆ ಸಂಬಂಧಿಸಿದಂತೆ ಅಥವಾ ಆಯೋಗವು ಹೊರಡಿಸಿದ ಯಾವುವೇ ಆದೇಶಗಳ ಮೇರೆಗೆ ಲೈಸೆನ್ಸುದಾರನಿಂದ ಬಾಕಿ ಇರುವ ಅಥವಾ ಸಂದಾಯವಾಗಬೇಕಾಗಿರುವ ಯಾವುದೇ ಇತರೆ ಹಣಕ್ಕೆ ಸಂಬಂಧಿಸಿದಂತೆ *ಖರೀದಿ* ಬೆಲೆಯ ಯಾವುದೇ ಭಾಗವನ್ನು ಠೇವಣಿ ಇಡಬೇಕೆಂಬ ಆಯೋಗದ ನಿರ್ದೇಶನಗಳಿಗೊಳಪಟ್ಟು *ಖರೀದಿ*ದಾರನು ಸಲ್ಲಿಸಿದ ಅರ್ಜಿಗನುಸಾರವಾಗಿ ನಿರ್ಧರಿಸಲಾದಂತೆ ಉದ್ಯಮದ *ಖರೀದಿ* ಬೆಲೆಯನ್ನು *ಖರೀದಿ*ದಾರನು ಲೈಸೆನ್ಸುದಾರನಿಗೆ ಸಂದಾಯ ಮಾಡತಕ್ಕದ್ದು.

(3) ಉದ್ಯಮವನ್ನು ಮಾರಾಟ ಮಾಡುವಂತೆ ಲೈಸೆನ್ಸುದಾರನನ್ನು ಅಗತ್ಯಪಡಿಸಿ, ಆಯೋಗವು (1)ನೇ ಉಪ ಪ್ರಕರಣದ ಮೇರೆಗೆ ಯಾವುದೇ ನೋಟೀಸನ್ನು ನೀಡಿರುವಲ್ಲಿ, ಅದು ಅಂಥ ನೋಟೀಸ್ ಮೂಲಕ ಉದ್ಯಮವನ್ನು ಒಪ್ಪಿಸಲು ಲೈಸೆನ್ಸುದಾರನನ್ನು ಅಗತ್ಯಪಡಿಸಬಹುದು ಮತ್ತು ಅನಂತರ ಲೈಸೆನ್ಸುದಾರನು ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಒಂದು ದಿನಾಂಕದಂದು ಉದ್ಯಮದ *ಖರೀದಿ* ಬೆಲೆಯ ಸಂದಾಯವು ಇತ್ಯರ್ಥದಲ್ಲಿರುವಾಗ ಹೆಸರಿಸಲಾದ ಉದ್ಯಮವನ್ನು *ಖರೀದಿ*ದಾರನಿಗೆ ಒಪ್ಪಿಸತಕ್ಕದ್ದು:

ಪರಂತು, ಅಂಥ ಯಾವುದೇ ಸಂದರ್ಭದಲ್ಲಿ, *ಖರೀದಿ*ದಾರನು ಉದ್ಯಮವನ್ನು ಒಪ್ಪಿಸಿದ ದಿನಾಂಕದಿಂದ ಹಣಸಂದಾಯ ಮಾಡುವ ದಿನಾಂಕದವರೆಗೆ *ಖರೀದಿ* ಬೆಲೆಯ ಮೇಲೆ ಆಯೋಗವು ನಿರ್ಣಯಿಸಬಹುದಾದಂತೆ ಉದ್ಯಮವನ್ನು ಒಪ್ಪಿಸಿದ ಕಾಲದಲ್ಲಿ ಇದ್ದ ರಿಸರ್ವ್ ಬ್ಯಾಂಕ್‌ನ ಬಡ್ಡಿ ದರಕ್ಕಿಂತ ಕಡಿಮೆ ಇಲ್ಲದಂಥ ಶೇಕಡಾವಾರು ಬಡ್ಡಿಯನ್ನು ಸಂದಾಯ ಮಾಡತಕ್ಕದ್ದು.

(4) (1) (ಎ) ಉಪ ಪ್ರಕರಣದ ಮೇರೆಗೆ ನೀಡಲಾದ ನೋಟೀಸಿನಲ್ಲಿ ಲೈಸೆನ್ಸಿನ ರದ್ದಿಯಾತಿಯು ಜಾರಿಗೆ ಬರತಕ್ಕ ದಿನಾಂಕವೆಂದು ನಿಗದಿ ಪಡಿಸಲಾದ ದಿನಾಂಕಕ್ಕೆ ಮುಂಚೆ, ಲೈಸೆನ್ಸುದಾರನು ತನ್ನ ಉದ್ಯಮವನ್ನು ಮಾರಾಟ ಮಾಡಬೇಕೆಂದು ಅವನನ್ನು ಅಗತ್ಯಪಡಿಸುವ ಯಾವುದೇ ನೋಟೀಸನ್ನು ನೀಡದಿರುವಲ್ಲಿ ಅಥವಾ ಆ ಉಪ ಪ್ರಕರಣದ ಮೇರೆಗೆ ಯಾವುವೇ ಕಾರಣಗಳಿಗಾಗಿ ಉದ್ಯಮದ ಮಾರಾಟವು ಪರಿಣಾಮಕಾರಿಯಾಗಿರದಿದ್ದಲ್ಲಿ, ರಾಜ್ಯ ಸರ್ಕಾರವು ಲೈಸೆನ್ಸಿನ ರದ್ದಿಯಾತಿಯ ದಿನಾಂಕದಂದು ಉದ್ಯಮವನ್ನು ಸ್ವಾಧೀನಪಡಿಸಿಕೊಳ್ಳತಕ್ಕದ್ದು ಮತ್ತು ಲೈಸೆನ್ಸುದಾರನಿಗೆ ಉದ್ಯಮದ ಆರ್ಜನೆಯ ದಿನಾಂಕದಂದು ಇದ್ದಂತೆ ಉದ್ಯಮದ ಪುಸ್ತಕ ಮೌಲ್ಯವನ್ನು ಸಂದಾಯ ಮಾಡತಕ್ಕದ್ದು ಮತ್ತು ಒಬ್ಬ ಲೈಸೆನ್ಸುದಾರನಿಗೆ ಉದ್ಯಮವನ್ನು ಮಾರಾಟ ಮಾಡಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗುವ ಅಂಥ ಸಮಯದವರೆಗೆ ಲೈಸೆನ್ಸುದಾರನ ಎಲ್ಲಾ ಬಾಧ್ಯತೆಗಳನ್ನು ಪಾಲಿಸತಕ್ಕದ್ದು, ರಾಜ್ಯ ಸರ್ಕಾರವು ಯುಕ್ತವಾಗಿ ಕಾರ್ಯಸಾಧ್ಯವಾದಾಗ ಮಾರಾಟ ಮಾಡಲು ಪ್ರಯತ್ನಿಸತಕ್ಕದ್ದು. ರಾಜ್ಯ ಸರ್ಕಾರವು, ಒಬ್ಬ ಹೊಸ ಲೈಸೆನ್ಸ್‌ದಾರನಿಗೆ ಉದ್ಯಮವನ್ನು ಮಾರಾಟ ಮಾಡಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾದ ತರುವಾಯ, ಆರ್ಜನೆಯ ದಿನಾಂಕದಂದು ಇದ್ದಂತೆ ಉದ್ಯಮದ ಪುಸ್ತಕ ಮೌಲ್ಯವನ್ನು ಸಂದಾಯ ಮಾಡತಕ್ಕದ್ದು. ಪರಂತು, ಯಾವುದೇ ಪ್ರಕರಣದಲ್ಲಿ ಅಂಥ ಸಂದಾಯವನ್ನು ರಾಜ್ಯ ಸರ್ಕಾರವು ಹಾಗೆ ಆರ್ಜಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಮಾಡತಕ್ಕದ್ದು.

(5) ಅಂಥ ಲೈಸೆನ್ಸುದಾರನು ಆಯೋಗದ ಆದೇಶಗಳಿಂದ ಬಾಧಿತನಾಗಬಹುದಾಗಿದ್ದಾಗ್ಯೂ, ಮತ್ತು ಆಯೋಗದ ಆದೇಶಗಳನ್ನು ಪ್ರಶ್ನಿಸಿ ಕಾನೂನುಕ್ರಮ ಜರುಗಿಸುವ ಉದ್ದೇಶವಿದ್ದಾಗ್ಯೂ ಲೈಸೆನ್ಸುದಾರನು ಆಯೋಗದ ಆದೇಶಗಳನ್ನು ಯುಕ್ತವಾಗಿ ಪಾಲಿಸತಕ್ಕದ್ದು.

**25. ಲೈಸೆನ್ಸುದಾರರ ಮೇಲೆ ಸಾಮಾನ್ಯ ನಿರ್ಬಂಧ.**- (1) ಯಾವನೇ ಲೈಸೆನ್ಸುದಾರ ಅಥವಾ ಉತ್ಪಾದನಾ ಕಂಪನಿಯು, ಯಾವುದೇ ಕಾಲದಲ್ಲಿ, ಆಯೋಗದಿಂದ ಲಿಖಿತದಲ್ಲಿ ಪೂರ್ವ ಸಮ್ಮತಿ ಪಡೆಯದೆ ವಿದ್ಯುಚ್ಛಕ್ತಿಯ ಉತ್ಪಾದನೆ, ರವಾನೆ, ವಿತರಣೆ ಅಥವಾ ಸರಬರಾಜು ಮಾಡುವ ವ್ಯವಹಾರಕ್ಕೆ ಸಂಬಂಧಿಸಿದಮಟ್ಟಿಗೆ, ಹಾಗೂ ವಿದ್ಯುಚ್ಛಕ್ತಿ ಉತ್ಪಾದಿಸುವ, ರವಾನಿಸುವ, ಸರಬರಾಜು ಮಾಡುವ ಅಥವಾ ಉತ್ಪಾದಿಸಲು, ರವಾನಿಸಲು ಅಥವಾ ಸರಬರಾಜು ಮಾಡಲು ಉದ್ದೇಶಿಸಿರುವ ಯಾವನೇ ಇತರೆ ಲೈಸೆನ್ಸುದಾರನ ಅಥವಾ ವ್ಯಕ್ತಿಯಿಂದ ಖರೀದಿಯ ಮೂಲಕ ಅಥವಾ ಇತರ ರೀತಿಯಲ್ಲಿ ಲೈಸೆನ್ಸ್ ಅಥವಾ ಉದ್ಯಮವನ್ನು ಆರ್ಜಿಸತಕ್ಕದ್ದಲ್ಲ ಅಥವಾ ಅವರೊಂದಿಗೆ ಜೊತೆಗೂಡತಕ್ಕದ್ದಲ್ಲ :

ಪರಂತು, ಆಯೋಗವು ಸಮ್ಮತಿ ನೀಡುವುದಕ್ಕೆ ಮೊದಲು, ಆಕ್ಷೇಪಣೆಗಳನ್ನು ಆಹ್ವಾನಿಸಿ ಅಂಥ ನೋಟೀಸುಗಳನ್ನು ಪ್ರಕಟಿಸಬಹುದು ಮತ್ತು ಆಯೋಗವು ಸೂಕ್ತವೆಂದು ಭಾವಿಸಬಹುದಾದಂತೆ ಮತ್ತು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಅಂಥ ವ್ಯಕ್ತಿಗಳ ಅಥವಾ ಪ್ರಾಧಿಕಾರದ ವಿಚಾರಣೆ ನಡೆಸಬಹುದು.

(2) ಲೈಸೆನ್ಸುದಾರನು, ಯಾವುದೇ ಕಾಲದಲ್ಲಿ, ಆಯೋಗದಿಂದ ಲಿಖಿತದಲ್ಲಿ ಪೂರ್ವ ಸಮ್ಮತಿ ಪಡೆಯದೆ ತನ್ನ ಲೈಸೆನ್ಸನ್ನು ಮಾರಾಟ, ಅಡಮಾನ, ಗುತ್ತಿಗೆ, ವಿನಿಮಯದ ಮೂಲಕ ಅಥವಾ ಇತರ ರೀತಿಯಲ್ಲಿ ಹಸ್ತಾಂತರಣ ಮಾಡತಕ್ಕದ್ದಲ್ಲ ಅಥವಾ ತನ್ನ ಉದ್ಯಮವನ್ನು ಅಥವಾ ಅದರ ಯಾವುದೇ ಭಾಗವನ್ನು ವರ್ಗಾವಣೆ ಮಾಡತಕ್ಕದ್ದಲ್ಲ.

(3) ವಿದ್ಯುಚ್ಛಕ್ತಿ ಸರಬರಾಜು ಮಾಡಲು ಅಥವಾ ರವಾನಿಸಲು ಲೈಸೆನ್ಸ್ ಹೊಂದಿರುವಾತನು ತನ್ನ ಲೈಸೆನ್ಸಿನ ನಿಬಂಧನೆಗಳ ಮೂಲಕ ವ್ಯಕ್ತವಾಗಿ ನಿಷೇಧಿಸಲ್ಪಟ್ಟಿರದ ಹೊರತು,-

(ಎ) ಯಾವಾತನು, ಇತರೆ ಲೈಸೆನ್ಸುದಾರರಿಗೆ, ಅವರು ವಿತರಣೆ ಮಾಡುವ ಸಲುವಾಗಿ ವಿದ್ಯುಚ್ಛಕ್ತಿ ಪೂರೈಸಲು ಅನುಮತಿಸಲಾಗಿರುವ ಲೈಸೆನ್ಸನ್ನು ಹೊಂದಿರುವನೋ ಅಂಥ ಸರಬರಾಜು ಲೈಸೆನ್ಸ್ ಹೊಂದಿರುವವನಿಂದ ;

(ಬಿ) ಆಯೋಗದ ಸಮ್ಮತಿಯೊಂದಿಗೆ, ಯಾವನೇ ವ್ಯಕ್ತಿ ಅಥವಾ ಉತ್ಪಾದನಾ ಕಂಪನಿಯಿಂದ,

- ವಿದ್ಯುಚ್ಛಕ್ತಿ ಖರೀದಿಗಾಗಿ ಒಪ್ಪಂದ ಮಾಡಿಕೊಳ್ಳಬಹುದು.

(4) (1), (2) ಅಥವಾ (3)ನೇ ಉಪ ಪ್ರಕರಣಗಳಲ್ಲಿ ವಿವರಿಸಿರುವ ಸ್ವರೂಪದ ಯಾವುದೇ ವ್ಯವಹಾರಕ್ಕೆ ಸಂಬಂಧಪಟ್ಟ ಯಾವುದೇ ಒಪ್ಪಂದವು ಮೇಲೆ ಹೇಳಿದಂಥ ಸಮ್ಮತಿಯೊಂದಿಗೆ ಮಾಡಿಕೊಂಡಿರದ ಅಥವಾ ಅದಕ್ಕೊಳಪಟ್ಟ ಹೊರತು ಅಮಾನ್ಯವಾಗತಕ್ಕದ್ದು.

**26. ಲೈಸೆನ್ಸುದಾರನ ವಾರ್ಷಿಕ ಲೆಕ್ಕಪತ್ರಗಳು.**- ಪ್ರತಿಯೊಬ್ಬ ಲೈಸೆನ್ಸುದಾರನು, ಲೈಸೆನ್ಸ್ ಮೂಲಕ ವ್ಯಕ್ತವಾದ ವಿನಾಯಿತಿ ನೀಡಲಾಗಿದ್ದ ಹೊರತು, ಪ್ರತಿವರ್ಷ ಲೈಸೆನ್ಸಿನಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ತನ್ನ ಉದ್ಯಮ ಮತ್ತು ಲೈಸೆನ್ಸಿನಲ್ಲಿ ನಿರ್ದಿಷ್ಟಪಡಿಸಿದಂತೆ ಪ್ರತಿಯೊಂದು ಪ್ರತ್ಯೇಕ ವ್ಯವಹಾರಗಳ ಘಟಕಗಳಿಗೆ ಸಂಬಂಧಿಸಿದಂತೆ, ಲೈಸೆನ್ಸಿನಲ್ಲಿ ವಿವರಿಸಿರಬಹುದಾದ ಅಂಥ ದಿನಾಂಕದಂದು, ಅಂಥ ರೀತಿಯಲ್ಲಿ, ಅಂಥ ವಿವರಗಳನ್ನೊಳಗೊಂಡ ವಾರ್ಷಿಕ ಲೆಕ್ಕ ವಿವರಣ ಪತ್ರವನ್ನು ಅಥವಾ ವಿವರಣ ಪತ್ರಗಳನ್ನು ಆಯೋಗಕ್ಕೆ ಸಲ್ಲಿಸತಕ್ಕದ್ದು ಮತ್ತು ಅಂಥ ವಿವರಣ ಪತ್ರಗಳನ್ನು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಪ್ರಕಟಿಸತಕ್ಕದ್ದೆಂಬುದು ಲೈಸೆನ್ಸಿನ ಒಂದು ನಿಬಂಧನೆಯಾಗಿರತಕ್ಕದ್ದು.

## ಭಾಗ VIII

## ದರಗಳು ಮತ್ತು ಲೈಸೆನ್ಸುದಾರರಿಗೆ ಹಣಕಾಸು ಒದಗಿಸುವುದು

**27. ದರಗಳು.-** (1) ಈ ಅಧಿನಿಯಮದ ಮೇರೆಗೆ ಮಂಜೂರಾದ ಪ್ರತಿಯೊಂದು ಲೈಸೆನ್ಸನ್ನು ಹೊಂದಿರುವವನು ತನ್ನ ಲೈಸೆನ್ಸಿನ ನಿಬಂಧನೆಗಳನ್ನು ಅನುಸರಿಸಿ ವಸೂಲಿ ಮಾಡಲು ಅನುಮತಿಸಲಾದಂತೆ ದರಗಳಿಂದ ನಿರೀಕ್ಷಿಸಲಾಗುವ ಆದಾಯವನ್ನು ಲೆಕ್ಕ ಹಾಕುವಲ್ಲಿ ಮತ್ತು ಅಂಥ ಆದಾಯವನ್ನು ಸಂಗ್ರಹಿಸುವುದಕ್ಕೆ ದರಗಳನ್ನು ವಿಧಿಸುವಲ್ಲಿ ಆಗಿಂದಾಗ್ಗೆ ಆಯೋಗವು ನಿರ್ದಿಷ್ಟಪಡಿಸಬಹುದಾದ ಕಾರ್ಯವಿಧಾನ ಮತ್ತು ಪ್ರಕ್ರಿಯೆಗಳನ್ನು ಪಾಲಿಸತಕ್ಕದ್ದು.

(2) ಆಯೋಗವು, (3)ನೇ ಉಪ ಪ್ರಕರಣಕ್ಕೊಳಪಟ್ಟು, ಈ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಲೈಸೆನ್ಸುದಾರನ ಆದಾಯವನ್ನು ನಿರ್ಧರಿಸುವುದಕ್ಕಾಗಿ ಮತ್ತು ಆಯೋಗವು ಸೂಕ್ತವೆಂದು ಪರಿಗಣಿಸುವ ಅಂಥ ಇತರೆ ರೀತಿಯಲ್ಲಿ ದರಗಳನ್ನು ನಿರ್ಧರಿಸುವುದಕ್ಕಾಗಿ ಕಾರ್ಯ ವಿಧಾನಗಳನ್ನು ರೂಪಿಸುವ ಮತ್ತು ನಿಬಂಧನೆ ಮತ್ತು ಷರತ್ತುಗಳನ್ನು ನಿರೂಪಿಸುವ ಅಧಿಕಾರ ಹೊಂದಿರುತ್ತದೆ ಮತ್ತು ಹಾಗೆ ಮಾಡಲು ಆಯೋಗವು ಈ ಮುಂದಿನ ಅಂಶಗಳ ಮೂಲಕ ಮಾರ್ಗದರ್ಶನ ಪಡೆಯತಕ್ಕದ್ದು, ಎಂದರೆ :-

(ಎ) ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948 (1948ರ 54) ರ 46, 57 ಮತ್ತು 57-ಎ ಪ್ರಕರಣಗಳಲ್ಲಿ ಮತ್ತು ಅದರ ಆರನೇ ಅನುಸೂಚಿಯಲ್ಲಿ ಉಪಬಂಧಿಸಿರುವ ಹಣಕಾಸು ತತ್ವಗಳು ಮತ್ತು ಅವುಗಳ ಅನ್ವಯಗಳು ;

(ಬಿ) ಮಂಡಲಿಯ ಅಥವಾ ಅದರ ವಾರಸುದಾರ ಸಂಸ್ಥೆಗಳ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ 59ನೇ ಪ್ರಕರಣದ ಅಡಿಯ ತತ್ವಗಳು :

(ಸಿ) ವಿದ್ಯುಚ್ಛಕ್ತಿ ಸರಬರಾಜು ಬೆಲೆಯನ್ನು ಗಣನೀಯ ಮತ್ತು ಸುಧಾರಿಸುತ್ತಿರುವ ದಕ್ಷತೆಯ ಮಟ್ಟದಲ್ಲಿ ಪ್ರತಿಬಿಂಬಿಸುವ ರೀತಿಯಲ್ಲಿರುವ ಪ್ರಗತಿಪರ ದರ ;

(ಡಿ) ದಕ್ಷತೆಯನ್ನು ಪ್ರೋತ್ಸಾಹಿಸುವಂಥ ವಾಸ್ತವಾಂಶಗಳು, ಸಂಪನ್ಮೂಲಗಳ ಮಿತವ್ಯಯಕಾರಿ ಬಳಕೆ, ಉತ್ತಮ ಕಾರ್ಯನಿರ್ವಹಣೆ ಮತ್ತು ಅತಿ ಹೆಚ್ಚಿನ ಬಂಡವಾಳ ಹೂಡಿಕೆ ಮತ್ತು ಈ ಅಧಿನಿಯಮದ ಉದ್ದೇಶಕ್ಕಾಗಿ ಆಯೋಗವು ಸೂಕ್ತವೆಂದು ಪರಿಗಣಿಸುವ ಇತರೆ ವಿಷಯಗಳು ;

(ಇ) ಬಳಕೆದಾರರ ಹಿತಾಸಕ್ತಿಗಳನ್ನು ಸಂರಕ್ಷಿಸುವುದು ಮತ್ತು ಅದೇ ಕಾಲಕ್ಕೆ ವಿದ್ಯುಚ್ಛಕ್ತಿ ಸರಬರಾಜಿನ ಸರಾಸರಿ ಬೆಲೆಯ ಆಧಾರದ ಮೇಲೆ ವಿದ್ಯುಚ್ಛಕ್ತಿ ಬಳಕೆಗಾಗಿ ಬಳಕೆದಾರರು ಸೂಕ್ತ ರೀತಿಯಲ್ಲಿ ಬೆಲೆ ಸಂದಾಯ ಮಾಡುವುದು ;

(ಎಫ್) ವಿದ್ಯುಚ್ಛಕ್ತಿ ಉತ್ಪಾದನೆ, ರವಾನೆ, ವಿತರಣೆ ಮತ್ತು ಸರಬರಾಜನ್ನು ವಾಣಿಜ್ಯ ತತ್ವಗಳ ಮೇಲೆ ನಿರ್ವಹಿಸುವುದು ; ಮತ್ತು

(ಜಿ) ಸಂದರ್ಭಾನುಸಾರವಾಗಿ ಕೇಂದ್ರ ಅಥವಾ ರಾಜ್ಯ ಸರ್ಕಾರದ ಮೂಲಕ ರೂಪಿಸಲಾದ ರಾಷ್ಟ್ರೀಯ ಮತ್ತು ವಿದ್ಯುಚ್ಛಕ್ತಿ ಯೋಜನೆಗಳನ್ನು ರೂಪಿಸುವುದು :

ಪರಂತು, ಅಧಿನಿಯಮದ ಪ್ರಾರಂಭಕ್ಕೆ ಮೊದಲು ಉತ್ಪಾದನೆ ಮತ್ತು ರವಾನೆ ಕಂಪನಿಗಳೊಂದಿಗೆ, ಕರ್ನಾಟಕ ಸರ್ಕಾರ ಮತ್ತು / ಅಥವಾ ಮಂಡಲಿಯು, ಮುಕ್ತಾಯಗೊಳಿಸಿರುವ ಕರಾರುಗಳು, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅನುಮೋದಿತವಾಗಿವೆ ಎಂದು ಭಾವಿಸತಕ್ಕದ್ದು.

(3) ಆಯೋಗವು, ಲೈಸೆನ್ಸ್‌ದಾರರ ಆದಾಯ ಮತ್ತು ದರದ ನಿರ್ಧರಣೆ ಮಾಡುವಾಗ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ (1948ರ 54) ಆರನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಂಶಗಳಿಂದ ಭಿನ್ನವಾಗಿ ಪಾವತಿಸಿದರೆ ಆ ಬಗ್ಗೆ ಕಾರಣಗಳನ್ನು ಲಿಖಿತದಲ್ಲಿ ದಾಖಲ್ಮಾಡತಕ್ಕದ್ದು.

(4) ಆಯೋಗವು, ಮೇಲಿನ ಉಪ ಪ್ರಕರಣ (1), (2), (3)ರ ಮೇರೆಗೆ ನಿರ್ದಿಷ್ಟಪಡಿಸಿದ ಯಾವುದೇ ಕಾರ್ಯವಿಧಾನ ಅಥವಾ ಪ್ರಕ್ರಿಯೆಯು ಅಧಿನಿಯಮದ ಧ್ಯೇಯಗಳು ಮತ್ತು ಉದ್ದೇಶಗಳನ್ನು ಯುಕ್ತವಾಗಿ ಪಾಲಿಸಲಾಗಿದೆ ಎಂಬುದನ್ನು ಖಚಿತಪಡಿಸತಕ್ಕದ್ದು.

(5) ಈ ಅಧಿನಿಯಮದ ಮೇರೆಗೆ ಅನುಷ್ಠಾನಗೊಳಿಸಲಾದ ಯಾವುದೇ ದರವು,-

(ಎ) ಯಾವೊಬ್ಬ ವಿದ್ಯುಚ್ಛಕ್ತಿ ಬಳಕೆದಾರನಿಗೆ ಅನುಚಿತ ಪ್ರಾಶಸ್ತ್ಯವನ್ನು ತೋರತಕ್ಕದ್ದಲ್ಲ. ಆದರೆ ಯಾವುದೇ ಅವಧಿಯಲ್ಲಿ ಅಥವಾ ಯಾವುದೇ ಕಾಲದಲ್ಲಿ ಅಗತ್ಯವಿರುವ ಬಳಕೆದಾರರ ಲೋಡ್ ಫ್ಯಾಕ್ಟರ್, ಪವರ್ ಫ್ಯಾಕ್ಟರ್ ಮತ್ತು ವಿದ್ಯುಚ್ಛಕ್ತಿಯ ಒಟ್ಟು ಬಳಕೆ ಯಾವುದೇ ಪ್ರದೇಶದ ಭೌಗೋಳಿಕ ಪರಿಸ್ಥಿತಿ, ಸರಬರಾಜಿನ ಸ್ವರೂಪ ಮತ್ತು ಯಾವ ಉದ್ದೇಶಕ್ಕಾಗಿ ಸರಬರಾಜು ಅವಶ್ಯಕವಿದೆಯೋ ಆ ಉದ್ದೇಶ ಅಥವಾ ವಿವಿಧ ವರ್ಗದ ಬಳಕೆದಾರರ ಸಂದಾಯ ಸಾಮರ್ಥ್ಯ ಮತ್ತು ಪರಸ್ಪರ ಸಹಾಯಧನ ನೀಡಿಕೆಯ ಅಗತ್ಯತೆಗನುಸಾರವಾಗಿ ವ್ಯತ್ಯಾಸವಾಗಬಹುದು;

(ಬಿ) ನ್ಯಾಯ ಸಮ್ಮತ ಮತ್ತು ಸಮಂಜಸವಾಗಿರತಕ್ಕದ್ದು ಮತ್ತು ವಿದ್ಯುಚ್ಛಕ್ತಿಯ ಸರಬರಾಜು ಮತ್ತು ಬಳಕೆಯಲ್ಲಿ ಮಿತವ್ಯಯಕಾರಿ ಸಾಮರ್ಥ್ಯವನ್ನು ಸುಧಾರಿಸುವಂತಿರಬೇಕು ; ಮತ್ತು

(ಸಿ) ಈ ಅಧಿನಿಯಮದ ಸಂಬಂಧಪಟ್ಟ ಇತರ ಎಲ್ಲ ಉಪಬಂಧಗಳ, ವಿನಿಯಮಗಳ ಮತ್ತು ಲೈಸೆನ್ಸಿನ ಷರತ್ತುಗಳನ್ನು ಪಾಲಿಸತಕ್ಕದ್ದು.

(6) ಆಯೋಗವು, ಸಾಧ್ಯವಾದಷ್ಟುಮಟ್ಟಿಗೆ ವಿವಿಧ ಪ್ರದೇಶಗಳ ಒಂದೇ ಬಗೆಯ ಗ್ರಾಹಕರಿಗೆ ಒಂದೇ ರೀತಿಯ ದರಗಳನ್ನು ವಿಧಿಸಲು ಸಹ ಪ್ರಯತ್ನಿಸತಕ್ಕದ್ದು.

(7) ಪ್ರತಿಯೊಬ್ಬ ಲೈಸನ್ಸ್‌ದಾರನು, ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ತನ್ನ ಲೈಸೆನ್ಸಿನ ನಿಬಂಧನೆಗಳಿಗನುಸಾರ ವಸೂಲ್ಮಾಡಲು ಅನುಮತಿಸಲಾಗಿದೆ ಎಂದು ನಂಬಿರುವಂತೆ ಮುಂಬರುವ ವರ್ಷಕ್ಕಾಗಿ ಶುಲ್ಕಗಳಿಂದ ನಿರೀಕ್ಷಿಸಲಾದ ಒಟ್ಟು ಆದಾಯದ ಲೆಕ್ಕಗಳ ಪೂರ್ಣ ವಿವರಗಳನ್ನು ಮತ್ತು ಅಂಥ ಲೆಕ್ಕಗಳ ನಿರ್ಧರಣೆಗೆ ಆಯೋಗವು ಸೂಕ್ತವೆಂದು ಅಗತ್ಯಪಡಿಸಬಹುದಾದಂತೆ ಅಂಥ ಹೆಚ್ಚಿನ ಮಾಹಿತಿಯನ್ನು ಆಯೋಗಕ್ಕೆ ಒದಗಿಸತಕ್ಕದ್ದು. ಲೈಸೆನ್ಸ್‌ದಾರನು ಎಲ್ಲ ಮಾಹಿತಿಯನ್ನು ಒದಗಿಸಿದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ಆಯೋಗವು,-

(ಎ) ಲೈಸೆನ್ಸ್‌ದಾರನ ಆದಾಯ ಲೆಕ್ಕಗಳನ್ನು ಮತ್ತು ದರದ ಪ್ರಸ್ತಾವಗಳನ್ನು ತಾನು ಒಪ್ಪಿಕೊಳ್ಳುವುದಾಗಿ, ಅಥವಾ

(ಬಿ) ಲೈಸೆನ್ಸ್‌ದಾರನ ಆದಾಯ ಲೆಕ್ಕಗಳು ಮತ್ತು ದರದ ಪ್ರಸ್ತಾವಗಳು ನಿಯಮಿಸಲಾದ ಪದ್ಧತಿ ಅಥವಾ ಕಾರ್ಯವಿಧಾನಕ್ಕನುಸಾರವಾಗಿವೆ ಎಂಬುದಾಗಿ ತಾನು ಪರಿಗಣಿಸಿರುವುದಿಲ್ಲವೆಂದು,

-ಅಧಿಸೂಚಿಸತಕ್ಕದ್ದು ಮತ್ತು ಅಂಥ ನೋಟೀಸಿನಲ್ಲಿ,-

(i) ಒದಗಿಸಲಾದ ಆದಾಯ, ಲೆಕ್ಕಗಳು ಅಥವಾ ದರದ ಪ್ರಸ್ತಾವಗಳು, ಯಾವ ಕಾರಣಗಳಿಗಾಗಿ ನಿರ್ದಿಷ್ಟಪಡಿಸಲಾದ ಪದ್ಧತಿ ಅಥವಾ ಕಾರ್ಯವಿಧಾನಕ್ಕನುಸಾರವಾಗಿಲ್ಲವೆಂದು ಅಥವಾ ಸರಿಯಾಗಿಲ್ಲವೆಂದು ಆಯೋಗವು ಪರಿಗಣಿಸುತ್ತದೆಯೋ ಆ ಕಾರಣಗಳ ಬಗ್ಗೆ ಪೂರ್ಣವಾಗಿ ಕಾರಣಗಳನ್ನು ನಿರ್ದಿಷ್ಟಪಡಿಸತಕ್ಕದ್ದು ;

(ii) ಲೈಸೆನ್ಸ್‌ದಾರನು ಅಂಗೀಕರಿಸತಕ್ಕ ದರಗಳಿಂದ ನಿರೀಕ್ಷಿಸಲಾದ ಆದಾಯದ ಲೆಕ್ಕದ ಒಂದು ಮಾರ್ಪಾಡನ್ನು ಅಥವಾ ಒಂದು ಪರ್ಯಾಯವನ್ನು ಪ್ರಸ್ತಾವಿಸತಕ್ಕದ್ದು.

(8) ಆಯೋಗವು, (7)ನೇ ಉಪ ಪ್ರಕರಣದ ಅಡಿಯಲ್ಲಿ ತೀರ್ಮಾನವನ್ನು ಅಧಿಸೂಚಿಸುವ ಕಾಲದಲ್ಲಿ ಅಥವಾ ಅಂತಹ ತೀರ್ಮಾನದ ತೊಂಬತ್ತು ದಿನಗಳೊಳಗೆ, ಲೈಸೆನ್ಸುದಾರನು ವಿಧಿಸಿದ ದರವನ್ನು ಮಾರ್ಪಾಟು ಮಾಡಬೇಕೇ ಎಂಬುದನ್ನು ನಿರ್ಧರಿಸಬಹುದು ಮತ್ತು ಹಾಗೆ ಮಾರ್ಪಾಡು ಮಾಡಬೇಕಾದರೆ ದರವನ್ನು ಅಥವಾ ಅದರ ಯಾವುದೇ ಭಾಗವನ್ನು ಲೈಸೆನ್ಸ್ ದಾರನು ಅದನ್ನು ಮಾರ್ಪಡಿಸುವಂತೆ ಅಗತ್ಯಪಡಿಸಬಹುದು.

(9) ಪ್ರತಿಯೊಬ್ಬ ಸರಬರಾಜು ಲೈಸೆನ್ಸ್ ಹೊಂದಿರುವವನು ಸರಬರಾಜು ಪ್ರದೇಶದಲ್ಲಿ ಪ್ರಸಾರದಲ್ಲಿರುವ ದಿನ ಪತ್ರಿಕೆಯಲ್ಲಿ ಸರಬರಾಜಿನ ಪ್ರದೇಶದೊಳಗೆ ವಿದ್ಯುಚ್ಛಕ್ತಿ ಸರಬರಾಜಿಗಾಗಿ ದರದ ಬಗ್ಗೆ ಪ್ರಕಟಿಸತಕ್ಕದ್ದು ಮತ್ತು ಅದನ್ನು ವಿನಂತಿಯ ಮೇಲೆ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡತಕ್ಕದ್ದು ಮತ್ತು ಅಂಥ ದರವು ಅಂಥ ಪ್ರಕಟಣೆಯ ದಿನಾಂಕದಿಂದ ಏಳು ದಿನಗಳ ತರುವಾಯ ಮಾತ್ರವೇ ಪರಿಣಾಮಕಾರಿಯಾಗಿರತಕ್ಕದ್ದು.

(10) ಆಯೋಗವು ಅನುಮತಿ ನೀಡಬಹುದಾದಂಥ ಯಾವುದೇ ಇಂಧನ ಅಧಿಭಾರ ಸೂತ್ರದ ನಿಬಂಧನೆಗಳ ಅಡಿಯಲ್ಲಿ ವ್ಯಕ್ತವಾಗಿ ಅನುಮತಿಸಿದ ಯಾವುವೇ ದರಗಳಿಗೆ ಸಂಬಂಧಪಟ್ಟಂತೆ ಹೊರತು, (5)ನೇ ಉಪ ಪ್ರಕರಣದ ಅಡಿಯಲ್ಲಿ ಜಾರಿಗೊಳಿಸಿದ ಯಾವುದೇ ದರವನ್ನು ಅಥವಾ ಅದರ ಭಾಗವನ್ನು ಯಾವುದೇ ಹಣಕಾಸು ವರ್ಷದಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ತಿದ್ದುಪಡಿ ಮಾಡಕೂಡದು. ಯಾವುದೇ ದರವನ್ನು ಅಥವಾ ದರಕ್ಕೆ ಸಂಬಂಧಿಸಿದಂತೆ ತರಲಾದ ತಿದ್ದುಪಡಿಯನ್ನು ಜಾರಿಗೊಳಿಸುವುದಕ್ಕಾಗಿ ಉದ್ದೇಶಿಸಲಾದ ದಿನಾಂಕಕ್ಕೆ ಕನಿಷ್ಠ ಮೂರು ತಿಂಗಳ ಮೊದಲು, ಲೈಸೆನ್ಸ್‌ದಾರನು, ಉದ್ದೇಶಿತ ದರದ ಅಥವಾ ದರಕ್ಕೆ ಸಂಬಂಧಿಸಿದ ತಿದ್ದುಪಡಿಯ ವಿವರಗಳನ್ನು, (5)ನೇ ಉಪ ಪ್ರಕರಣದ ಉದ್ದೇಶಗಳನ್ನು ದರವು ಅಥವಾ ತಿದ್ದುಪಡಿಯಾದ ದರವು ಈಡೇರಿಸುತ್ತದೆ ಎಂದು ನಿರ್ಧರಿಸುವುದಕ್ಕಾಗಿ ಆಯೋಗವು ಅಗತ್ಯಪಡಿಸಬುಹುದಾದ ಅಂಥ ಮತ್ತಷ್ಟು ಮಾಹಿತಿಗಳೊಂದಿಗೆ ಆಯೋಗಕ್ಕೆ ಒದಗಿಸತಕ್ಕದ್ದು. ಲೈಸೆನ್ಸ್‌ದಾರನ ಉದ್ದೇಶಿತ ದರವು ಅಥವಾ ತಿದ್ದುಪಡಿಯಾದ ದರವು (5)ನೇ ಉಪ ಪ್ರಕರಣದ ಯಾವುವೇ ಉಪಬಂಧಗಳನ್ನು ಈಡೇರಿಸುವುದಿಲ್ಲವೆಂಬುದಾಗಿ ಆಯೋಗವು ಪರಿಗಣಿಸಿದ್ದಾದರೆ, ಅದು, ಅಗತ್ಯವಿರುವ ಎಲ್ಲ ಮಾಹಿತಿಗಳನ್ನು ಸ್ವೀಕರಿಸಿದ ಅರವತ್ತು ದಿನಗಳ ಒಳಗೆ ಮತ್ತು ಆಯೋಗ ಸಲಹಾ ಸಮಿತಿಯೊಂದಿಗೆ ಮತ್ತು ಲೈಸೆನ್ಸ್‌ದಾರನೊಂದಿಗೆ ಪರ್ಯಾಲೋಚಿಸಿದ ನಂತರ ಉದ್ದೇಶಿತ ದರ ಅಥವಾ ತಿದ್ದುಪಡಿಯಾದ ದರವು ಆಯೋಗಕ್ಕೆ ಒಪ್ಪಿಗೆಯಾಗಿಲ್ಲವೆಂದು ಲೈಸೆನ್ಸ್‌ದಾರನ ಗಮನಕ್ಕೆ ತರತಕ್ಕದ್ದು ಮತ್ತು ಅದು ಲೈಸೆನ್ಸ್‌ದಾರನಿಗೆ, ಪರ್ಯಾಯ ದರವನ್ನು ಅಥವಾ ತಿದ್ದುಪಡಿಯಾದ ದರವನ್ನು ಸೂಚಿಸತಕ್ಕದ್ದು ಮತ್ತು ಅದನ್ನು ಲೈಸೆನ್ಸ್‌ದಾರನು ಕಾರ್ಯಗತಗೊಳಿಸತಕ್ಕದ್ದು. ಆಯೋಗವು ಎಲ್ಲ ಮಾಹಿತಿಗಳನ್ನು ಸ್ವೀಕರಿಸಿದ ತೊಂಬತ್ತು ದಿನಗಳ ಒಳಗೆ ಉದ್ದೇಶಿತ ತಿದ್ದುಪಡಿಯಾದ ದರದ ಬಗೆಗಿನ ತನ್ನ ತಿರ್ಮಾನವನ್ನು ಅಧಿಸೂಚಿಸತಕ್ಕದ್ದು.

(11) ಲೈಸೆನ್ಸ್‌ದಾರನು, ಆಯೋಗದಿಂದ ತಿದ್ದುಪಡಿ ಅನುಮೋದನೆಯಾದ ಹೊರತು ಮತ್ತು ತಿದ್ದುಪಡಿಯಾದ ದರವನ್ನು (9)ನೇ ಉಪ ಪ್ರಕರಣದ ಅಡಿಯಲ್ಲಿ ನೀಡಲಾದ ರೀತಿಯಲ್ಲಿ ಪ್ರಕಟಿಸಿದ ಹೊರತು ಯಾವುದೇ ದರವನ್ನು ತಿದ್ದುಪಡಿ ಮಾಡತಕ್ಕದ್ದಲ್ಲ.

(12) ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ (1948ರ 54) 57-ಎ ಮತ್ತು 57-ಬಿ ಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ ಯಾವುದೇ ಸ್ಥಳೀಯ ದರ ನಿರ್ಧರಣಾ (ರೇಟಿಂಗ್) ಸಮಿತಿಯನ್ನು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದ ನಂತರ ರಚಿಸತಕ್ಕದ್ದಲ್ಲ ಮತ್ತು ಆಯೋಗವು, ಸಗಟು ಮತ್ತು ಚಿಲ್ಲರೆ ಎರಡು ಬಗೆಯಲ್ಲಿ ವಿದ್ಯುಚ್ಛಕ್ತಿಯ ಮಾರಾಟಕ್ಕಾಗಿ ಮತ್ತು ಈ ಅಧಿನಿಯಮದ ಉಪಬಂಧಗಳಂತೆ ಅವರ ಆಸ್ತಿಗಳು ಅಥವಾ ಪದ್ಧತಿಗಳಿಗೆ ಸಂಪರ್ಕಕ್ಕಾಗಿ ಮತ್ತು ಬಳಕೆಗಾಗಿ ಶುಲ್ಕಗಳಿಗೆ ಸಂಬಂಧಪಟ್ಟ ಉಪಬಂಧಗಳನ್ನು ಲೈಸೆನ್ಸ್‌ದಾರನು ಪಾಲಿಸುವಂತೆ ನೋಡಿಕೊಳ್ಳತಕ್ಕದ್ದು.

***ವಿವರಣೆ.-*** (ಎ) ಈ ಪ್ರಕರಣದಲ್ಲಿ ದರಗಳಿಂದ ನಿರೀಕ್ಷಿತ ಆದಾಯ ಎಂದರೆ, ಕೆಪಿಟಿಸಿ ಅಥವಾ ಲೈಸೆನ್ಸ್‌ದಾರರು ಗ್ರಾಹಕರಿಗೆ ಸರಬರಾಜು ಮಾಡಿದ ಸರಕುಗಳ ಅಥವಾ ಸೇವೆಗಳ ಸಂಬಂಧದಲ್ಲಿ ಯಾವುದೇ ಹಣಕಾಸು ವರ್ಷದಲ್ಲಿ (7)ನೇ ಉಪ ಪ್ರಕರಣದ ಅಡಿಯಲ್ಲಿನ ನಿರ್ಧರಣೆಯಲ್ಲಿ ಬಳಸಿದ ನಿರೀಕ್ಷಿತ ಸರಬರಾಜಿನ ಮಟ್ಟಕ್ಕಾಗಿ ದರಗಳಿಂದ ವಸೂಲಿ ಮಾಡುವುದೆಂದು ನಿರೀಕ್ಷಿಸಲಾದ ಒಟ್ಟು ಆದಾಯ,

(ಬಿ) "ದರ" ಎಂದರೆ, ಪ್ರಕಟಿಸಲಾದ ದರದಲ್ಲಿ ನಿರ್ದಿಷ್ಟಪಡಿಸಿದ ಗ್ರಾಹಕ ವರ್ಗದವರಿಗೆ ಒದಗಿಸಲಾದ ಎಲ್ಲ ಅಂಥ ನಿರ್ದಿಷ್ಟ ಸೇವೆಗಳಿಗೆ ಅನ್ವಯವಾಗುವ ನಿಗದಿತ ಬೆಲೆಗಳ ಅಥವಾ ಚಾರ್ಜುಗಳ ಅನುಸೂಚಿ.

**28. ಲೈಸೆನ್ಸ್‌ದಾರರ ಹಣಕಾಸು ವ್ಯವಸ್ಥೆ.-** (1) ರಾಜ್ಯ ಸರ್ಕಾರವು, ರಾಜ್ಯ ವಿಧಾನಮಂಡಲದ ಒಪ್ಪಿಗೆ ಪಡೆದು, ಕಾಲಕಾಲಕ್ಕೆ, ಈ ಅಧಿನಿಯಮದ ಅಥವಾ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ ಉದ್ದೇಶಗಳಿಗಾಗಿ ಯಾರೇ ಲೈಸೆನ್ಸ್‌ದಾರನಿಗೆ, ಆಯೋಗವು ಶಿಫಾರಸು ಮಾಡಬಹುದಾದ ಅಂಥ ಮೊಬಲಗನ್ನು ಮತ್ತು ರಾಜ್ಯ ಸರ್ಕಾರವು ನಿರ್ಧರಿಸಬಹುದಾದ ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಧನ ಸಹಾಯ ಮಾಡಬಹುದು.

(2) ರಾಜ್ಯ ಸರ್ಕಾರವು, ಕಾಲಕಾಲಕ್ಕೆ, ಈ ಅಧಿನಿಯಮದ ಅಥವಾ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ ಉಪಬಂಧಗಳಿಗೆ ಅಸಂಗತವಾಗಿರದ ರಾಜ್ಯ ಸರ್ಕಾರವು ನಿರ್ಧರಿಸಬಹುದಾದ ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಯಾರೇ ಲೈಸೆನ್ಸ್‌ದಾರನಿಗೆ ಅಥವಾ ತತ್ಕಾಲದಲ್ಲಿ ರಾಜ್ಯ ಸರ್ಕಾರದ ಸಂಪೂರ್ಣ ಅಥವಾ ಭಾಗಶಃ ಒಡೆತನದಲ್ಲಿರುವ ಯಾವುದೇ ವಿದ್ಯುತ್ ಉತ್ಪಾದನಾ ಕಂಪನಿಗೆ ಸಾಲಗಳನ್ನು ನೀಡಬಹುದು.

(3) ರಾಜ್ಯ ಸರ್ಕಾರವು, ತಾನು ಸೂಕ್ತವೆಂದು ಯೋಚಿಸಬಹುದಾದಂಥ ರೀತಿಯಲ್ಲಿ, ಯಾರೇ ಲೈಸೆನ್ಸ್‌ದಾರನು ಅಥವಾ ರಾಜ್ಯ ಸರ್ಕಾರದ ಸಂಪೂರ್ಣ ಅಥವಾ ಭಾಗಶಃ ಒಡೆತನದಲ್ಲಿರುವ ವಿದ್ಯುತ್ ಉತ್ಪಾದನಾ ಕಂಪನಿಯು ಎತ್ತಲು ಉದ್ದೇಶಿಸಿದ ಯಾವುದೇ ಸಾಲದ ಅಸಲಿನ ಮರುಸಂದಾಯ ಅಥವಾ ಬಡ್ಡಿಯ ಸಂದಾಯಕ್ಕೆ (ಅಥವಾ ಅವೆರಡಕ್ಕೂ) ಅಥವಾ ಯಾರೇ ಲೈಸೆನ್ಸ್‌ದಾರನ, ಯಾವುದೇ ಇತರ ಹಣಕಾಸು ಬಾಧ್ಯತೆಯನ್ನು ವಿಮುಕ್ತಗೊಳಿಸುವುದಕ್ಕಾಗಿ ಖಾತರಿ ನೀಡಬಹುದು. ಪರಂತು, ರಾಜ್ಯ ಸರ್ಕಾರವು, ಅಂಥ ಖಾತರಿಯು ಜಾರಿಯಲ್ಲಿರುವವರೆಗೆ, ರಾಜ್ಯದ ಪ್ರಸಕ್ತ ಹಣಕಾಸು ವರ್ಷದಲ್ಲಿ ನೀಡಲಾದ ಯಾವುದೇ ಖಾತರಿಯ ವಿವರಪಟ್ಟಿ ಇದ್ದರೆ, ಅದನ್ನು ಮತ್ತು ಅಂಥ ಖಾತರಿಗಳ ಕಾರಣದಿಂದ ಪ್ರತಿಯೊಂದು ಪ್ರಕರಣದಲ್ಲಿ ರಾಜ್ಯಾದಾಯದಿಂದ ಸಂದಾಯ ಮಾಡಲಾದ ಅಥವಾ ಹಾಗೆ ಸಂದಾಯ ಮಾಡಲಾದ ಯಾವುದೇ ಹಣವನ್ನು ರಾಜ್ಯಾದಾಯಕ್ಕೆ ಮರು ಸಂದಾಯ ಮಾಡಲಾದ ಇಂದಿನವರೆಗಿನ ಒಟ್ಟು ಮೊಬಲಗಿನ ಲೆಕ್ಕಪತ್ರಗಳಿದ್ದರೆ ಅವುಗಳನ್ನು ಪ್ರತಿ ವರ್ಷ ಆಯವ್ಯಯ ಅಧಿವೇಶನದ ಸಮಯದಲ್ಲಿ ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸತಕ್ಕದ್ದು.

(4) ರಾಜ್ಯ ಸರ್ಕಾರವು, ಈ ಪ್ರಕರಣದ (1), (2) ಮತ್ತು (3)ನೇ ಉಪ ಪ್ರಕರಣದ ಅಡಿಯಲ್ಲಿ ಪ್ರಯೋಜನ ಪಡೆಯುತ್ತಿರುವ ಪ್ರತಿಯೊಬ್ಬ ಲೈಸೆನ್ಸ್‌ದಾರನ ಲೆಕ್ಕಪತ್ರಗಳನ್ನು ಪರಿಶೀಲಿಸಲು ಮತ್ತು ಪರೀಕ್ಷಿಸಲು ಹಕ್ಕುಳ್ಳದ್ದಾಗಿರತಕ್ಕದ್ದು.

## ಭಾಗ IX

## ಆದೇಶಗಳನ್ನು ನೀಡಲು ಮತ್ತು ತೀರ್ಮಾನಗಳನ್ನು ಜಾರಿಗೊಳಿಸಲು ಆಯೋಗದ ಅಧಿಕಾರ

**29. ಪಾಲನೆಯಾಗುವಂತೆ ನೋಡಿಕೊಳ್ಳುವುದಕ್ಕಾಗಿ ಆದೇಶಗಳು.-** (1) ಒಬ್ಬ ಲೈಸೆನ್ಸುದಾರನು, ಲೈಸೆನ್ಸನ್ನು ಅಥವಾ ತನ್ನ ಲೈಸೆನ್ಸಿನ ಯಾವುದೇ ಸಂಬಂಧಪಟ್ಟ ಷರತ್ತು ಅಥವಾ ಅಗತ್ಯತೆಯನ್ನು ಉಲ್ಲಂಘಿಸುತ್ತಿದ್ದಾನೆ ಅಥವಾ ಉಲ್ಲಂಘಿಸುವ ಸಂಭವವಿದೆಯೆಂದು ಆಯೋಗಕ್ಕೆ ಮನವರಿಕೆಯಾದಾಗ ಅದು, 30ನೇ ಪ್ರಕರಣದ ಅಡಿಯಲ್ಲಿ ಅಂತಿಮ ಆದೇಶದ ಮೂಲಕ ಮತ್ತು (2)ನೇ ಉಪ ಪ್ರಕರಣಕ್ಕೆ ಅನುಸಾರವಾಗಿ ತಾನು ಸೂಕ್ತವೆಂದು ಭಾವಿಸಿದರೆ, ಈ ಪ್ರಕರಣದ ಅಡಿಯಲ್ಲಿ ಒಂದು ಮಧ್ಯಕಾಲೀನ ಆದೇಶದಿಂದ, ಪಾಲನೆಯಾಗುವಂತೆ ನೋಡಿಕೊಳ್ಳುವುದಕ್ಕಾಗಿ ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ನಿರ್ದೇಶನಗಳನ್ನು ನೀಡತಕ್ಕದ್ದು.

(2) ಮಧ್ಯಕಾಲೀನ ಆದೇಶವನ್ನು ನೀಡುವುದು ಸೂಕ್ತವೇ ಎಂಬುದನ್ನು ನಿರ್ಧರಿಸುವಲ್ಲಿ, ಆಯೋಗವು ವಿಶೇಷವಾಗಿ ಈ ಮುಂದಿನ ಅಂಶಗಳಿಗೆ ಗಮನ ನೀಡತಕ್ಕದ್ದು: -

(ಎ) ಲೈಸೆನ್ಸುದಾರನಿಂದ ನಡೆದಿರುವ ಉಲ್ಲಂಘನೆಯು ಅಥವಾ ಸಂಭವನೀಯ ಉಲ್ಲಂಘನೆಯು ಈ ಅಧಿನಿಯಮದ ಧ್ಯೇಯಗಳು ಮತ್ತು ಉದ್ದೇಶಗಳ ಸಾಧನೆಗೆ ಎಷ್ಟು ಮಟ್ಟಿಗೆ ಬಾಧಕವಾಗಿದೆ ಎಂಬುದಕ್ಕೆ;

(ಬಿ) ಒಂದು ಅಂತಿಮ ಆದೇಶವನ್ನು ನೀಡುವುದಕ್ಕೆ ಮುಂಚೆ, ಸಂಬಂಧಪಟ್ಟ ಷರತ್ತಿನ ಅಥವಾ ಅಗತ್ಯತೆಯ ಉಲ್ಲಂಘನೆಯಲ್ಲಿ ಮಾಡಬಹುದಾದ ಅಥವಾ ಮಾಡಲು ಲೋಪಿಸಲಾದ ಯಾವುದೇ ಪರಿಣಾಮದಿಂದಾಗಿ ಯಾರೇ ವ್ಯಕ್ತಿಗೆ ಎಷ್ಟು ಮಟ್ಟಿಗೆ ನಷ್ಟ ಅಥವಾ ಹಾನಿ ಉಂಟಾಗುತ್ತದೆ ಎಂಬುದಕ್ಕೆ; ಮತ್ತು

(ಸಿ) ಸಂಬಂಧಪಟ್ಟ ಷರತ್ತಿನ ಅಥವಾ ಅಗತ್ಯತೆಯ ಆಪಾದಿಸಲಾದ ಉಲ್ಲಂಘನೆಯ ಸಂಬಂಧದಲ್ಲಿ (ಈ ಪ್ರಕರಣದ ಮುಂದಿನ ಉಪಬಂಧಗಳನ್ನು ಗಮನದಲ್ಲಿಟ್ಟುಕೊಂಡು) ಇತರ ಯಾವುದೇ ಪರಿಹಾರ ಎಷ್ಟು ಮಟ್ಟಿಗೆ ಲಭ್ಯವಿದೆ ಎಂಬುದಕ್ಕೆ.

(3) ಆಯೋಗವು ಒಂದು ಮಧ್ಯಕಾಲೀನ ಆದೇಶವನ್ನು ಮಾಡಲು ಉದ್ದೇಶಿಸಿದ್ದು, ಅದು ಲೈಸೆನ್ಸ್‌ದಾರನಿಗೆ,-

(ಎ) ತಾನು ಆದೇಶವನ್ನು ಮಾಡುವ ಉದ್ದೇಶಗಳನ್ನು ಹೊಂದಿರುವುದಾಗಿ ತಿಳಿಸಿ, ಅದರಲ್ಲಿ ಈ ಮುಂದಿನವುಗಳನ್ನು ನಿರೂಪಿಸಿ :-

(i) ಪಾಲನೆಯಾಗುವಂತೆ ನೋಡಿಕೊಳ್ಳುವ ಸಲುವಾಗಿ ಉದ್ದೇಶಿತ ಆದೇಶದಲ್ಲಿ ಇರುವ ಸಂಬಂಧಪಟ್ಟ ಷರತ್ತುಗಳು ಅಥವಾ ಅಗತ್ಯತೆಗಳು ;

(ii) ಅದರ ಅಭಿಪ್ರಾಯದಲ್ಲಿ ಆ ಷರತ್ತಿನ ಅಥವಾ ಅಗತ್ಯತೆಯ ಉಲ್ಲಂಘನೆ ಮಾಡುವ ಕಾರ್ಯಗಳು ಅಥವಾ ಕರ್ತವ್ಯಲೋಪಗಳು ;

(iii) ಅದರ ಅಭಿಪ್ರಾಯದಲ್ಲಿ ಉದ್ದೇಶಿತ ಆದೇಶ ಮಾಡುವುದನ್ನು ಸಮರ್ಥಿಸುವ ಇತರ ಕಾರಣಗಳು; ಮತ್ತು

(iv) ಉದ್ದೇಶಿತ ಆದೇಶದ ಪರಿಣಾಮಗಳು ; ಮತ್ತು

(ಬಿ) ಉದ್ದೇಶಿತ ಆದೇಶಕ್ಕೆ ಲೈಸೆನ್ಸ್‌ದಾರನು ಮನವಿಗಳನ್ನು ಅಥವಾ ಆಕ್ಷೇಪಣೆಗಳನ್ನು ಯಾವ ಅವಧಿಯೊಳಗೆ ಮಾಡಬಹುದು ಎಂಬುದನ್ನು (ನೋಟೀಸಿನ ದಿನಾಂಕದಿಂದ 5 ದಿನಗಳಿಗೆ ಕಡಿಮೆಯಿಲ್ಲದಂತೆ) ನಿರ್ದಿಷ್ಟಪಡಿಸಿ,

- ನೋಟೀಸನ್ನು ನೀಡತಕ್ಕದ್ದು.

(4) (5)ನೇ ಉಪ ಪ್ರಕರಣಕ್ಕೆ ಒಳಪಟ್ಟು ಮತ್ತು (3) (ಬಿ) ಉಪ ಪ್ರಕರಣಕ್ಕೆ ಅನುಸಾರವಾಗಿ ಲೈಸೆನ್ಸ್‌ದಾರನಿಂದ ಬಂದ ಯಾವುವೇ ಮನವಿಗಳು ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಿದ ನಂತರ, ಆಯೋಗವು, (3)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಅವಧಿಯು ಮುಕ್ತಾಯವಾದ ನಂತರ ಯಾವುದೇ ಸಮಯದಲ್ಲಿ ಒಂದು ಮಧ್ಯಕಾಲೀನ ಆದೇಶವನ್ನು ಮಾಡಬಹುದು (ಅದನ್ನು ಲೈಸೆನ್ಸ್‌ದಾರನ ಮನವಿಗಳು ಅಥವಾ ಆಕ್ಷೇಪಣೆಗಳು ಬಂದ ತರುವಾಯ ಉದ್ದೇಶಿತ ಆದೇಶದಿಂದ ಮಾರ್ಪಾಟು ಮಾಡಬಹುದು), ಆದರೆ, ಅದಕ್ಕಾಗಿ,-

(ಎ) ಯಾರಿಗೆ ಆದೇಶವು ಸಂಬಂಧಪಟ್ಟಿರುವುದೋ ಆ ಲೈಸೆನ್ಸ್‌ದಾರನು, ಯಾವುವೇ ಸಂಬಂಧಪಟ್ಟ ಷರತ್ತುಗಳು ಅಥವಾ ಅಗತ್ಯತೆಗಳನ್ನು ಉಲ್ಲಂಘಿಸಿದ್ದಾನೆ ಅಥವಾ ಉಲ್ಲಂಘಿಸುತ್ತಿದ್ದಾನೆ ಅಥವಾ ಉಲ್ಲಂಘಿಸಬಹುದು ಎಂದು ನಂಬುವುದಕ್ಕೆ ಆಯೋಗಕ್ಕೆ ಸರಿಯಾದ ಕಾರಣಗಳಿರತಕ್ಕದ್ದು; ಮತ್ತು

(ಬಿ) ಆ ಷರತ್ತು ಅಥವಾ ಅಗತ್ಯತೆಯೊಂದಿಗೆ ಪಾಲನೆಯಾಗುವಂತೆ ನೋಡಿಕೊಳ್ಳುವ ಉದ್ದೇಶಕ್ಕಾಗಿ ಆದೇಶದ ಮೂಲಕ ಮಾಡಿದ ಉಪಬಂಧಗಳು ಅವಶ್ಯಕವಾಗಿರತಕ್ಕದ್ದು.

(5) ಪ್ರಶ್ನಿತ ಷರತ್ತಿನ ಅಥವಾ ಅಗತ್ಯತೆಯ ಪಾಲನೆಯಾಗುವಂತೆ ಖಚಿತಪಡಿಸಲು ಅಥವಾ ಅನುಗೊಳಿಸಲು ಲೈಸೆನ್ಸ್‌ದಾರನು ತೆಗೆದುಕೊಳ್ಳತಕ್ಕದ್ದೆಂದು ಆಯೋಗವು ಪರಿಗಣಿಸಿದ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಲೈಸೆನ್ಸ್‌ದಾರನು ಒಪ್ಪಿದ್ದಾನೆ ಮತ್ತು ತೆಗೆದುಕೊಳ್ಳುತ್ತಿದ್ದಾನೆ ಎಂದು ಆಯೋಗಕ್ಕೆ ಮನವರಿಕೆಯಾದರೆ, ಅದು ಮಧ್ಯಕಾಲೀನ ಆದೇಶವನ್ನು ಮಾಡದಿರಬಹುದು.

(6) ಒಂದು ಮಧ್ಯಕಾಲೀನ ಆದೇಶವು,-

(ಎ) ಅದು ಯಾರಿಗೆ ಸಂಬಂಧಿಸಿದೆಯೋ ಆ ಲೈಸೆನ್ಸ್‌ದಾರನನ್ನು (ಪ್ರಕರಣದ ಸಂದರ್ಭಕ್ಕನುಸಾರವಾಗಿ) ಆದೇಶದಲ್ಲಿ ನಿರ್ದಿಷ್ಟಪಡಿಸಿದಂಥ ಅಥವಾ ಹಾಗೆ ನಿರ್ದಿಷ್ಟಪಡಿಸಿದ್ದರ ವಿವರಣೆಯಾಗಿರುವ ಅಂಥ ಕಾರ್ಯಗಳನ್ನು ಮಾಡುವಂತೆ ಅಥವಾ ಮಾಡದಿರುವಂತೆ ಅಗತ್ಯಪಡಿಸತಕ್ಕದ್ದು ;

(ಬಿ) ಆದೇಶದ ಮೂಲಕ ನಿರ್ಧರಿಸಲಾದ ಕಾರ್ಯಸಾಧ್ಯವಾದಷ್ಟು ಮುಂಚಿತ ಸಮಯವಾಗಿರುವ ಅಂಥ ಸಮಯದಿಂದ ಜಾರಿಗೆ ಬರತಕ್ಕದ್ದು ; ಮತ್ತು

(ಸಿ) ಆಯೋಗದಿಂದ ಯಾವುದೇ ಸಮಯದಲ್ಲಿ ರದ್ದಾಗಬಹುದು, ಮಾರ್ಪಾಟಾಗಬಹುದು ಅಥವಾ ಹಿಂತೆಗೆದುಕೊಳ್ಳಬಹುದು, ಆದರೆ ಯಾವುದೇ ಸಂದರ್ಭದಲ್ಲಿ ಆದೇಶದಲ್ಲಿ ತಿಳಿಸಿದ ಅಂಥ ಅವಧಿಯ ಕೊನೆಯಲ್ಲಿ, ಆಯೋಗವು 30ನೇ ಪ್ರಕರಣದಲ್ಲಿ ನಿರೂಪಿಸಿದ ಕಾರ್ಯವಿಧಾನವನ್ನು ಅನುಸರಿಸಿ ಮಧ್ಯಕಾಲೀನ

ಆದೇಶವು ಅಂತಿಮ ಆದೇಶವಾಗಿರುವುದೆಂದು ಘೋಷಿಸಿದ ಹೊರತು, ಅದು ಪರಿಣಾಮಕಾರಿಯಾಗಿರುವುದು ನಿಂತುಹೋಗುತ್ತದೆ.

(7) ಮಧ್ಯಕಾಲೀನ ಆದೇಶವನ್ನು ಮಾಡಿದ ನಂತರ, ಕಾರ್ಯಸಾಧ್ಯವಾದಷ್ಟು ಬೇಗನೇ, ಆಯೋಗವು,-

(ಎ) ಆದೇಶವು ಯಾರಿಗೆ ಸಂಬಂಧಿಸಿದೆಯೋ ಆ ಲೈಸೆನ್ಸ್‌ದಾರನ ಮೇಲೆ ಆದೇಶದ ಒಂದು ಪ್ರತಿಯನ್ನು ಜಾರಿಮಾಡತಕ್ಕದ್ದು ;

(ಬಿ) ಆದೇಶದಿಂದ ಬಾಧಿತರಾಗಬಹುದಾದ ವ್ಯಕ್ತಿಗಳ ಗಮನಕ್ಕೆ ಅದನ್ನು ತರುವ ಉದ್ದೇಶಕ್ಕಾಗಿ, ತಾನು ಸೂಕ್ತವೆಂದು ಪರಿಗಣಿಸಿದ ಅಂಥ ರೀತಿಯಲ್ಲಿ ಆದೇಶವನ್ನು ಪ್ರಕಟಿಸತಕ್ಕದ್ದು ;

(ಸಿ) ಮಧ್ಯಕಾಲೀನ ಆದೇಶವನ್ನು ಅಂತಿಮ ಆದೇಶವೆಂದು ಘೋಷಿಸುವುದಕ್ಕೆ 30ನೇ ಪ್ರಕರಣದ ಅಡಿಯಲ್ಲಿ ವ್ಯವಹರಣೆಗಳನ್ನು ಆರಂಭಿಸತಕ್ಕದ್ದು.

**30. ಪಾಲನೆಯಾಗುವಂತೆ ಖಚಿತಪಡಿಸುವುದಕ್ಕಾಗಿ ಅಂತಿಮ ಆದೇಶಗಳು.**- (1) ಆಯೋಗವು, ಒಂದು ಅಂತಿಮ ಆದೇಶ ಮಾಡಲು ಅಥವಾ ಒಂದು ಮಧ್ಯಕಾಲೀನ ಆದೇಶವನ್ನು ಅಂತಿಮ ಆದೇಶವೆಂದು ಘೋಷಿಸಲು ಉದ್ದೇಶಿಸಿದರೆ, ಅದು ನೋಟೀಸನ್ನು ಕೊಡತಕ್ಕದ್ದು ; ಅದರಲ್ಲಿ,-

(ಎ) ತಾನು ಅಂತಿಮ ಆದೇಶ ಮಾಡಲು ಅಥವಾ ಮಧ್ಯಕಾಲೀನ ಆದೇಶವನ್ನು ಅಂತಿಮ ಆದೇಶವೆಂದು ಘೋಷಿಸಲು ಉದ್ದೇಶಿಸಿರುವುದಾಗಿ ನಿರೂಪಿಸತಕ್ಕದ್ದು ;

(ಬಿ) ಉದ್ದೇಶಿತ ಅಂತಿಮ ಆದೇಶಕ್ಕೆ ಸಂಬಂಧಿಸಿದಂತೆ 29ನೇ ಪ್ರಕರಣದ (3) (ಎ) ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಮಾಹಿತಿಯನ್ನು ನಿರೂಪಿಸತಕ್ಕದ್ದು ; ಮತ್ತು

(ಸಿ) ಉದ್ದೇಶಿತ ಆದೇಶಕ್ಕೆ ಮನವಿಗಳನ್ನು ಅಥವಾ ಆಕ್ಷೇಪಣೆಗಳನ್ನು ಯಾವ ಅವಧಿಯೊಳಗೆ ಮಾಡಿಕೊಳ್ಳಬಹುದು ಎಂಬುದನ್ನು (ಅದು ನೋಟೀಸು ಪ್ರಕಟವಾದ ದಿನಾಂಕದಿಂದ 60 ದಿನಗಳಿಗೆ ಕಡಿಮೆಯಿಲ್ಲದಂತೆ ಇರತಕ್ಕದ್ದು) ನಿರೂಪಿಸತಕ್ಕದ್ದು.

ಮತ್ತು ಯುಕ್ತವಾಗಿ ಮಾಡಲಾದ ಮತ್ತು ಹಿಂತೆಗೆದುಕೊಳ್ಳದಿರುವ ಯಾವುವೇ ಮನವಿಗಳನ್ನು ಅಥವಾ ಆಕ್ಷೇಪಣೆಗಳನ್ನು ಪರಿಶೀಲಿಸತಕ್ಕದ್ದು ಮತ್ತು ಅಂಥ ಮನವಿಗಳ ಅಥವಾ ಆಕ್ಷೇಪಣೆಗಳ ಬಗ್ಗೆ ನೋಟೀಸನ್ನು ಪ್ರಕಟಿಸತಕ್ಕದ್ದು ಮತ್ತು ಹೆಚ್ಚಿನ ಮನವಿಗಳನ್ನು ಅಥವಾ ಆಕ್ಷೇಪಣೆಗಳನ್ನು ಯಾವ ಅವಧಿಯೊಳಗೆ (ನೋಟೀಸು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳಿಗಿಂತ ಕಡಿಮೆ ಇಲ್ಲದೆ) ಮಾಡಿಕೊಳ್ಳಬಹುದು ಎಂಬುದನ್ನು ನಿರ್ದಿಷ್ಟಪಡಿಸತಕ್ಕದ್ದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ನೋಟೀಸನ್ನು ನೀಡತಕ್ಕದ್ದು ;

(ಎ) ನೋಟೀಸಿಗೆ ಸಂಬಂಧಿಸಿದ ವಿಷಯಗಳನ್ನು, ಅವುಗಳಿಂದ ಬಾಧಿತರಾಗಬಹುದಾದ ವ್ಯಕ್ತಿಗಳ ಗಮನಕ್ಕೆ ತರುವ ಉದ್ದೇಶಕ್ಕಾಗಿ ಆಯೋಗವು ಸೂಕ್ತವೆಂದು ಪರಿಗಣಿಸುವ ಅಂಥ ರೀತಿಯಲ್ಲಿ ನೋಟೀಸನ್ನು ಪ್ರಕಟಿಸತಕ್ಕದ್ದು ; ಮತ್ತು

(ಬಿ) ನೋಟೀಸಿನ ಪ್ರತಿಯನ್ನು ಮತ್ತು ಉದ್ದೇಶಿತ ಅಂತಿಮ ಆದೇಶದ ಪ್ರತಿಯನ್ನು ಆದೇಶವು ಯಾರಿಗೆ ಸಂಬಂಧಿಸಿದೆಯೋ ಆ ಲೈಸೆನ್ಸ್‌ದಾರನ ಮೇಲೆ ಜಾರಿ ಮಾಡತಕ್ಕದ್ದು.

(3) (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ನೋಟೀಸು ಪ್ರಕಟವಾದ ನಂತರ ಸ್ವೀಕರಿಸಲಾದ ಯಾವುವೇ ಮನವಿಗಳ ಅಥವಾ ಆಕ್ಷೇಪಣೆಗಳ ಪರಿಣಾಮವಾಗಿ ಆಯೋಗವು ಉದ್ದೇಶಿತ ಅಂತಿಮ ಆದೇಶವನ್ನು,-

(ಎ) ಪ್ರಸ್ತಾವಿತ ಅಂತಿಮ ಆದೇಶಕ್ಕೆ ಸಂಬಂಧಪಟ್ಟ ಲೈಸೆನ್ಸುದಾರನು ಬದಲಾವಣೆಗಳಿಗೆ ಸಮ್ಮತಿಸಿರುವ ಹೊರತು; ಮತ್ತು

(ಬಿ) ಉಪ ಪ್ರಕರಣ (4)ರ ಅಗತ್ಯತೆಗಳನ್ನು ಪಾಲಿಸಲಾದ ಹೊರತು,

-ಮಾರ್ಪಾಟು ಮಾಡತಕ್ಕದ್ದಲ್ಲ.

(4) ಆಯೋಗವು ಕೈಗೊಳ್ಳಬೇಕೆಂದು ಉಪ ಪ್ರಕರಣ (3)ರ ಖಂಡ (ಬಿ)ರಲ್ಲಿ ಉಲ್ಲೇಖಿಸಲಾದ ಅಗತ್ಯತೆಗಳು ಈ ಮುಂದಿನಂತಿವೆ :-

(ಎ) ಪ್ರಸ್ತಾವಿತ ಅಂತಿಮ ಆದೇಶವು ಸಂಬಂಧಿಸುವ ಲೈಸೆನ್ಸುದಾರನಿಗೆ ಆಯೋಗವು ಪ್ರಸ್ತಾವಿತ ಅಂತಿಮ ಆದೇಶದ ಮಾರ್ಪಾಟು ಮಾಡುವ ತನ್ನ ಪ್ರಸ್ತಾವದ ಬಗ್ಗೆ ಅವಶ್ಯಕವೆಂದು ತನಗೆ ಕಂಡುಬರುವ ಅಂಥ ನೋಟೀಸನ್ನು ಅಂತಹ ಮಾರ್ಪಾಟುಗಳ ವಿವರಗಳೊಂದಿಗೆ ಜಾರಿಗೊಳಿಸತಕ್ಕದ್ದು ;

(ಬಿ) ಆ ನೋಟೀಸಿನಲ್ಲಿ ಪ್ರಸ್ತಾವಿಸಲಾಗಿರುವ ಮಾರ್ಪಾಟುಗಳಿಗೆ ಮನವಿಗಳನ್ನು ಅಥವಾ ಆಕ್ಷೇಪಣೆಗಳನ್ನು ಎಷ್ಟು ಅವಧಿಯೊಳಗೆ ಸಲ್ಲಿಸಬಹುದೆಂಬುದನ್ನು (ನೋಟೀಸನ್ನು ಜಾರಿಗೊಳಿಸಿದ ದಿನಾಂಕದಿಂದ 30 ದಿವಸಗಳಿಗೆ ಕಡಿಮೆಯಿರತಕ್ಕದ್ದಲ್ಲ) ನಿರ್ದಿಷ್ಟಪಡಿಸತಕ್ಕದ್ದು ; ಮತ್ತು

(ಸಿ) ಯುಕ್ತವಾಗಿ ಸಲ್ಲಿಸಲಾಗಿರುವ ಮತ್ತು ಹಿಂತೆಗೆದುಕೊಂಡಿರದ ಯಾವುವೇ ಮನವಿಗಳು ಅಥವಾ ಆಕ್ಷೇಪಣೆಗಳನ್ನು, ಅವುಗಳನ್ನು ಸ್ವೀಕರಿಸಿದ 10 ದಿವಸಗಳೊಳಗೆ ಪರಿಗಣಿಸತಕ್ಕದ್ದು.

(5) ಪ್ರಕರಣ 29ರ ಉಪ ಪ್ರಕರಣ (6)ರ (ಎ) ಮತ್ತು (ಬಿ) ಖಂಡಗಳ ಉಪಬಂಧಗಳು ಅಂತಿಮ ಆದೇಶಗಳಿಗೆ ಅನ್ವಯವಾಗತಕ್ಕದ್ದು.

(6) ಅಂತಿಮ ಆದೇಶವನ್ನು ಮಾಡಿದ ಮೇಲೆ ಕಾರ್ಯಸಾಧ್ಯವಾದಷ್ಟು ಬೇಗನೆ, ಆಯೋಗವು ಅಂತಿಮ ಆದೇಶಕ್ಕೆ ಸಂಬಂಧಪಟ್ಟಂತೆ ಪ್ರಕರಣ 29ರ ಉಪ ಪ್ರಕರಣ (7)ರ (ಎ) ಮತ್ತು (ಬಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

(7) ಆಯೋಗವು, ಯಾವುದೇ ಸಮಯದಲ್ಲಾದರೂ ಅಂತಿಮ ಆದೇಶವನ್ನು ರದ್ದುಪಡಿಸಬಹುದು, ಆದರೆ ಅಂತಿಮ ಆದೇಶವನ್ನು ರದ್ದುಪಡಿಸುವುದಕ್ಕೆ ಮೊದಲು ಆಯೋಗವು,-

(ಎ) ಅದು ಆದೇಶವನ್ನು ರದ್ದುಪಡಿಸಲು ಉದ್ದೇಶಿಸುತ್ತಿದೆ ಎಂಬುದನ್ನು ತಿಳಿಸಿ ಮತ್ತು ಅದರ ಪರಿಣಾಮವನ್ನು ನಿರೂಪಿಸಿ; ಮತ್ತು

(ಬಿ) ಪ್ರಸ್ತಾವಿತ ಪ್ರಕಟಣೆಗೆ ಸಂಬಂಧಿಸಿದಂತೆ ಮನವಿಗಳು ಅಥವಾ ಆಕ್ಷೇಪಣೆಗಳನ್ನು ಎಷ್ಟು ಅವಧಿಯೊಳಗೆ ಸಲ್ಲಿಸಬೇಕೆಂಬುದನ್ನು ನಿರ್ದಿಷ್ಟಪಡಿಸಿ (ನೋಟೀಸನ್ನು ನೀಡಿದ ದಿನಾಂಕದಿಂದ ಮೂವತ್ತು ದಿನಗಳಿಗೆ ಕಡಿಮೆ ಇರಬಾರದು)

-ನೋಟೀಸನ್ನು ನೀಡತಕ್ಕದ್ದು ಮತ್ತು ಯುಕ್ತವಾಗಿ ಸಲ್ಲಿಸಲಾದ ಮತ್ತು ಹಿಂತೆಗೆದುಕೊಂಡಿರದ ಯಾವುವೇ ಮನವಿಗಳು ಅಥವಾ ಆಕ್ಷೇಪಣೆಗಳನ್ನು ಅವುಗಳನ್ನು ಸ್ವೀಕರಿಸಿದ ಹತ್ತು ದಿವಸಗಳೊಳಗೆ ಪರಿಗಣಿಸತಕ್ಕದ್ದು.

(8) ಉಪ ಪ್ರಕರಣ (7)ರ ಅಡಿಯಲ್ಲಿ ನೋಟೀಸನ್ನು ನೀಡಿದ ಮೇಲೆ, ಆಯೋಗವು ನೋಟೀಸು ಸಂಬಂಧಪಡುವ ಅಂತಿಮ ಆದೇಶವನ್ನು ರದ್ದುಪಡಿಸದಿರಲು ನಿರ್ಧರಿಸಿದರೆ, ಅದು ಪ್ರಕರಣ 29ರ ಉಪ ಪ್ರಕರಣ (7)ರ (ಎ) ಮತ್ತು (ಬಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ರೀತಿಯಲ್ಲಿಯೇ ತನ್ನ ನಿರ್ಧಾರದ ನೋಟೀಸನ್ನು ಸಂಬಂಧಪಟ್ಟ ವ್ಯಕ್ತಿಗಳಿಗೆ ನೀಡತಕ್ಕದ್ದು.

**31. ಮಧ್ಯಂತರ ಮತ್ತು ಅಂತಿಮ ಆದೇಶಗಳ ಪರಿಣಾಮ ಮತ್ತು ಜಾರಿ ಮತ್ತು ತುರ್ತು ಉಪಬಂಧಗಳು.-** (1) ಈ ಅಧಿನಿಯಮದ ಪ್ರಕರಣ 47ಕ್ಕೆ ಬಾಧಕವಾಗದ ರೀತಿಯಲ್ಲಿ ಆಯೋಗವು ಹೊರಡಿಸಿದ ಎಲ್ಲ ಮಧ್ಯಂತರ ಅಥವಾ ಅಂತಿಮ ಆದೇಶಗಳು ಮತ್ತು ನಿರ್ದೇಶನಗಳು, ಅವುಗಳು ಒಂದು ಸಿವಿಲ್ ನ್ಯಾಯಾಲಯವು ಹೊರಡಿಸಿದ ಡಿಕ್ರಿಯಾಗಿದ್ದರೆ ಹೇಗೋ ಹಾಗೆ ಕಾನೂನಿನಲ್ಲಿ ಜಾರಿಗೊಳಿಸುವಂಥದ್ದಾಗಿರತಕ್ಕದ್ದು.

(2) ಆಯೋಗವು, ತಾನು ನೀಡಿದ ಆದೇಶಗಳು ಮತ್ತು ನಿರ್ದೇಶನಗಳನ್ನು, ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅವಶ್ಯವಿರುವಂಥ ಪೊಲೀಸರು ಮತ್ತು ಇತರ ಪ್ರಾಧಿಕಾರಗಳ ನೆರವನ್ನು ರಾಜ್ಯದಲ್ಲಿ ಪಡೆದುಕೊಳ್ಳಲು ಹಕ್ಕುಳ್ಳದ್ದಾಗಿರತಕ್ಕದ್ದು.

(3) ಆಯೋಗವು, ಈ ಅಧಿನಿಯಮದ ಧ್ಯೇಯ ಮತ್ತು ಉದ್ದೇಶಗಳನ್ನು ಮತ್ತು ಸಮರ್ಥವಾದ ಮತ್ತು ಸುರಕ್ಷಿತವಾದ ವಿಧಾನದಲ್ಲಿ ಬಳಕೆದಾರರಿಗೆ ನಿರಂತರ ವಿದ್ಯುತ್ ಸರಬರಾಜನ್ನು ಒದಗಿಸುವ ಅಗತ್ಯತೆಯನ್ನು ಗಣನೆಗೆ ತೆಗೆದುಕೊಂಡು, ಈ ವಿಚಾರದಲ್ಲಿ ಯಾವುದೇ ವಿಚಾರಣೆ ಮತ್ತು ಮಧ್ಯಂತರ ಆದೇಶ ಅಥವಾ ಅಂತಿಮ ಆದೇಶಗಳು ಇತ್ಯರ್ಥದಲ್ಲಿರುವಾಗ ಲೈಸೆನ್ಸುದಾರನ ಯಾವುದೇ ಉದ್ಯಮದ ವ್ಯವಸ್ಥಾಪನೆ ಮತ್ತು ನಿಯಂತ್ರಣವನ್ನು, ಆ ಉದ್ಯಮದ ಸ್ವತ್ತುಗಳು, ಹಿತಾಸಕ್ತಿಗಳು ಮತ್ತು ಹಕ್ಕುಗಳ ಸಮೇತ ನಿಹಿತಗೊಳಿಸಲು ನಿರ್ದೇಶನಗಳನ್ನು ಹೊರಡಿಸುವ ಸಂದರ್ಭವು ಸನ್ನಿಹಿತವಾಗಿದೆಯೆಂದು ಪರಿಗಣಿಸಿದರೆ, ಅಂಥ ಆದೇಶ ಅಥವಾ ನಿರ್ದೇಶನಗಳನ್ನು ನೀಡಲು ಹಕ್ಕುಳ್ಳದ್ದಾಗಿರತಕ್ಕದ್ದು ; ಅಂಥ ನಿರ್ದೇಶನಗಳು ಅಥವಾ ಆದೇಶಗಳನ್ನು ಲೈಸೆನ್ಸುದಾರನಿಗೆ ಆ ಆದೇಶಗಳು ಅಥವಾ ನಿರ್ದೇಶನಗಳನ್ನು ಹೊರಡಿಸುವ ಉದ್ದೇಶದ ಬಗ್ಗೆ ಪೂರ್ವ ಸೂಚನೆಯನ್ನು ಅಥವಾ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ನೀಡಿಲ್ಲವೆಂಬ ಆಧಾರದ ಮೇಲೆ ಪ್ರಶ್ನಿಸತಕ್ಕದ್ದಲ್ಲ. ಆದಾಗ್ಯೂ ಆಯೋಗವು ಪ್ರಕರಣ 29 ಮತ್ತು 30ರ ನಿಬಂಧನೆಗಳ ಪ್ರಕಾರ ಮುಂದಿನ ಆದೇಶಗಳನ್ನು ಹೊರಡಿಸುವುದಕ್ಕೆ ಮೊದಲು ಲೈಸೆನ್ಸ್‌ದಾರನಿಗೆ ಒಂದು ಅವಕಾಶ ನೀಡತಕ್ಕದ್ದು ಮತ್ತು ವಿಚಾರಣೆ ನಡೆಸತಕ್ಕದ್ದು.

**32. ದಂಡಶುಲ್ಕ ಮತ್ತು ಶುಲ್ಕಗಳು.-** (1) ಆಯೋಗವು, ವಿದ್ಯುತ್ ಉತ್ಪಾದಿಸುವ ಕಂಪನಿಗಳು, ಲೈಸೆನ್ಸುದಾರರು ಅಥವಾ ಇತರ ವ್ಯಕ್ತಿಗಳು, ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳು ಮತ್ತು ವಿನಿಯಮಗಳು ಮತ್ತು ಕಾಲಕಾಲಕ್ಕೆ ಆಯೋಗವು ನೀಡಿರುವ ನಿರ್ದೇಶನಗಳು ಅಥವಾ ಆದೇಶಗಳನ್ನು ಪಾಲಿಸದಿದ್ದಲ್ಲಿ ಅಥವಾ ಉಲ್ಲಂಘಿಸಿದಲ್ಲಿ, ವಿನಿಮಯಗಳಲ್ಲಿ ಆಯೋಗವು ನಿರ್ದಿಷ್ಟಪಡಿಸಿದಂತಹ ದಂಡಶುಲ್ಕಗಳು ಮತ್ತು ಶುಲ್ಕಗಳನ್ನು ವಿಧಿಸಲು ಹಕ್ಕುಳ್ಳದ್ದಾಗಿರತಕ್ಕದ್ದು. ಆಯೋಗವು ವಿಧಿಸಲು ಹಕ್ಕುಳ್ಳದ್ದಾಗಿರುವ ದಂಡಶುಲ್ಕಗಳು, ಪಾಲಿಸದಿರುವ ಅಥವಾ ಉಲ್ಲಂಘನೆಯ ಕೃತ್ಯಕ್ಕೆ ಐದು ಲಕ್ಷ ರೂಪಾಯಿಗಳವರೆಗೆ ಮತ್ತು ಪಾಲಿಸದಿರುವಿಕೆ ಅಥವಾ ಉಲ್ಲಂಘನೆಯು ಮುಂದುವರಿಯುವ ಪ್ರತಿ ದಿನಕ್ಕೆ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಮೀರದ ಹೆಚ್ಚಿನ ಮೊತ್ತದವರೆಗೂ ವಿಸ್ತರಿಸಲ್ಪಡಬಹುದು.

(2) ಆಯೋಗವು, ಈ ಭಾಗದ ಅಡಿಯಲ್ಲಿ ಮಧ್ಯಂತರ ಅಥವಾ ಅಂತಿಮ ಆದೇಶ ಮಾಡುವಾಗ, ಉಪ ಪ್ರಕರಣ (1)ರಲ್ಲಿ ಉಪಬಂಧಿಸಿರುವಂತೆ ಉಲ್ಲಂಘನೆಯ ಅಥವಾ ಪಾಲಿಸದಿರುವಿಕೆಯ ತಪ್ಪಿತಸ್ಥನು, ಅಂತಹ

ಉಲ್ಲಂಘನೆ ಅಥವಾ ಪಾಲಿಸದಿರುವಿಕೆಯಿಂದ ಬಾಧಿತರಾದ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಪರಿಹಾರ ಸಂದಾಯ ಮಾಡುವಂತೆ ನಿರ್ದೇಶಿಸಲು ಹಕ್ಕುಳ್ಳದ್ದಾಗಿರತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ಆಯೋಗವು ವಿಧಿಸುವ ದಂಡಗಳು, ಶುಲ್ಕಗಳು ಮತ್ತು ಪರಿಹಾರಗಳು, ಉಲ್ಲಂಘನೆಯ ಅಥವಾ ಪಾಲಿಸದಿರುವಿಕೆಯ ತಪ್ಪಿತಸ್ಥನಾದ ವ್ಯಕ್ತಿಯು ಸಂದಾಯ ಮಾಡಿರುವ ಇತರ ಯಾವುದೇ ಹೊಣೆಗಾರಿಕೆಗೆ ಹೆಚ್ಚಿಗೆಯಾಗಿರತಕ್ಕದ್ದು ಮತ್ತು ಅದನ್ನು ಕಡಿಮೆಗೊಳಿಸುವಂತಿರತಕ್ಕದ್ದಲ್ಲ.

**33. ಆಯೋಗದ ಸಾಮಾನ್ಯ ನಿಯಂತ್ರಣ.–** (1) ಲೈಸೆನ್ಸುದಾರರು, ವಿದ್ಯುತ್ ಉತ್ಪಾದನಾ ಕಂಪನಿಗಳು ಮತ್ತು ಇತರ ವ್ಯಕ್ತಿಗಳು, ಆಯೋಗವು ರಚಿಸಿರುವ ವಿನಿಯಮಗಳನ್ನು ಮತ್ತು ಸಮಗ್ರ ವಿದ್ಯುತ್ ವ್ಯವಸ್ಥೆಯ ಪ್ರವರ್ತನೆ ಮತ್ತು ನಿರ್ವಹಣೆ ಹಾಗೂ ಅದರ ಸುರಕ್ಷತೆಗೆ ಸಂಬಂಧಿಸಿದ ನಿಬಂಧನೆಗಳು ಮತ್ತು ಷರತ್ತುಗಳಿಗೆ ಅನ್ವಯವಾಗುವಂತೆ ಕಾಲಕಾಲಕ್ಕೆ ಆಯೋಗವು ಹೊರಡಿಸುವ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

(2) ಲೈಸೆನ್ಸುದಾರರ ಆಸ್ತಿಗಳು, ಸ್ವತ್ತುಗಳು, ಸ್ವತ್ತುಗಳಲ್ಲಿರುವ ಹಿತಾಸಕ್ತಿಗಳು ಮತ್ತು ರಾಜ್ಯದಲ್ಲಿ ಲೈಸೆನ್ಸು ನೀಡಲಾಗಿರುವ ಚಟುವಟಿಕೆಯ ಒಂದು ಅವಿಭಾಜ್ಯ ಅಂಗವಾಗಿರುವ ಅಥವಾ ಅದರ ಸಂಬಂಧದಲ್ಲಿ ಬಳಸಲಾಗುವ ಇತರ ಸೌಲಭ್ಯವನ್ನು ಕುರಿತಂತೆ ಆಯೋಗವು ಮಾಡಿದಂಥ ವಿನಿಯಮಗಳಿಗೆ ಒಳಪಟ್ಟಿರತಕ್ಕದ್ದು ಮತ್ತು ಲೈಸೆನ್ಸುದಾರರು ಅಂಥ ವಿನಿಯಮಗಳನ್ನು ಉಲ್ಲಂಘಿಸಿ ಅಂಥ ಆಸ್ತಿಗಳನ್ನು ವಿಲೆ ಮಾಡತಕ್ಕದ್ದಲ್ಲ ಅಥವಾ ಸಂಪರ್ಕರಹಿತಗೊಳಿಸತಕ್ಕದ್ದಲ್ಲ.

## ಭಾಗ X

## ಸಲಹಾ ಸಮಿತಿ, ಗ್ರಾಹಕ ಸಮಾಲೋಚನೆ, ಮಾಹಿತಿಯನ್ನು ಬಹಿರಂಗಪಡಿಸುವುದು, ನಿರ್ವಹಣೆಯ ಗುಣಮಟ್ಟ, ಇತ್ಯಾದಿ.

**34. ಸಲಹಾ ಸಮಿತಿ.–** (1) ಆಯೋಗವು, ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ಆಯೋಗ ಸಲಹಾ ಸಮಿತಿ ಎಂಬ ಒಂದು ಸಮಿತಿಯನ್ನು ರಚಿಸತಕ್ಕದ್ದು. ಅದು ಆಯೋಗವು ಸೂಕ್ತವೆಂದು ಭಾವಿಸುವಂಥ, ಈ ಮುಂದಿನ ಹಿತಾಸಕ್ತಿಗಳ ಎಂದರೆ, ರಾಜ್ಯದಲ್ಲಿನ ಸರಬರಾಜು ಲೈಸೆನ್ಸುದಾರರು, ರಾಜ್ಯದಲ್ಲಿನ ರವಾನೆ ಲೈಸೆನ್ಸುದಾರರು, ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯುತ್ ಉತ್ಪಾದನಾ ಕಂಪನಿಗಳು, ವಾಣಿಜ್ಯ, ಕೈಗಾರಿಕೆ, ಸಾರಿಗೆ, ಕೃಷಿ, ವಿದ್ಯುತ್ ಸರಬರಾಜು ಕೈಗಾರಿಕೆಯಲ್ಲಿ ನಿಯೋಜಿತರಾಗಿರುವ ಕಾರ್ಮಿಕರ ಮತ್ತು ವಿದ್ಯುಚ್ಛಕ್ತಿ ಗ್ರಾಹಕರ ಹಿತಾಸಕ್ತಿಗಳ ಪ್ರತಿನಿಧಿಗಳ ಅಥವಾ ಪ್ರತಿನಿಧಿ ನಿಕಾಯಗಳ ಜೊತೆಗೆ ಸಮಾಲೋಚಿಸಿದ ನಂತರ ನೇಮಕ ಮಾಡುವಂಥ 9ಕ್ಕೆ ಕಡಿಮೆಯಲ್ಲದ ಮತ್ತು 15ಕ್ಕೆ ಹೆಚ್ಚಿಲ್ಲದ ಸಂಖ್ಯೆಯ ವ್ಯಕ್ತಿಗಳನ್ನು ಒಳಗೊಂಡಿರತಕ್ಕದ್ದು.

(2) ಆಯೋಗದ ಅಧ್ಯಕ್ಷರು ಮತ್ತು ಸದಸ್ಯರುಗಳು ಆಯೋಗದ ಸಲಹಾ ಸಮಿತಿಯ ಪದನಿಮಿತ್ತ ಅಧ್ಯಕ್ಷ ಮತ್ತು ಸದಸ್ಯರಾಗಿರತಕ್ಕದ್ದು.

(3) ಆಯೋಗ ಸಲಹಾ ಸಮಿತಿಯು ಕನಿಷ್ಠ ಮೂರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು.

(4) ಸಲಹಾ ಸಮಿತಿಯ ಅಧಿಕಾರಾವಧಿಯು ಮೂರು ವರ್ಷಗಳಾಗಿರತಕ್ಕದ್ದು ಮತ್ತು ಸದಸ್ಯರ ಪೈಕಿ ಮೂರನೇ ಒಂದರಷ್ಟು ಸದಸ್ಯರು ಪ್ರತಿ ವರ್ಷ ನಿವೃತ್ತರಾಗತಕ್ಕದ್ದು.

(5) ಆಯೋಗ ಸಲಹಾ ಸಮಿತಿಯ ಪ್ರಕಾರ್ಯಗಳು ಈ ಮುಂದಿನಂತಿರತಕ್ಕದ್ದು: –

(ಎ) ರಾಜ್ಯದಲ್ಲಿ ವಿದ್ಯುಚ್ಛಕ್ತಿ ಸರಬರಾಜು ಕೈಗಾರಿಕೆಗೆ ಸಂಬಂಧಿಸಿದ ಪ್ರಧಾನ ಕಾರ್ಯನೀತಿ ವಿಷಯಗಳ ಬಗ್ಗೆ ಆಯೋಗಕ್ಕೆ ಸಲಹೆ ನೀಡುವುದು.

(ಬಿ) ಲೈಸೆನ್ಸುದಾರರು ಒದಗಿಸುವ ಸೇವೆಯ ಗುಣಮಟ್ಟ, ನಿರಂತರತೆ ಮತ್ತು ವ್ಯಾಪ್ತಿ ಹಾಗೂ ಲೈಸೆನ್ಸುದಾರರು ಅವರ ಲೈಸೆನ್ಸುಗಳ ಷರತ್ತುಗಳು ಮತ್ತು ಅಗತ್ಯತೆಗಳನ್ನು ಪಾಲಿಸುವುದಕ್ಕೆ ಸಂಬಂಧಿಸಿದ ಸಂಗತಿಗಳು ಸೇರಿದಂತೆ ಆಯೋಗವು ತನ್ನ ಮುಂದಿಡುವ ಯಾವುವೇ ಸಂಗತಿಗಳ ಬಗ್ಗೆ ಆಯೋಗಕ್ಕೆ ಸಲಹೆ ನೀಡುವುದು.

**35. ಮಾಹಿತಿಯನ್ನು ಬಹಿರಂಗಪಡಿಸುವುದು.** - ಆಯೋಗವು, ಆಯೋಗ ಸಲಹಾ ಸಮಿತಿ, ಸರಬರಾಜು ಲೈಸೆನ್ಸ್‌ದಾರರು ಅಥವಾ ಬಾಧಿತರಾಗಬಹುದಾದ ವ್ಯಕ್ತಿಗಳ ಅಥವಾ ಪ್ರವರ್ಗಗಳ ಪ್ರತಿನಿಧಿಗಳು ಎಂದು ಆಯೋಗಕ್ಕೆ ಕಂಡುಬರುವ ಇತರ ವ್ಯಕ್ತಿಗಳು ಅಥವಾ ನಿಕಾಯಗಳೊಂದಿಗೆ ಸಮಾಲೋಚಿಸಿದ ತರುವಾಯ,-

(ಎ) ಅಂಥ ಲೈಸೆನ್ಸ್‌ದಾರರು, ಗ್ರಾಹಕರಿಗೆ ಅವರ ಹಕ್ಕುಗಳ ಬಗ್ಗೆ ತಿಳಿಸಿಕೊಡುವ ಸನ್ನಿವೇಶಗಳು ;

(ಬಿ) ಗ್ರಾಹಕರಿಗೆ ವಿದ್ಯುಚ್ಛಕ್ತಿ ಪೂರೈಸುವ ಸಂಬಂಧದಲ್ಲಿ (1)ನೇ ಉಪ ಪ್ರಕರಣದ ಅಡಿಯಲ್ಲಿ ಅಥವಾ ಇತರ ರೀತಿಯಲ್ಲಿ ಉದ್ಭವಿಸಬಹುದಾದ ಯಾವುದೇ ಕರ್ತವ್ಯಕ್ಕೆ ಸಂಬಂಧಿಸಿದಂತೆ ಕಾರ್ಯನಿರ್ವಹಣೆಯ ಗುಣಮಟ್ಟಗಳು ; ಮತ್ತು

(ಸಿ) ವಿನಿಯಮಗಳಲ್ಲಿ ಅಗತ್ಯಪಡಿಸಲಾದವುಗಳಿಂದ ಲೈಸೆನ್ಸ್‌ದಾರರಿಗೆ ವಿನಾಯಿತಿ ನೀಡಬೇಕಾದ ಸನ್ನಿವೇಶಗಳು,

-ಇವುಗಳನ್ನು ನಿರ್ದಿಷ್ಟಪಡಿಸಿ ವಿನಿಯಮಗಳನ್ನು ಮಾಡಬಹುದು ಮತ್ತು ಬೇರೆ ಬೇರೆ ಲೈಸೆನ್ಸ್‌ದಾರರಿಗೆ ಬೇರೆ ಬೇರೆ ಉಪಬಂಧಗಳನ್ನು ಕಲ್ಪಿಸಬಹುದು.

**36. ವಿದ್ಯುಚ್ಛಕ್ತಿ ಪೂರೈಕೆ ಮತ್ತು ಕಾರ್ಯನಿರ್ವಹಣೆಯ ಗುಣಮಟ್ಟ.**- (1) ಆಯೋಗವು, ಲೈಸೆನ್ಸ್‌ದಾರರು, ಆಯೋಗ ಸಲಹಾ ಸಮಿತಿ ಮತ್ತು ಬಾಧಿತರಾಗಬಹುದಾದ ವ್ಯಕ್ತಿಗಳ ಪ್ರತಿನಿಧಿಗಳು ಎಂದು ಆಯೋಗಕ್ಕೆ ಕಂಡುಬರುವ ವ್ಯಕ್ತಿಗಳು ಅಥವಾ ನಿಕಾಯಗಳ ಜೊತೆಗೆ ಸಮಾಲೋಚಿಸಿ, ಕಾಲಕಾಲಕ್ಕೆ ,-

(ಎ) ವಿದ್ಯುಚ್ಛಕ್ತಿ ಸರಬರಾಜು ಸೇವೆಗಳ ಉಪಬಂಧಗಳಿಗೆ ಸಂಬಂಧಿಸಿದಂತೆ ಹಾಗೂ ಗ್ರಾಹಕರು ವಿದ್ಯುಚ್ಛಕ್ತಿಯನ್ನು ಸಮರ್ಥ ರೀತಿಯಲ್ಲಿ ಬಳಸುವುದನ್ನು ಹೆಚ್ಚಿಸುವುದಕ್ಕೆ ಸಂಬಂಧಪಟ್ಟಂತೆ ಹಾಗೂ ತನಗೆ ಮಿತವ್ಯಯಕಾರಿ ಎಂದು ಮತ್ತು ಅಂಥ ಲೈಸೆನ್ಸ್‌ದಾರರು ಸಾಧಿಸಲೇಬೇಕಾದುದು ಎಂದು ಕಂಡುಬರುವ ಒಟ್ಟಾರೆ ಕಾರ್ಯನಿರ್ವಹಣೆಯ ಅಂಥ ಗುಣಮಟ್ಟಗಳನ್ನು ನಿರ್ಧರಣೆ ಮಾಡಬೇಕು ; ಮತ್ತು

(ಬಿ) ಹಾಗೆ ನಿರ್ಧರಣೆ ಮಾಡಿದ ಗುಣಮಟ್ಟಗಳನ್ನು ತಾನು ಸೂಕ್ತ ಎಂದು ಭಾವಿಸುವ ಅಂಥ ನಮೂನೆಯಲ್ಲಿ ಮತ್ತು ಅಂಥ ವಿಧಾನದಲ್ಲಿ ಪ್ರಕಟಿಸುವುದಕ್ಕೆ ವ್ಯವಸ್ಥೆ ಮಾಡಬಹುದು.

(2) ಈ ಪ್ರಕರಣದ ಅಡಿಯಲ್ಲಿ ಬೇರೆ ಬೇರೆ ಲೈಸೆನ್ಸ್‌ದಾರರಿಗೆ ಬೇರೆ ಬೇರೆ ಗುಣಮಟ್ಟಗಳನ್ನು ನಿರ್ಧರಣೆ ಮಾಡಬಹುದು.

**37. ಕಾರ್ಯನಿರ್ವಹಣೆಯ ಮಟ್ಟದ ಬಗ್ಗೆ ಮಾಹಿತಿ.**- (1) ಆಯೋಗವು ಕಾಲಕಾಲಕ್ಕೆ,-

(ಎ) ಈ ಅಧಿನಿಯಮದ ಅಡಿಯಲ್ಲಿ ಲೈಸೆನ್ಸ್‌ದಾರರಿಗೆ ವಿಧಿಸಲಾದ ಜುಲ್ಮಾನೆಗಳು ಅಥವಾ ದಂಡಗಳು;

(ಬಿ) ವಿದ್ಯುಚ್ಛಕ್ತಿ ಸರಬರಾಜು ಸೇವೆಗಳ ರವಾನೆ ಹಾಗೂ ಸರಬರಾಜಿಗೆ ಸಂಬಂಧಪಟ್ಟಂತೆ ಅಂಥ ಲೈಸೆನ್ಸ್‌ದಾರರು ಸಾಧಿಸುವ ಒಟ್ಟಾರೆ ಕಾರ್ಯನಿರ್ವಹಣೆಯ ಮಟ್ಟಗಳು ; ಮತ್ತು

(ಸಿ) ಗ್ರಾಹಕರು ವಿದ್ಯುಚ್ಛಕ್ತಿಯನ್ನು ಸಮರ್ಥ ರೀತಿಯಲ್ಲಿ ಬಳಸಿಕೊಳ್ಳುವುದನ್ನು ಹೆಚ್ಚಿಸುವಲ್ಲಿ ಅಂಥ ಲೈಸೆನ್ಸ್‌ದಾರರು ಸಾಧಿಸಿದ ಕಾರ್ಯನಿರ್ವಹಣೆಯ ಮಟ್ಟಗಳು,

-ಇವುಗಳ ಬಗ್ಗೆ ಮಾಹಿತಿ ಸಂಗ್ರಹಿಸತಕ್ಕದ್ದು.

(2) ಆಯೋಗವು ನೀಡಿದ ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಪ್ರತಿ ವರ್ಷದಲ್ಲಿ ಅಂಥ ದಿನಾಂಕದಂದು ಅಥವಾ ಅದಕ್ಕೂ ಮುಂಚೆ ಪ್ರತಿಯೊಬ್ಬ ಲೈಸೆನ್ಸ್‌ದಾರನು ಆಯೋಗಕ್ಕೆ ಈ ಮುಂದಿನ ಮಾಹಿತಿಯನ್ನು, ಎಂದರೆ :-

(ಎ) ನಿರ್ಧರಣೆ ಮಾಡಲಾದ ಪ್ರತಿಯೊಂದು ಗುಣಮಟ್ಟಕ್ಕೆ ಸಂಬಂಧಿಸಿದಂತೆ ಜುಲ್ಮಾನೆ ವಿಧಿಸಲಾದ ಪ್ರಕರಣಗಳ ಸಂಖ್ಯೆ ಹಾಗೂ ಅಂಥ ಜುಲ್ಮಾನೆ ಮೌಲ್ಯಗಳ ಒಟ್ಟು ಮೊತ್ತ ; ಮತ್ತು

(ಬಿ) ನಿರ್ದಿಷ್ಟಪಡಿಸಬಹುದಾದಂತೆ ಲೈಸೆನ್ಸ್‌ದಾರನು ನಿರ್ಧರಣೆ ಮಾಡಲಾದ ಪ್ರತಿಯೊಂದು ಗುಣಮಟ್ಟಕ್ಕೆ ಸಂಬಂಧಿಸಿದಂತೆ ಸಾಧಿಸಿದ ಕಾರ್ಯನಿರ್ವಹಣೆಯ ಮಟ್ಟ ಕುರಿತ ಅಂಥ ಮಾಹಿತಿಯನ್ನು,

-ಒದಗಿಸತಕ್ಕದ್ದು.

(3) ಆಯೋಗವು ತನಗೆ ಅಗತ್ಯವೆಂದು ತೋರಬಹುದಾದಂತೆ ಪ್ರತಿ ವರ್ಷ ಕನಿಷ್ಠ ಪಕ್ಷ ಒಂದು ಸಲವಾದರೂ, ತಾನು ಸೂಕ್ತವೆಂದು ಭಾವಿಸುವ ಅಂಥ ನಮೂನೆಯಲ್ಲಿ ಮತ್ತು ಅಂಥ ವಿಧಾನದಲ್ಲಿ ಈ ಪ್ರಕರಣದ ಅಡಿಯಲ್ಲಿ ತಾನು ಸಂಗ್ರಹಿಸಿದ ಅಥವಾ ತನಗೆ ಒದಗಿಸಲಾದ ಮಾಹಿತಿಯ ಪ್ರಕಟಣೆಗೆ ವ್ಯವಸ್ಥೆ ಮಾಡತಕ್ಕದ್ದು.

**38. ಮಾಹಿತಿಯನ್ನು ಬಹಿರಂಗಪಡಿಸುವುದಕ್ಕೆ ಇರುವ ನಿರ್ಬಂಧ.-** (1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು,-

(ಎ) ಈ ಅಧಿನಿಯಮದ ಯಾವುವೇ ಉಪಬಂಧಗಳ ಅಡಿಯಲ್ಲಿ ಅಥವಾ ಅವುಗಳ ಬಲದಿಂದ ಆಯೋಗವು ಪಡೆದಿರುವ ; ಮತ್ತು

(ಬಿ) ಯಾವೊಬ್ಬ ವ್ಯಕ್ತಿಗೆ ಅಥವಾ ಯಾವುದೇ ನಿರ್ದಿಷ್ಟ ವ್ಯವಹಾರಕ್ಕೆ ಸಂಬಂಧಿಸಿದ ಮಾಹಿತಿಯನ್ನು,

-ಆ ವ್ಯಕ್ತಿಯು ಬದುಕಿರುವ ಕಾಲದಲ್ಲಿ ಅಥವಾ ಅಂಥ ನಿರ್ದಿಷ್ಟ ವ್ಯವಹಾರವನ್ನು ನಡೆಸಲಾಗುತ್ತಿರುವಷ್ಟು ಕಾಲವೂ ಅಂಥ ವ್ಯಕ್ತಿಯ ಅಥವಾ ಅಂಥ ವ್ಯವಹಾರವನ್ನು ನಡೆಸುತ್ತಿರುವ ವ್ಯಕ್ತಿಯ ಅನುಮತಿ ಇಲ್ಲದೆ ಬಹಿರಂಗಪಡಿಸತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದಲ್ಲಿ ಇರುವ ನಿರ್ಬಂಧದ ಯಾವುದೇ ಮಾಹಿತಿಯನ್ನು ಈ ಮುಂದಿನ ಉದ್ದೇಶಕ್ಕಾಗಿ ಬಹಿರಂಗಗೊಳಿಸಲಾಗಿದ್ದರೆ, ಎಂದರೆ:-

(ಎ) ಈ ಅಧಿನಿಯಮದ ಅಡಿಯಲ್ಲಿ ಆಯೋಗವು ತನ್ನ ಯಾವುವೇ ಪ್ರಕಾರ್ಯಗಳನ್ನು ಕೈಗೊಳ್ಳುವ ಅಥವಾ ರಾಜ್ಯ ಸರ್ಕಾರವು ಶಾಸನದ ಮೇರೆಗೆ ತನ್ನ ಯಾವುದೇ ಪ್ರಕಾರ್ಯವನ್ನು ನಿರ್ವಹಿಸಲು ಅನುಕೂಲ ಮಾಡಿಕೊಡುವ ಉದ್ದೇಶಕ್ಕಾಗಿ;

(ಬಿ) ಕೇಂದ್ರ ಸರ್ಕಾರವು ಈ ಅಧಿನಿಯಮದ ಅಡಿಯಲ್ಲಿ ಅಥವಾ ಯಾವುದೇ ಕೇಂದ್ರ ಶಾಸನದ ಅಡಿಯಲ್ಲಿ ತನ್ನ ಯಾವುವೇ ಕರ್ತವ್ಯಗಳು ಅಥವಾ ಪ್ರಕಾರ್ಯಗಳನ್ನು ಕೈಗೊಳ್ಳಲು ಅನುಕೂಲ ಮಾಡಿಕೊಡುವ ಉದ್ದೇಶಕ್ಕಾಗಿ ;

(ಸಿ) ಕರ್ನಾಟಕ ಮಹಾಲೇಖಾಪಾಲರು ಈ ಅಧಿನಿಯಮದ ಅಡಿಯಲ್ಲಿ ತನ್ನ ಕರ್ತವ್ಯಗಳು ಮತ್ತು ಕಾರ್ಯಗಳನ್ನು ನೆರವೇರಿಸಲು ಅನುಕೂಲ ಮಾಡಿಕೊಡುವ ಉದ್ದೇಶಕ್ಕಾಗಿ;

(ಡಿ) ದಿವಾಳಿತನಕ್ಕೆ ಸಂಬಂಧಿಸಿದ ಯಾವುದೇ ಕಾನೂನಿನ ಅಡಿಯಲ್ಲಿ ತನ್ನ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕೆ ಯಾವೊಬ್ಬ ಸಕ್ಷಮ ವ್ಯಕ್ತಿಗೆ ಸಾಧ್ಯವಾಗುವ ಅಥವಾ ನೆರವು ನೀಡುವ ಉದ್ದೇಶಕ್ಕಾಗಿ;

(ಇ) ಯಾವುದೇ ಕ್ರಿಮಿನಲ್ ಅಪರಾಧದ ತನಿಖೆ ಅಥವಾ ಯಾವುವೇ ಕ್ರಿಮಿನಲ್ ವ್ಯವಹರಣೆಗಳನ್ನು ನಡೆಸುವುದಕ್ಕೆ ಸಂಬಂಧಪಟ್ಟಂತೆ ; ಅಥವಾ

(ಎಫ್) ಈ ಅಧಿನಿಯಮದ ಅಡಿಯಲ್ಲಿ ಅಥವಾ ಯಾವುದೇ ಕೇಂದ್ರ ಅಥವಾ ರಾಜ್ಯ ಶಾಸನದ ಬಲದಿಂದ ಆಗಿರುವ ಯಾವುದೇ ಸಿವಿಲ್ ವ್ಯವಹರಣೆ ನಡೆಸುವುದಕ್ಕೆ, ಆ ಮಾಹಿತಿಯು ನೇರವಾಗಿ ಸಂಬಂಧಪಟ್ಟಿದ್ದರೆ,

-ಅನ್ವಯವಾಗತಕ್ಕದ್ದಲ್ಲ.

(3) ಮೇಲ್ಕಂಡ (1)ನೇ ಉಪ ಪ್ರಕರಣದಲ್ಲಿ ಇರುವ ನಿರ್ಬಂಧಗಳು ಸಾರ್ವಜನಿಕ ಪರಿವ್ಯಾಪ್ತಿಗೆ ಒಳಪಟ್ಟ ಯಾವುದೇ ಮಾಹಿತಿಯನ್ನು ಬಹಿರಂಗಪಡಿಸುವುದಕ್ಕೆ ಅನ್ವಯವಾಗತಕ್ಕದ್ದಲ್ಲ.

## ಭಾಗ XI

## ಮಧ್ಯಸ್ಥಿಕೆ ಮತ್ತು ಅಪೀಲುಗಳು

**39. ಆಯೋಗದ ಮಧ್ಯಸ್ಥಿಕೆ.-** (1) ಮಧ್ಯಸ್ಥಿಕೆ ಹಾಗೂ ರಾಜಿ ಅಧಿನಿಯಮ, 1996 (1996ರ ಕೇಂದ್ರ ಅಧಿನಿಯಮ 26) ಅಥವಾ ಅದರ ಪರ್ಯಾಯ ಅಧಿನಿಯಮ ಸೇರಿದಂತೆ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಲೈಸೆನ್ಸುದಾರರ ಮಧ್ಯೆ ಉದ್ಭವಿಸುವ ಯಾವುದೇ ವಿವಾದವನ್ನು ಆಯೋಗಕ್ಕೆ ತಿಳಿಸತಕ್ಕದ್ದು. ಆಯೋಗವು ಅಂಥ ವಿವಾದದ ನ್ಯಾಯ ನಿರ್ಣಯಕ್ಕೆ ಅಥವಾ ಇತ್ಯರ್ಥಕ್ಕೆ ಮಧ್ಯಸ್ಥಗಾರನಾಗಿ ವರ್ತಿಸಬಹುದು ಅಥವಾ ಮಧ್ಯಸ್ಥಗಾರರನ್ನು ನಾಮನಿರ್ದೇಶಿಸಬಹುದು. ಯಾವುದೇ ಅಂಥ ನ್ಯಾಯನಿರ್ಣಯ ಮತ್ತು ಇತ್ಯರ್ಥಕ್ಕೆ ಸಂಬಂಧಪಟ್ಟಂತೆ ಇರುವ ಪದ್ಧತಿಯು ಅಥವಾ ಕಾರ್ಯವಿಧಾನವು ವಿನಿಯಮಗಳಲ್ಲಿ ನಿರ್ಧರಿಸಬಹುದಾದಂತೆ ಇರತಕ್ಕದ್ದು.

(2) ಆಯೋಗವು ನೇಮಿಸಿದ ಮಧ್ಯಸ್ಥಗಾರನು ಐತೀರ್ಪು ನೀಡಿದರೆ ಅದನ್ನು ಆಯೋಗದ ಮುಂದೆ ಮಂಡಿಸತಕ್ಕದ್ದು. ಆಯೋಗವು,-

(ಎ) ಐತೀರ್ಪನ್ನು ಸ್ಥಿರಗೊಳಿಸುವ ಹಾಗೂ ಜಾರಿಗೊಳಿಸುವ ;

(ಬಿ) ಐತೀರ್ಪನ್ನು ರದ್ದುಗೊಳಿಸುವ ಅಥವಾ ಮಾರ್ಪಡಿಸುವ ; ಅಥವಾ

(ಸಿ) ಮಧ್ಯಸ್ಥಗಾರನು ಐತೀರ್ಪನ್ನು ಮರುಪರಿಶೀಲನೆಗಾಗಿ ಕೈಗೆತ್ತಿಕೊಳ್ಳುವುದಕ್ಕಾಗಿ ಹಿಂತಿರುಗಿಸುವ ಆದೇಶಗಳೂ ಸೇರಿದಂತೆ ಐತೀರ್ಪಿನ ಮೇಲೆ ಸೂಕ್ತ ಆದೇಶಗಳನ್ನು ಹೊರಡಿಸುವುದಕ್ಕೆ ಅಧಿಕಾರ ಹೊಂದಿರತಕ್ಕದ್ದು.

(3) (1) ನೇ ಉಪ ಪ್ರಕರಣದ ಅಡಿಯಲ್ಲಿ ಆಯೋಗವು ನೀಡಿದ ಐತೀರ್ಪು ಅಥವಾ (2)ನೇ ಉಪ ಪ್ರಕರಣದ ಅಡಿಯಲ್ಲಿ ಆಯೋಗವು ಮಾಡಿದ ಆದೇಶ, ಆಯೋಗವು ಕೈಗೊಂಡ ತೀರ್ಮಾನ ಅಥವಾ ಆದೇಶವಾಗಿರತಕ್ಕದ್ದು ಹಾಗೂ ಈ ಅಧಿನಿಯಮದಲ್ಲಿ ಉಪಬಂಧಿಸಲಾದಂತೆ ಅಪೀಲು ಯೋಗ್ಯವಾಗಿರತಕ್ಕದ್ದು ಮತ್ತು ಅದು ಮಧ್ಯಸ್ಥಿಕೆಗೆ ಸಂಬಂಧಿಸಿದ ಯಾವುದೇ ಕಾನೂನಿನ ಅಡಿಯಲ್ಲಿನ ಯಾವುದೇ ವ್ಯವಹರಣೆಗೆ ಒಳಪಟ್ಟಿರತಕ್ಕದ್ದಲ್ಲ.

(4) (2)ನೇ ಪ್ರಕರಣದ ಮೇರೆಗೆ ನೀಡಲಾದ ಐತೀರ್ಪು ಅಥವಾ ಆಯೋಗವು ಹೊರಡಿಸಿದ ಆದೇಶವು ಸಿವಿಲ್ ನ್ಯಾಯಾಲಯದ ಡಿಕ್ರಿಯಾಗಿದ್ದಿದ್ದರೆ ಹೇಗೋ ಹಾಗೆ ಜಾರಿಗೆ ಬರತಕ್ಕದ್ದು.

**40. ಇಲೆಕ್ಟ್ರಿಕಲ್ ಇನ್‌ಸ್ಪೆಕ್ಟರ್‌ಗಳ ತೀರ್ಮಾನದ ಮೇಲೆ ಅಪೀಲುಗಳು.**- 1910ರ ಭಾರತ ವಿದ್ಯುಚ್ಛಕ್ತಿ ಅಧಿನಿಯಮ ಅಥವಾ 1948ರ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ ಅಥವಾ ಅವುಗಳ ಮೇರೆಗೆ ರಚಿಸಲಾದ ಯಾವುದೇ ನಿಯಮದಲ್ಲಿ ವಿರುದ್ಧವಾದುದೇನೇ ಇದ್ದರೂ, ಒಬ್ಬ ಇಲೆಕ್ಟ್ರಿಕಲ್ ಇನ್‌ಸ್ಪೆಕ್ಟರ್‌ನ (ಕೇಂದ್ರ ಸರ್ಕಾರದ ಅಥವಾ ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರದ ಅಥವಾ ಕೇಂದ್ರ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಇನ್ಸ್‌ಪೆಕ್ಟರನನ್ನು ಹೊರತುಪಡಿಸಿ) ತೀರ್ಮಾನದ ಮೇಲಿನ ಒಂದು ಅಪೀಲನ್ನು 39ನೇ ಪ್ರಕರಣದ ಸಂಬಂಧದಲ್ಲಿ ಆಯೋಗಕ್ಕೆ ಅಥವಾ ಆಯೋಗದಿಂದ ನೇಮಕ ಮಾಡಲಾಗುವ ಮಧ್ಯಸ್ಥಗಾರನಿಗೆ ಸಲ್ಲಿಸತಕ್ಕದ್ದು.

**41. ಆಯೋಗದ ಆದೇಶದ ವಿರುದ್ಧ ಅಪೀಲುಗಳು.**- ಆ ಅಧಿನಿಯಮದ ಮೇರೆಗೆ ಹೊರಡಿಸಲಾದ ಆಯೋಗದ ಯಾವುದೇ ತೀರ್ಮಾನ ಅಥವಾ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಅಂಥ ಆದೇಶದಿಂದ ಉಂಟಾಗುವ ಕಾನೂನು ಸಮಸ್ಯೆಗಳ ಮೇಲೆ ಆತನಿಗೆ ಆಯೋಗದ ತೀರ್ಮಾನವನ್ನು ಅಥವಾ ಆದೇಶವನ್ನು ತಿಳಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು :

ಪರಂತು, ಉಚ್ಚನ್ಯಾಯಾಲಯವು, ಸದರಿ ಅವಧಿಯೊಳಗೆ ಅಪೀಲು ಸಲ್ಲಿಸಲು ಸಾಧ್ಯವಾಗದ್ದಕ್ಕೆ ಸಾಕಷ್ಟು ಕಾರಣಗಳಿದ್ದುವೆಂಬುದು ಅದಕ್ಕೆ ಮನವರಿಕೆಯಾದರೆ, ಮೂವತ್ತು ದಿವಸಗಳಿಗೆ ಮೀರದ ಹೆಚ್ಚಿನ ಅವಧಿಯೊಳಗೆ ಅಪೀಲು ಸಲ್ಲಿಸಲು ಅನುಮತಿಸಬಹುದು.

## ಭಾಗ XII

### ಅಪರಾಧಗಳು ಹಾಗೂ ದಂಡನೆಗಳು

**42. 18ನೇ ಪ್ರಕರಣದ ಉಲ್ಲಂಘನೆಗಾಗಿ ದಂಡನೆ.**- ಈ ಅಧಿನಿಯಮದ ಅಥವಾ ಈ ಅಧಿನಿಯಮದ ಮೇರೆಗೆ ಮಾಡಲಾದ ವಿನಿಯಮಗಳ ಅಥವಾ 1910ರ ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮದ ಅಥವಾ 1948ರ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮದ ಉಪಬಂಧಗಳ ಅಥವಾ ಸದರಿ ಅಧಿನಿಯಮಗಳ ಮೇರೆಗೆ ರಚಿಸಲಾದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿ ವಿದ್ಯುಚ್ಛಕ್ತಿಯ ರವಾನೆ ಅಥವಾ ಸರಬರಾಜು ಅಥವಾ ಬಳಕೆ ವ್ಯವಹಾರದಲ್ಲಿ ತೊಡಗಿರುವ ಯಾವುದೇ ವ್ಯಕ್ತಿಯು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ ಅಥವಾ ಅವೆರಡರಿಂದ ಮತ್ತು ಅಪರಾಧವು ಮುಂದುವರೆಯುವಂಥ ಸಂದರ್ಭದಲ್ಲಿ ಮೊದಲ ಅಪರಾಧದ ನಂತರದ

ಪ್ರತಿಯೊಂದು ದಿನಕ್ಕೆ ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ದಂಡದಿಂದ ದಂಡನೀಯನಾಗತಕ್ಕದ್ದು.

**43. ಇತರ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ.-** ಯಾವೊಬ್ಬ ಲೈಸೆನ್ಸುದಾರ ಅಥವಾ ಇತರ ವ್ಯಕ್ತಿಯು ಸಮಂಜಸವಾದ ಕಾರಣ ಇಲ್ಲದೆ, ಈ ಅಧಿನಿಯಮದ ಯಾವುವೇ ಉಪಬಂಧಗಳ ಅಡಿ ಮಾಡಲಾದ ಯಾವುದೇ ನಿರ್ದೇಶನ, ಆದೇಶ ಅಥವಾ ಅಗತ್ಯತೆಯನ್ನು ಪಾಲಿಸಲು ಅಥವಾ ಜಾರಿಗೊಳಿಸಲು ತಪ್ಪಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ ಅಥವಾ ಅವೆರಡರಿಂದ ಮತ್ತು ಅಪರಾಧವು ಮುಂದುವರಿದಂತಹ ಅವಧಿಯಲ್ಲಿ ಮೊದಲಿನ ಅಪರಾಧದ ನಂತರದ ಪ್ರತಿದಿನಕ್ಕೆ ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ದಂಡದಿಂದ ದಂಡನೀಯನಾಗತಕ್ಕದ್ದು.

**44. ಕಂಪನಿಗಳಿಂದ ಅಪರಾಧಗಳು.-** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ, ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರಗಳನ್ನು ನಡೆಸುವ ಬಗ್ಗೆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಆ ಕಂಪನಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಅವರು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು :

ಪರಂತು, ಈ ಉಪ ಪ್ರಕರಣದಲ್ಲಿರುವುದು ಯಾವುದೂ, ಯಾವೊಬ್ಬ ಅಂಥ ವ್ಯಕ್ತಿಯು, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ಪ್ರತಿಬಂಧಿಸಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ ಅವನನ್ನು, ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ಶಿಕ್ಷೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದಲ್ಲಿ ಏನೇ ಇದ್ದಾಗ್ಯೂ ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವನೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವನ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ರುಜುವಾತಾದಲ್ಲಿ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನೂ ಸಹ ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ, ಫರ್ಮಿನ ಒಬ್ಬ ಪಾಲುಗಾರ.

**45. ಅಪರಾಧಗಳ ರಾಜಿಗೆ ಅಧಿಕಾರ.-** ವ್ಯವಹರಣೆಗಳನ್ನು ಪ್ರಾರಂಭಿಸುವುದಕ್ಕೆ ಮೊದಲು ಅಥವಾ ನಂತರ ಆಯೋಗವು ಲಿಖಿತ ರೂಪದಲ್ಲಿ ಕಾರಣಗಳನ್ನು ದಾಖಲುಮಾಡಿ, ಅದು ಮಾಡಿದ ಯಾವುದೇ ಆದೇಶದ ಉಲ್ಲಂಘನೆಗೆ ಸಂಬಂಧಿಸಿದ ಯಾವುದೇ ಅಪರಾಧದ ಬಗ್ಗೆ ರಾಜಿ ಮಾಡಿಕೊಳ್ಳಬಹುದು.

**46. ಅಪರಾಧಗಳ ಸಂಜ್ಞೇಯತೆ.-** (1) ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಸಂಜ್ಞೇಯತೆಯನ್ನು ಆಯೋಗದಿಂದ ಈ ಸಂಬಂಧದಲ್ಲಿ ಸಾಮಾನ್ಯ ಅಥವಾ ವಿಶೇಷವಾಗಿ ಅಧಿಕಾರ ನೀಡಲಾದ ಆಯೋಗದ ಒಬ್ಬ ಅಧಿಕಾರಿಯಿಂದ ಲಿಖಿತ ರೂಪದಲ್ಲಿ ಮಾಡಲಾದ ಫಿರ್ಯಾದಿನ ಹೊರತು ಯಾವುದೇ ನ್ಯಾಯಾಲಯವು ತೆಗೆದುಕೊಳ್ಳತಕ್ಕದ್ದಲ್ಲ ಮತ್ತು ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ಅಥವಾ ಅದಕ್ಕಿಂತ ಮೇಲ್ದರ್ಜೆಯ ನ್ಯಾಯಾಲಯದ ಹೊರತಾದ ಯಾವುದೇ ನ್ಯಾಯಾಲಯವು ಯಾವುದೇ ಅಂಥ ಅಪರಾಧದ ಬಗ್ಗೆ ವಿಚಾರಣೆ ನಡೆಸತಕ್ಕದ್ದಲ್ಲ.

(2) ದಂಡ ಪ್ರಕ್ರಿಯಾ ಸಂಹಿತೆ, 1973 (1974 ರ 2) ರಲ್ಲಿ ಏನೇ ಇದ್ದರೂ, ಫಿರ್ಯಾದು ಸಲ್ಲಿಸುವ ಆಯೋಗದ ಅಧಿಕಾರಿಯ ವೈಯಕ್ತಿಕ ಹಾಜರಾತಿ ಅಗತ್ಯವಿಲ್ಲವೆಂದು ನ್ಯಾಯಾಲಯಕ್ಕೆ ಕಂಡುಬಂದರೆ ಅದನ್ನು ಹಾಗೆ ಮನ್ನಾ ಮಾಡಬಹುದು.

**47. ದಂಡನೆಗಳು ಮತ್ತು ವ್ಯವಹರಣೆಗಳು ಇತರ ಕ್ರಮಗಳಿಗೆ ಪ್ರತಿಕೂಲವಾಗತಕ್ಕದ್ದಲ್ಲ.-** ಈ ಅಧಿನಿಯಮದ ಅಡಿಯಲ್ಲಿ ಅಥವಾ ಉಪಬಂಧಗಳನ್ನು ಆಯೋಗದಿಂದ ಹೊರಡಿಸಲಾದ ಆದೇಶಗಳನ್ನು ಉಲ್ಲಂಘಿಸುವ ವ್ಯಕ್ತಿಯ ವಿರುದ್ಧ ಈ ಅಧಿನಿಯಮದ ಮೇರೆಗಿನ ವ್ಯವಹರಣೆಗಳು ಮತ್ತು ಕ್ರಮಗಳು ಇತರ ಅಧಿನಿಯಮಗಳ ಅಡಿಯಲ್ಲಿ ವಿಶೇಷವಾಗಿ 1910ರ ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ ಮತ್ತು 1948ರ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮದ ಅಡಿಯಲ್ಲಿ ಮತ್ತು ಅವು ಸೇರಿದಂತೆ ಕೈಗೊಂಡ ಕ್ರಮಗಳಿಗೆ ಹೆಚ್ಚಿಗೆಯಾಗಿರುತ್ತವೆ ಮತ್ತು ಅವುಗಳಿಗೆ ಪ್ರತಿಕೂಲವಾಗಿರುವುದಿಲ್ಲ.

## ಭಾಗ XIII

### ಸಂಕೀರ್ಣ

**48. ಶುಲ್ಕಗಳು, ದ0ಡಗಳು ಮತ್ತು ಚಾರ್ಜುಗಳ ವಸೂಲಿ.-** ಆಯೋಗವು [1][ಕರ್ನಾಟಕ ವಿದ್ಯುಚ್ಛಕ್ತಿ ರವಾನೆ ನಿಗಮ (ಬಾಕಿಗಳ) ಅಧಿನಿಯಮ, 1976ರ][1] ಉಪಬ0ಧಗಳಿಗೆ ಅನುಸಾರವಾಗಿ ಲೈಸೆನ್ಸ್, ಶುಲ್ಕಗಳು ಅಥವಾ ದ0ಡಗಳು ಮತ್ತು ಚಾರ್ಜುಗಳ ರೂಪದಲ್ಲಿ ಈ ಅಧಿನಿಯಮದ ಮೇರೆಗೆ ಅದಕ್ಕೆ ಬಾಕಿ ಇರುವ ಎಲ್ಲಾ ಮೊಬಲಗನ್ನು ಅ0ಥ ಯಾವುದೇ ಮೊಬಲಗು ಆ ಅಧಿನಿಯಮದಲ್ಲಿ ಪರಿಭಾಷಿಸಿರುವ0ತೆ ಸಾರ್ವಜನಿಕ ಬೇಡಿಕೆಯಾಗಿದ್ದರೆ ಹೇಗೋ ಹಾಗೆ ವಸೂಲಿ ಮಾಡಲು ಅರ್ಹವಾಗಿರತಕ್ಕದ್ದು ಮತ್ತು ಆ ಮೊಬಲಗನ್ನು ಸ0ಬ0ಧಪಟ್ಟ ವ್ಯಕ್ತಿ ಅಥವಾ ಪ್ರಾಧಿಕಾರಕ್ಕೆ ವಹಿಸಿಕೊಡತಕ್ಕದ್ದು.

1. 2001 ರ ಅಧಿನಿಯಮ ಸಂಖ್ಯೆ 26ರ ಮೂಲಕ ದಿನಾಂಕ 10-11-2001 ರಿಂದ ಪ್ರತಿಯೋಜಿಸಲಾಗಿದೆ.

**49. ದಂಡ ಮತ್ತು ಚಾರ್ಜುಗಳ ವಿನಿಯೋಗ.-** ಈ ಅಧಿನಿಯಮದ ಮೇರೆಗೆ ದಂಡ ಮತ್ತು ಚಾರ್ಜುಗಳನ್ನು ವಿಧಿಸುವ ಆಯೋಗ ಅಥವಾ ನ್ಯಾಯಾಲಯವು, ಅದರ ಪೂರ್ತಾ ಅಥವಾ ಯಾವುದೇ ಭಾಗವನ್ನು, ವ್ಯವಹರಣೆಗಳ ವೆಚ್ಚಗಳ ಸಂದಾಯವಾಗಿ ಅಥವಾ ಅವುಗಳ ಸಂದಾಯದ ಬಗ್ಗೆ ವಿನಿಯೋಗಿಸತಕ್ಕದ್ದೆಂದು ನಿರ್ದೇಶಿಸಬಹುದು.

**50. ದಂಡಗಳು ಮತ್ತು ಜುಲ್ಮಾನೆಗಳ ಭಾಗವನ್ನು ವರ್ಗಾಯಿಸತಕ್ಕದ್ದಲ್ಲ..-** ಈ ಅಧಿನಿಯಮದ ಮೇರೆಗೆ ಯಾವೊಬ್ಬ ಲೈಸೆನ್ಸ್‌ದಾರ, ಉತ್ಪಾದನಾ ಕಂಪನಿಗಳು ಮತ್ತು ಇತರರ ಮೇಲೆ ದಂಡಗಳು ಅಥವಾ ಚಾರ್ಜುಗಳನ್ನು ವಿಧಿಸಿದಾಗ ಅವುಗಳನ್ನು ಅವರು ನೇರವಾಗಿ ಅಥವಾ ಪರೋಕ್ಷವಾಗಿ ಸಂದಾಯ ಮಾಡಬೇಕಾದ ದರ ಅಥವಾ ಚಾರ್ಜುಗಳ ರೂಪದಲ್ಲಿ ಗ್ರಾಹಕರಿಗೆ ವರ್ಗಾಯಿಸತಕ್ಕದ್ದಲ್ಲ.

**51. ಸದ್ಭಾವನೆಯಿಂದ ಕೈಗೊಳ್ಳಲಾದ ಕ್ರಮಕ್ಕೆ ರಕ್ಷಣೆ.-** ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ಮಾಡಲಾದ ಯಾವುದೇ ನಿಯಮ ಅಥವಾ ವಿನಿಯಮ ಅಥವಾ ಆದೇಶದ ಅಡಿಯಲ್ಲಿ ಸದ್ಭಾವನೆಯಿಂದ ಮಾಡಲಾದ ಅಥವಾ ಮಾಡಲು ಉದ್ದೇಶಿಸಿರುವ ಯಾವುದೇ ವಿಷಯದ ಸಂಬಂಧದಲ್ಲಿ ಆಯೋಗ ಅಥವಾ ಅಧ್ಯಕ್ಷ ಅಥವಾ ಆಯೋಗದ ಇತರ ಸದಸ್ಯರು ಅಥವಾ ಆಯೋಗದ ಸಿಬ್ಬಂದಿ ಅಥವಾ ಪ್ರತಿನಿಧಿಗಳ ವಿರುದ್ಧ ಯಾವುದೇ ಮೊಕದ್ದಮೆ ಅಥವಾ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**52. ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ ಮತ್ತು ಗ್ರಾಹಕರ ಕ್ರಮಗಳ ರಕ್ಷಣೆ.-** (1) ಈ ಅಧಿನಿಯಮದ ಅಡಿಯಲ್ಲಿ ಅಥವಾ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳು ಮತ್ತು ವಿನಿಯಮಗಳ ಅಡಿಯಲ್ಲಿ ಮಾಡಲಾದ ಆದೇಶ ಅಥವಾ ವ್ಯವಹರಣೆಯ ಮೇಲೆ ಅಧಿನಿಯಮದಲ್ಲಿ ಉಪಬಂಧಿಸಿರುವುದರ ಹೊರತಾಗಿ ಅಪೀಲು ಸಲ್ಲಿಸತಕ್ಕದ್ದಲ್ಲ ಮತ್ತು ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996ರ ಅಡಿಯಲ್ಲಿನವುಗಳನ್ನು ಒಳಗೊಂಡಂತೆ ಯಾವುದೇ ಸಿವಿಲ್ ನ್ಯಾಯಾಲಯಕ್ಕೆ ಈ ಅಧಿನಿಯಮದ ಮೇರೆಗೆ ಆಯೋಗ ಅಥವಾ ಅಪೀಲು ಪ್ರಾಧಿಕಾರವು ಅಧಿಕಾರವ್ಯಾಪ್ತಿ ಹೊಂದಿರುವ ಯಾವುವೇ ವಿಷಯಗಳ ಸಂಬಂಧದಲ್ಲಿ ಅಧಿಕಾರ ವ್ಯಾಪ್ತಿ ಇರತಕ್ಕದ್ದಲ್ಲ.

(2) ಈ ಅಧಿನಿಯಮದಲ್ಲಿ ಏನೇ ಇದ್ದರೂ ಅದು, ಗ್ರಾಹಕರ ರಕ್ಷಣಾ ಅಧಿನಿಯಮ, 1986ನ್ನು ಒಳಗೊಂಡಂತೆ ಇತರ ಕಾನೂನುಗಳ ಅಡಿಯಲ್ಲಿ ಗ್ರಾಹಕರ ಹಕ್ಕುಗಳು ಮತ್ತು ವಿಶೇಷಾಧಿಕಾರಗಳಿಗೆ ಯಾವುದೇ ರೀತಿಯಲ್ಲಿ ಪ್ರತಿಕೂಲವಾಗತಕ್ಕದ್ದಲ್ಲ ಅಥವಾ ಬಾಧಕವಾಗತಕ್ಕದ್ದಲ್ಲ.

**53. ತೊಂದರೆಗಳನ್ನು ನಿವಾರಿಸುವ ಅಧಿಕಾರ.-** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುವೇ ತೊಡಕುಗಳು ಉಂಟಾದಲ್ಲಿ ಸರ್ಕಾರವು ಈ ಅಧಿನಿಯಮದ ಉಪಬಂಧಗಳಿಗೆ ವಿರೋಧವಾಗಿರದಂಥ ಆದೇಶದ ಮೂಲಕ ತೊಂದರೆಗಳನ್ನು ನಿವಾರಿಸತಕ್ಕದ್ದು :

ಪರಂತು, ಅಂಥ ಯಾವುದೇ ಆದೇಶವನ್ನು ಗೊತ್ತುಪಡಿಸಿದ ದಿನದಿಂದ ಎರಡು ವರ್ಷಗಳ ಅವಧಿಯ ಮುಕ್ತಾಯದ ತರುವಾಯ ಮಾಡತಕ್ಕದ್ದಲ್ಲ.

**54. ಆಯೋಗದ ಮುಂದಿರುವ ವ್ಯವಹರಣೆಗಳು ನ್ಯಾಯಿಕ ವ್ಯವಹರಣೆಗಳಾಗಿರತಕ್ಕದ್ದು.-** ಆಯೋಗದ ಮುಂದಿರುವ ಎಲ್ಲ ವ್ಯವಹರಣೆಗಳನ್ನು ಭಾರತೀಯ ದಂಡ ಸಂಹಿತೆಯ (1860ರ 45) 193, 219 ಮತ್ತು 228ನೇ ಪ್ರಕರಣಗಳ ಅರ್ಥವ್ಯಾಪ್ತಿಯಲ್ಲಿ, ನ್ಯಾಯಿಕ ವ್ಯವಹರಣೆಗಳೆಂದು ಪರಿಗಣಿಸತಕ್ಕದ್ದು ಮತ್ತು 1973ರ ದಂಡ ಪ್ರಕ್ರಿಯಾ ಸಂಹಿತೆಯ (1974ರ ಅಧಿನಿಯಮ 2) ಪ್ರಕರಣ 195 ಮತ್ತು ಅಧ್ಯಾಯ XXVI ರ ಉದ್ದೇಶಗಳಿಗಾಗಿ ಆಯೋಗವನ್ನು ಸಿವಿಲ್ ನ್ಯಾಯಾಲಯವೆಂದು ಪರಿಗಣಿಸತಕ್ಕದ್ದು.

**55. ಆಯೋಗದ ಸದಸ್ಯರು ಮತ್ತು ಸಿಬ್ಬಂದಿಯವರು ಲೋಕ ನೌಕರರಾಗಿರತಕ್ಕದ್ದು.-** ಈ ಅಧಿನಿಯಮದ ಗುರಿ ಹಾಗೂ ಉದ್ದೇಶಗಳನ್ನು ಈಡೇರಿಸಲು ನೇಮಕ ಮಾಡಲಾದ ಅಧ್ಯಕ್ಷರು, ಇತರ ಸದಸ್ಯರು ಮತ್ತು ಅಧಿಕಾರಿಗಳನ್ನು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥದಲ್ಲಿ, ಲೋಕ ನೌಕರರೆಂದು ಪರಿಗಣಿಸತಕ್ಕದ್ದು.

**56. ವಿನಿಯಮಗಳನ್ನು ರಚಿಸಲು ಅಧಿಕಾರ.-** (1) ಆಯೋಗವು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ಸರಿಯಾಗಿ ನಿರ್ವಹಿಸಲು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ವಿನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಅಧಿನಿಯಮದಲ್ಲಿ ನಿರ್ದಿಷ್ಟವಾಗಿ ಉಪಬಂಧಿಸಿದ ಹಿಂದೆ ಹೇಳಿದ ಉಪಬಂಧಗಳ ಮತ್ತು ವಿಷಯಗಳ ಸಾಮಾನ್ಯತೆಗೆ ಬಾಧಕವಾಗದಂತೆ, ಅಂಥ ವಿನಿಯಮಗಳು ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ: –

(ಎ) ಮಧ್ಯಸ್ಥಿಕೆ ಮತ್ತು ಕಾರ್ಯವಿಧಾನ, ಆಯೋಗದ ಸಭೆಯನ್ನು ಕರೆಯುವುದು ಮತ್ತು ನಡೆಸುವುದು, ಅಂಥ ಸಭೆಗಳು ನಡೆಯತಕ್ಕ ಸ್ಥಳ ಮತ್ತು ವೇಳೆ, ಅದರ ವ್ಯವಹಾರ ಪ್ರಕ್ರಿಯೆಯೂ ಸೇರಿದಂತೆ ಆಯೋಗದ ಆಡಳಿತಾತ್ಮಕ, ಅರೆನ್ಯಾಯಿಕ ಮತ್ತು ನ್ಯಾಯಿಕ ಅಧಿಕಾರಗಳನ್ನು ಚಲಾಯಿಸುವುದೂ ಸೇರಿದಂತೆ ಆಯೋಗದ ವ್ಯವಹಾರಗಳ ನಿರ್ವಹಣೆ ;

(ಬಿ) ಆಯೋಗದ ಕಾರ್ಯದರ್ಶಿ, ಅಧಿಕಾರಿಗಳು ಮತ್ತು ನೌಕರರ ಕರ್ತವ್ಯಗಳು, ಅವರ ವೇತನಗಳು, ಭತ್ಯೆಗಳು ಮತ್ತು ಷರತ್ತುಗಳು;

(ಸಿ) ವಿದ್ಯುಚ್ಛಕ್ತಿ ಉತ್ಪಾದನೆ, ಖರೀದಿ, ರವಾನೆ, ವಿತರಣೆ ಮತ್ತು ಸರಬರಾಜಿನಲ್ಲಿ ತೊಡಗಿದ ಲೈಸೆನ್ಸುದಾರರು ಮತ್ತು ಇತರರಿಗೆ ಗೊತ್ತುಪಡಿಸಬೇಕಾದ ಪ್ರಕಾರ್ಯಗಳನ್ನು ನಿರ್ಣಯಿಸುವುದು, ಅಂಥ ಕಾರ್ಯಗಳನ್ನು ನಿರ್ವಹಿಸತಕ್ಕ ರೀತಿ ಮತ್ತು ವಿದ್ಯುತ್ ವ್ಯವಸ್ಥೆ ಮತ್ತು ವಿದ್ಯುತ್ ಸರಬರಾಜು ಲೈನ್‌ಗಳ ಸಂಬಂಧದಲ್ಲಿ ಅಳವಡಿಸಿಕೊಳ್ಳಬೇಕಾದ ಕಾರ್ಯವಿಧಾನ ಮತ್ತು ಸಂಹಿತೆ ;

(ಡಿ) ವಿದ್ಯುಚ್ಛಕ್ತಿ ರವಾನೆ ಮತ್ತು ಸರಬರಾಜಿಗೆ ಲೈಸೆನ್ಸ್ ನೀಡುವುದಕ್ಕೆ ಸಂಬಂಧಿಸಿದ ಕಾರ್ಯ ವಿಧಾನ, ಲೈಸೆನ್ಸನ್ನು ಮಂಜೂರು ಮಾಡುವುದಕ್ಕೆ ಸಂಬಂಧಪಟ್ಟ ಷರತ್ತುಗಳು ಮತ್ತು ಲೈಸೆನ್ಸಿಗಾಗಿ ಅರ್ಜಿ ಸಲ್ಲಿಸುವ ವ್ಯಕ್ತಿಗಳಿಂದ ದೊರೆಯುವಂತೆ ಮಾಡಬೇಕಾದ ವಿವರಗಳು, ವಿವರಣೆಗಳು ಮತ್ತು ದಸ್ತಾವೇಜುಗಳು, ಲೈಸೆನ್ಸ್ ಮಂಜೂರು ಮಾಡುವುದಕ್ಕೆ ಅಗತ್ಯವಾದ ಗುಣಮಟ್ಟ ಮತ್ತು ಸಾಮಾನ್ಯ ಷರತ್ತುಗಳು, ಲೈಸೆನ್ಸ್ ನೀಡಿಕೆಯಿಂದ ವಿನಾಯತಿ, ಅದರ ರದ್ದಿಯಾತಿ ಮತ್ತು ತಿದ್ದುಪಡಿ ಮತ್ತು ಪರಿಣಾಮ ಮತ್ತು ಮೇಲಿನದಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳು ;

(ಇ) ಲೈಸೆನ್ಸ್‌ದಾರನ ಕರ್ತವ್ಯಗಳು ಅಧಿಕಾರಗಳು, ಹಕ್ಕುಗಳು ಮತ್ತು ಹೊಣೆಗಾರಿಕೆಗಳು;

(ಎಫ್) ಒದಗಿಸಬೇಕಾದ ವಿವರಗಳು, ವಿದ್ಯುಚ್ಛಕ್ತಿ ಉತ್ಪಾದನೆ, ರವಾನೆ, ವಿತರಣೆ, ಸರಬರಾಜು ಮತ್ತು ಬಳಕೆಯಲ್ಲಿ ತೊಡಗಿರುವ ವ್ಯಕ್ತಿಗಳಿಂದ ಅಥವಾ ಅವರ ಬಗ್ಗೆ ಮಾಹಿತಿ, ವಿವರಗಳು, ವಿವರಣೆಗಳು, ದಸ್ತಾವೇಜುಗಳು, ಲೆಕ್ಕಪತ್ರಗಳು, ಪುಸ್ತಕಗಳು ಇತ್ಯಾದಿಗಳ ಸಂಗ್ರಹಣೆ, ಅವುಗಳನ್ನು ಒದಗಿಸಬೇಕಾದ ನಮೂನೆ ಹಾಗೂ ವಿಧಾನ ಮತ್ತು ಅವುಗಳನ್ನು ಹಾಜರುಪಡಿಸುವುದನ್ನು ಒತ್ತಾಯಿಸುವುದು ಮತ್ತು ಬಲವಂತಪಡಿಸುವುದು ;

(ಜಿ) ಲೈಸೆನ್ಸ್‌ದಾರನ ಆದಾಯ, ದರ (ಟ್ಯಾರಿಫ್) ನಿಗದಿಪಡಿಸುವುದು, ಇವುಗಳನ್ನು ನಿರ್ಣಯಿಸುವ ವಿಧಾನ ಮತ್ತು ರೀತಿ ಅಂತಹ ನಿರ್ಣಯ ಮತ್ತು ನಿಗದಿಪಡಿಸುವಿಕೆಗೆ ಸಂಬಂಧಿಸಿದಂತೆ ಪರಿಗಣಿಸಬೇಕಾದ ವಿಷಯಗಳು ;

(ಹೆಚ್) ಆಯೋಗ ಸಲಹಾ ಸಮಿತಿಯ ರಚನೆ ;

(ಐ) ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆ, ರವಾನೆ, ವಿತರಣೆ ಮತ್ತು ಸರಬರಾಜಿನಲ್ಲಿ ತೊಡಗಿದ ವ್ಯಕ್ತಿಗಳ ಸಾಧನೆಯ ಗುಣಮಟ್ಟವನ್ನು ನಿರ್ಣಯಿಸುವುದು ;

(ಜೆ) ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿದರೆ ವಿಧಿಸಬೇಕಾದ ದಂಡ ಮತ್ತು ದಂಡನೆಗಳ ಮೊತ್ತ, ಮತ್ತು ದಂಡ ಹಾಗೂ ದಂಡನೆಗಳನ್ನು ವಿಧಿಸುವ ವಿಧಾನ ಮತ್ತು ರೀತಿ ಹಾಗೂ ಅವುಗಳ ಸಂಗ್ರಹಣೆ ;

(ಕೆ) ಈ ಅಧಿನಿಯಮದಲ್ಲಿ ಉಪಬಂಧಿಸಲಾಗಿರುವಷ್ಟುಮಟ್ಟಿಗೆ ರಾಜ್ಯದಲ್ಲಿನ ವಿದ್ಯುತ್ ಸರಬರಾಜು ಕೈಗಾರಿಕೆಗಾಗಿ ಅಥವಾ ಅದರ ಸಂಬಂಧದಲ್ಲಿ ಬಳಸಲಾಗುವ ಆಸ್ತಿಗಳು, ಸ್ವತ್ತುಗಳು, ಮತ್ತು ಆಸ್ತಿಗಳಲ್ಲಿನ ಹಿತಾಸಕ್ತಿಯನ್ನು ಕ್ರಮಬದ್ಧಗೊಳಿಸುವುದು ;

(ಎಲ್) ವಿನಿಯಮಗಳ ಮೂಲಕ ಅಗತ್ಯಪಡಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

**57. ನಿಯಮ ರಚನಾಧಿಕಾರ.-** (1) ರಾಜ್ಯ ಸರ್ಕಾರವು, ಪೂರ್ವ ಪ್ರಕಟಣೆಯ ತರುವಾಯ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ನಿರ್ದಿಷ್ಟವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಅಂದರೆ:-

(ಎ) ಈ ಅಧಿನಿಯಮದ ಮೇರೆಗೆ ಕಾರ್ಯನಿರ್ವಹಿಸುವ ಸಲುವಾಗಿ ಆಯ್ಕೆ ಸಮಿತಿಯು ಅನುಸರಿಸಬೇಕಾದ ಕಾರ್ಯವಿಧಾನ ;

(ಬಿ) ರಾಜ್ಯದಲ್ಲಿ ವರ್ಗಾವಣೆ ಯೋಜನೆಯನ್ನು ಸಿದ್ಧಪಡಿಸುವುದು ಮತ್ತು ಕಾರ್ಯಗತಗೊಳಿಸುವುದು, ಕೆಪಿಟಿಸಿಗೆ, ಲೈಸೆನ್ಸುದಾರರಿಗೆ ಮತ್ತು ಇತರರಿಗೆ ಸ್ವತ್ತುಗಳು, ಹೊಣೆಗಾರಿಕೆಗಳು ಮತ್ತು ಸಿಬ್ಬಂದಿಯನ್ನು ವರ್ಗಾಯಿಸುವುದು; ಹಾಗೂ

(ಸಿ) ರಾಜ್ಯದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ, ರವಾನೆ, ವಿತರಣೆ ಮತ್ತು ಸರಬರಾಜು ಕಾರ್ಯದಲ್ಲಿ ತೊಡಗಿದ ವ್ಯಕ್ತಿಗಳಿಗೆ ಹಣಕಾಸು ನೆರವು ನೀಡುವುದು, ನಿಧಿಗಳನ್ನು ಸಂಗ್ರಹಿಸುವುದು, ಖಾತರಿ ನೀಡುವುದು, ಇತ್ಯಾದಿ ;

(ಡಿ) ನಿಯಮಗಳ ಮೂಲಕ ಅಗತ್ಯಪಡಿಸಬೇಕಾದ ಮತ್ತು ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನದ ಅಥವಾ ನಿಕಟ ತರುವಾಯದ ಅಧಿವೇಶನಗಳ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಹಾಗೆ ಮಾರ್ಪಾಟು ಹೊಂದಿದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ

ನಿಯಮದ ಮೇರೆಗೆ ತತ್ಪೂರ್ವದಲ್ಲಿ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಪ್ರತಿಕೂಲ ಪರಿಣಾಮವನ್ನುಂಟು ಮಾಡತಕ್ಕದ್ದಲ್ಲ.

## ಭಾಗ XIV

## ಅಸ್ತಿತ್ವದಲ್ಲಿರುವ ಕೇಂದ್ರ ಶಾಸನಗಳ ಮೇಲೆ ಪರಿಣಾಮ

**58. ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910 ಮತ್ತು ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ ಮೇಲೆ ಈ ಅಧಿನಿಯಮದ ಪರಿಣಾಮ.**- (1) ಈ ಅಧಿನಿಯಮದ 59ನೆಯ ಪ್ರಕರಣದಲ್ಲಿ ಉಪಬಂಧಿಸಲಾದುದನ್ನು ಹೊರತುಪಡಿಸಿ, ಈ ಅಧಿನಿಯಮದ ಉಪಬಂಧಗಳು, ಅವುಗಳು ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910ರ ಅಥವಾ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ ಉಪಬಂಧಗಳಿಗೆ ಅಸಂಗತ ಅಥವಾ ಪ್ರತಿಕೂಲವಾಗಿದ್ದರೂ ಸಹ, (3)ನೇ ಉಪ-ಪ್ರಕರಣದಲ್ಲಿ ಉಪಬಂಧಿಸಲಾದ ರೀತಿಯಲ್ಲಿ ಹಾಗೂ ಅಷ್ಟು ಮಟ್ಟಿಗೆ ಅವು ಪರಿಣಾಮಹೊಂದಿರತಕ್ಕದ್ದು.

(2) (1)ನೆಯ ಉಪ ಪ್ರಕರಣಕ್ಕೊಳಪಟ್ಟು ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910ರ ಮತ್ತು ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರಲ್ಲಿರುವ ಯಾವ ಎಲ್ಲ ವಿಷಯಗಳ ಸಂಬಂಧದಲ್ಲಿ ಮಂಡಲಿ ಸಂಬಂಧ ಹೊಂದಿತ್ತೋ ಅಥವಾ ವ್ಯವಹರಿಸುತ್ತಿತ್ತೋ, ಅವುಗಳಿಗೆ ಸಂಬಂಧಿಸಿದಂತೆ ಆಯೋಗದ ರಚನೆಯಾದ ಮೇಲೆ, ಮಂಡಲಿಯ ಪ್ರಕಾರ್ಯಗಳನ್ನು ಆಯೋಗವು ಮತ್ತು ಕೆಪಿಟಿಸಿ.ಯು ಕಾರ್ಯಗತಗೊಳಿಸತಕ್ಕದ್ದು:

ಪರಂತು,-

(ಎ) ರಾಜ್ಯ ಸರ್ಕಾರವು, ಈ ಅಧಿನಿಯಮದ ಎಲ್ಲ ಕಾರ್ಯನೀತಿ ನಿರ್ದೇಶನಗಳನ್ನು ಹೊರಡಿಸುವ ಅಧಿಕಾರ ಹೊಂದಿರತಕ್ಕದ್ದು ಮತ್ತು 12ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದಂತೆ ಒಟ್ಟಾರೆ ಯೋಜನೆ ಹಾಗೂ ಸಮನ್ವಯತೆಯ ಕಾರ್ಯಗಳನ್ನು ಕೈಗೊಳ್ಳತಕ್ಕದ್ದು. ಇದನ್ನು ಸಾಧಿಸುವಷ್ಟುಮಟ್ಟಿಗೆ ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910 ಹಾಗೂ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948 ಅಥವಾ ಅದರ ಮೇರೆಗೆ ಮಾಡಿದ ನಿಯಮಗಳ ಉಪಬಂಧಗಳಿಗನುಸಾರವಾಗಿ ಕರ್ನಾಟಕ ರಾಜ್ಯ ವಿದ್ಯುಚ್ಛಕ್ತಿ ಮಂಡಲಿಯಲ್ಲಿರುವ ಅಧಿಕಾರಗಳು ಮತ್ತು ಕಾರ್ಯಗಳು ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು ಮತ್ತು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದೊಂದಿಗೆ ಹಾಗೂ ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರದೊಂದಿಗೆ ಸಮನ್ವಯತೆ ಸಾಧಿಸತಕ್ಕದ್ದು ಮತ್ತು ವ್ಯವಹಾರ ನಡೆಸತಕ್ಕದ್ದು;

(ಬಿ) ಸಂದರ್ಭಾನುಸಾರ, ಸಾಮಾನ್ಯ ಅಥವಾ ವಿಶೇಷ ಆದೇಶಕ್ಕೆ ಸಂಬಂಧಿಸಿದಂತೆ ಅಥವಾ ನಿಬಂಧನೆಗಳು ಅಥವಾ ಲೈಸೆನ್ಸಿನಲ್ಲಿರುವ ಅಂಥ ವಿಷಯಗಳ ಸಂಬಂಧದಲ್ಲಿ ಆಯೋಗವು ಹೆಸರಿಸಬಹುದಾದಂತೆ ಉತ್ಪಾದನಾ ಕಂಪನಿ ಅಥವಾ ಕಂಪನಿಗಳು, ಲೈಸೆನ್ಸುದಾರರು ಅಥವಾ ಇತರ ನಿಗಮಿತ ನಿಕಾಯವು ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910 ಮತ್ತು ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ ಮೇರೆಗೆ ಆಯೋಗವು ನಿರ್ದೇಶಿಸುವಷ್ಟು ಮಟ್ಟಿಗೆ ಅಥವಾ ಲೈಸನ್ಸುಗಳಲ್ಲಿ ನಿರ್ದಿಷ್ಟಪಡಿಸಿರುವ ಮಟ್ಟಿಗೆ ಮಂಡಲಿಯ ಕಾರ್ಯಗಳನ್ನು ಕಾರ್ಯಗತಗೊಳಿಸತಕ್ಕದ್ದು.

(3) (1) ಮತ್ತು (2)ನೆಯ ಉಪಪ್ರಕರಣಗಳಿಗೊಳಪಟ್ಟು, ಆಯೋಗದ ಸ್ಥಾಪನೆಯಾದ ಮೇಲೆ, ಬಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910 ಹಾಗೂ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ ಉಪಬಂಧಗಳನ್ನು ರಾಜ್ಯಕ್ಕೆ ಸಂಬಂಧಿಸಿರುವಷ್ಟರ ಮಟ್ಟಿಗೆ, ಈ ಮುಂದಿನ ಮಾರ್ಪಾಟುಗಳು ಮತ್ತು ಕಾಯ್ದಿರಿಸುವಿಕೆಗಳಿಗೊಳಪಟ್ಟು ಓದಿಕೊಳ್ಳತಕ್ಕದ್ದು,-

(ಎ) ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910ರಲ್ಲಿ ರಾಜ್ಯ ವಿದ್ಯುಚ್ಛಕ್ತಿ ಮಂಡಲಿಗೆ ಮಾಡಲಾದ ಎಲ್ಲ ಉಲ್ಲೇಖಗಳನ್ನು ರಾಜ್ಯಕ್ಕೆ ಸಂಬಂಧಿಸಿರುವಷ್ಟು ಮಟ್ಟಿಗೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಅಥವಾ ಕೆಪಿಟಿಸಿ ಗೆ ಅಥವಾ ಇತರ ಲೈಸನ್ಸುದಾರರಿಗೆ ಮಾಡಿರುವಂತೆ ಅಥವಾ ಸಾಮಾನ್ಯ ಕಾರ್ಯನೀತಿ ವಿಷಯಗಳಿಗೆ ಸಂಬಂಧಿಸಿದಾಗಲೆಲ್ಲ ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ರಾಜ್ಯ ಸರ್ಕಾರಕ್ಕೆ ಮಾಡಿರುವಂತೆ ಓದಿಕೊಳ್ಳತಕ್ಕದ್ದು;

(ಬಿ) ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910ರ ಪ್ರಕರಣ 3 ರಿಂದ 11, 28, 36(2), 49-ಎ, 50 ಮತ್ತು 51 ರಲ್ಲಿ ಉಪಬಂಧಿಸಲಾದ ವಿಷಯಗಳ ಸಂಬಂಧದಲ್ಲಿ, ಈ ಅಧಿನಿಯಮದಲ್ಲಿ ನಿರ್ದಿಷ್ಟ ಉಪಬಂಧಗಳನ್ನು ಮಾಡಲಾಗಿರುವಷ್ಟು ಮಟ್ಟಿಗೆ ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910ರ ಉಪಬಂಧಗಳು ರಾಜ್ಯಕ್ಕೆ ಅನ್ವಯವಾಗತಕ್ಕದ್ದಲ್ಲ;

(ಸಿ) ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910ರ ಇತರ ಎಲ್ಲ ಪ್ರಕರಣಗಳ ಉಪಬಂಧಗಳು ಈ ಮುಂದಿನವುಗಳ ಹೊರತು, ಅನ್ವಯವಾಗತಕ್ಕದ್ದು,-

(i) "ಲೈಸೆನ್ಸ್", "ಲೈಸನ್ಸುದಾರ" ಮತ್ತು "ಲೈಸೆನ್ಸು ಹೊಂದಿರುವ" ಎಂಬ ಪದಗಳು, ಈ ಅಧಿನಿಯಮದ ಅಡಿಯಲ್ಲಿ ಪರಿಭಾಷಿಸಲಾದಂತೆ ಅರ್ಥವನ್ನು ಹೊಂದಿರತಕ್ಕದ್ದು ಮತ್ತು ಲೈಸನ್ಸುಗಳು, ಅವುಗಳನ್ನು ಈ ಅಧಿನಿಯಮದ ಅಡಿಯಲ್ಲಿ ನೀಡಲಾಗಿರುವಂತೆ ಅರ್ಥೈಸತಕ್ಕದ್ದು;

(ii) ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910ರ ಉಪಬಂಧಗಳಲ್ಲಿ ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910ರ ಹಾಗೂ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ ಪ್ರಕರಣಗಳಿಗೆ ಮಾಡಿದ ಉಲ್ಲೇಖವನ್ನು ಸದರಿ ಅಧಿನಿಯಮದ ಮೂಲಕ ಮಾರ್ಪಾಟುಗೊಳಿಸಿರುವಷ್ಟರಮಟ್ಟಿಗೆ ಈ ಅಧಿನಿಯಮದ ಸಂವಾದಿ ಉಪಬಂಧಗಳಿಗೆ ಮಾಡಲಾದ ಉಲ್ಲೇಖವೆಂದು ಪರಿಗಣಿಸತಕ್ಕದ್ದು ;

(iii) ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರದಿಂದ ಹೊರತುಪಡಿಸಿ ಈ ಉಪಬಂಧಗಳಲ್ಲಿ ಮಧ್ಯಸ್ಥಿಕೆಗೆ ಸಂಬಂಧಿಸಿದಂತೆ ಮಾಡಿದ ಉಲ್ಲೇಖವನ್ನು, ಈ ಅಧಿನಿಯಮದ 39ನೆಯ ಪ್ರಕರಣದ ಮೇರೆಗಿನ ವ್ಯವಹರಣೆಗಳ ಸಂಬಂಧದಲ್ಲಿ ಮಾಡಿದ ಉಲ್ಲೇಖವೆಂದು ಪರಿಗಣಿಸತಕ್ಕದ್ದು ಹಾಗೂ ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910ರ ಮೇರೆಗೆ ನಿರ್ದಿಷ್ಟಪಡಿಸಿದ ಮಧ್ಯಸ್ಥಿಕೆ ಕಾರ್ಯವಿಧಾನವು ಅನ್ವಯಿಸತಕ್ಕದ್ದಲ್ಲ ;

(ಡಿ) ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910ರ ಅನುಸೂಚಿಗಳನ್ನು, ಈ ಅಧಿನಿಯಮದ ಉಪಬಂಧಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟಪಡಿಸಿದ ಅನುಸೂಚಿಗಳಿಗೆ ಮಾತ್ರ ಅನ್ವಯಿಸತಕ್ಕದ್ದು, ಅನ್ಯಥಾ ಅನ್ವಯಿಸತಕ್ಕದ್ದಲ್ಲ.

(ಇ) ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರಲ್ಲಿ ರಾಜ್ಯ ವಿದ್ಯುಚ್ಛಕ್ತಿ ಮಂಡಲಿಗೆ ಸಂಬಂಧಿಸಿದಂತೆ ಮಾಡಿದ ಎಲ್ಲ ಉಲ್ಲೇಖಗಳನ್ನು ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿರುವಷ್ಟರ ಮಟ್ಟಿಗೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಅಥವಾ ಕೆಪಿಟಿಸಿಗೆ ಅಥವಾ ಇತರ ಲೈಸೆನ್ಸುದಾರರಿಗೆ ಮಾಡಿರುವಂತೆ ಅಥವಾ ಸಾಮಾನ್ಯ ಕಾರ್ಯನೀತಿ ವಿಷಯಗಳಿಗೆ ಸಂಬಂಧಿಸಿದ್ದರೆ ಈ ಅಧಿನಿಯಮದ ಉಪಬಂಧಗಳಿಗನುಗುಣವಾಗಿ ರಾಜ್ಯ ಸರ್ಕಾರಕ್ಕೆ ಮಾಡಿರುವಂತೆ ಓದಿಕೊಳ್ಳತಕ್ಕದ್ದು ;

(ಎಫ್) ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ ಪ್ರಕರಣ 5 ರಿಂದ 18, 19, 20, 23 ರಿಂದ 26, 27, 37, 40 ರಿಂದ 43, 44, 45, 46 ರಿಂದ 54, 56 ರಿಂದ 69, 72 ಮತ್ತು 75 ರಿಂದ 83ರ ವರೆಗೆ ಉಪಬಂಧಿಸಿದ

ವಿಷಯಗಳ ಸಂಬಂಧದಲ್ಲಿ, ಈ ಅಧಿನಿಯಮದಲ್ಲಿ ನಿರ್ದಿಷ್ಟ ಉಪಬಂಧಗಳನ್ನು ಮಾಡಲಾಗಿರುವಷ್ಟುಮಟ್ಟಿಗೆ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ ಉಪಬಂಧಗಳು ರಾಜ್ಯದಲ್ಲಿ ಅನ್ವಯವಾಗತಕ್ಕದ್ದಲ್ಲ ;

(ಜಿ) ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ ಎಲ್ಲ ಇತರ ಪ್ರಕರಣಗಳ ಉಪಬಂಧಗಳು, ಈ ಮುಂದಿನವುಗಳ ಹೊರತು, ಅನ್ವಯವಾಗತಕ್ಕದ್ದು ,-

(i) "ಲೈಸನ್ಸು", "ಲೈಸನ್ಸುದಾರ" ಮತ್ತು "ಲೈಸನ್ಸು ಹೊಂದಿರುವವ" ಎಂಬ ಪದಗಳು, ಈ ಅಧಿನಿಯಮದ ಅಡಿಯಲ್ಲಿ ಪರಿಭಾಷಿಸಲಾದಂತೆ ಅರ್ಥವನ್ನು ಹೊಂದಿರತಕ್ಕದ್ದು, ಮತ್ತು ಲೈಸನ್ಸುಗಳು, ಅವುಗಳನ್ನು ಈ ಅಧಿನಿಯಮದ ಅಡಿಯಲ್ಲಿ ನೀಡಲಾಗಿರುವಂತೆ ಅರ್ಥೈಸತಕ್ಕದ್ದು ;

(ii) ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ ಉಪಬಂಧಗಳಲ್ಲಿ ಭಾರತ ವಿದ್ಯುಚ್ಛಕ್ತಿ ಅಧಿನಿಯಮ, 1910 ಹಾಗೂ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ ಪ್ರಕರಣಗಳಿಗೆ ಮಾಡಿದ ಉಲ್ಲೇಖವನ್ನು ಸದರಿ ಅಧಿನಿಯಮದ ಮೂಲಕ ಮಾರ್ಪಾಟುಗೊಳಿಸಿರುವಷ್ಟರಮಟ್ಟಿಗೆ, ಈ ಅಧಿನಿಯಮದ ಸಂವಾದಿ ಉಪಬಂಧಗಳಿಗೆ ಮಾಡಲಾದ ಉಲ್ಲೇಖವೆಂದು ಪರಿಗಣಿಸತಕ್ಕದ್ದು ;

(iii) ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರದಿಂದ ಹೊರತುಪಡಿಸಿ ಈ ಉಪಬಂಧಗಳಲ್ಲಿ ಮಧ್ಯಸ್ಥಿಕೆಗೆ ಸಂಬಂಧಿಸಿದಂತೆ ಮಾಡಿದ ಉಲ್ಲೇಖವನ್ನು ಈ ಅಧಿನಿಯಮದ 39ನೆಯ ಪ್ರಕರಣದ ಮೇರೆಗಿನ ವ್ಯವಹರಣೆಗಳ ಸಂಬಂಧದಲ್ಲಿ ಮಾಡಿದ ಉಲ್ಲೇಖವೆಂದು ಪರಿಗಣಿಸತಕ್ಕದ್ದು, ಹಾಗೂ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ ಮೇರೆಗೆ ನಿರ್ದಿಷ್ಟಪಡಿಸಿದ ಮಧ್ಯಸ್ಥಿಕೆ ಕಾರ್ಯವಿಧಾನವು ಅನ್ವಯಿಸತಕ್ಕದ್ದಲ್ಲ.

(ಹೆಚ್) ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ 72 ಮತ್ತು 73ನೆಯ ಪ್ರಕರಣಗಳ ಉಪಬಂಧಗಳನ್ನು ಉತ್ಪಾದನಾ ಕಂಪನಿಗಳಿಗೆ ಸೀಮಿತಗೊಳಿಸಲಾಗಿದೆ ಮತ್ತು ಈ ಪ್ರಕರಣಗಳಲ್ಲಿ ರಾಜ್ಯ ವಿದ್ಯುಚ್ಛಕ್ತಿ ಮಂಡಲಿಗೆ ಸಂಬಂಧಿಸಿದಂತೆ ಮಾಡಿದ ಉಲ್ಲೇಖವನ್ನು ಬಿಟ್ಟುಬಿಡತಕ್ಕದ್ದು.

(ಐ) ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ ಅನುಸೂಚಿಗಳನ್ನು, ಈ ಅಧಿನಿಯಮದ ಉಪಬಂಧಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟಪಡಿಸಿದ ಅನುಸೂಚಿಗಳಿಗೆ ಮಾತ್ರ ಅನ್ವಯಿಸತಕ್ಕದ್ದು ಮತ್ತು ಅನ್ಯಥಾ ಅನ್ವಯಿಸತಕ್ಕದ್ದಲ್ಲ.

**59. ಉಳಿಸುವಿಕೆಗಳು.-** (1) ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಭಾರತ ವಿದ್ಯುಚ್ಛಕ್ತಿ ಅಧಿನಿಯಮ, 1910 ಅಥವಾ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948 ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳ ಮೇರೆಗೆ ರಾಜ್ಯ ವಿದ್ಯುಚ್ಛಕ್ತಿ ಮಂಡಲಿ ಹಾಗೂ ರಾಜ್ಯ ಸರ್ಕಾರವನ್ನು ಹೊರತುಪಡಿಸಿ, ಪ್ರಾದೇಶಿಕ ವಿದ್ಯುಚ್ಛಕ್ತಿ ಮಂಡಲಿ, ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ, ಕೇಂದ್ರ ಸರ್ಕಾರ ಮತ್ತು ಪ್ರಾಧಿಕಾರಗಳ ಅಧಿಕಾರಗಳು, ಹಕ್ಕುಗಳು ಮತ್ತು ಕಾರ್ಯಗಳು ಬಾಧಿತವಾಗದೆ ಉಳಿಯತಕ್ಕದ್ದು ಮತ್ತು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

(2) ಈ ಅಧಿನಿಯಮದಲ್ಲಿ ಇರುವುದು ಯಾವುದೂ ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ ಅಥವಾ ಅಂತರ ರಾಜ್ಯ ವಿದ್ಯುಚ್ಛಕ್ತಿ ರವಾನೆಗೆ ಸಂಬಂಧಿಸಿದಂತೆ ಭಾರತ ಸರ್ಕಾರದ ಒಡೆತನದಲ್ಲಿ ಅಥವಾ ನಿಯಂತ್ರಣದಲ್ಲಿರುವ ಇತರ ನಿಕಾಯಗಳು ಅಥವಾ ಲೈಸನ್ಸುದಾರರು ಅಥವಾ ಉತ್ಪಾದನಾ ಕಂಪನಿಗಳು ಅಥವಾ ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಉದ್ದಿಮೆಗೆ ಅನ್ವಯವಾಗತಕ್ಕದ್ದಲ್ಲ.

**60. ನಿರಸನ ಮತ್ತು ಉಳಿಸುವಿಕೆ.-** (1) ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧ್ಯಾದೇಶ, 1999ನ್ನು (1999ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 3) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಂಡಿದ್ದಾಗ್ಯೂ, ಸದರಿ ಅಧ್ಯಾದೇಶದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

**ಅನುಸೂಚಿ**

(8ನೆಯ ಪ್ರಕರಣದ (7)ನೆಯ ಉಪ ಪ್ರಕರಣ)

**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ**

**ಭಾಗ I**

**1. ವಾರ್ಷಿಕ ಹಣಕಾಸು ವಿವರಣಾ ಪತ್ರ.-** (1) ಆಯೋಗವು, ಪ್ರತಿ ವರ್ಷದ ಡಿಸೆಂಬರ್‌ನಲ್ಲಿ ಮುಂಬರುವ ಹಣಕಾಸು ವರ್ಷಕ್ಕಾಗಿ ತನ್ನ ಅಂದಾಜು ವೆಚ್ಚದ ವಿವರಣ ಪತ್ರವೊಂದನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(2) ಆಯೋಗವು, (1)ನೆಯ ಉಪ ಪ್ಯಾರಾದ ಮೇರೆಗೆ ವಿವರಣ ಪತ್ರದ ಸಂಬಂಧದಲ್ಲಿ ಅದನ್ನು ಸಲ್ಲಿಸಿದ ಒಂದು ವರ್ಷದೊಳಗಾಗಿ ಯಾವುದೇ ಸಮಯದಲ್ಲಿ ಪೂರಕ ವಿವರಣ ಪತ್ರವನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಬಹುದು ಮತ್ತು ಈ ಪ್ರಕರಣದ ಎಲ್ಲ ಉಪಬಂಧಗಳು, ಸದರಿ ಉಪ ಪ್ರಕರಣದ ಅಡಿಯ ವಿವರಣ ಪತ್ರಕ್ಕೆ ಅನ್ವಯವಾಗುವ ರೀತಿಯಲ್ಲಿಯೇ ಅಂಥ ವಿವರಣ ಪತ್ರಕ್ಕೂ ಅನ್ವಯವಾಗತಕ್ಕದ್ದು.

**II. ಲೆಕ್ಕ ಪತ್ರಗಳು ಮತ್ತು ಲೆಕ್ಕ ಪರಿಶೋಧನೆ.-** (1) ಆಯೋಗವು, ಸೂಕ್ತ ಆಂತರಿಕ ತಪಾಸಣಾ ವ್ಯವಸ್ಥೆಯೂ ಸೇರಿದಂತೆ ಅದಕ್ಕೆ ಸಂಬಂಧಪಟ್ಟಂತೆ ಸೂಕ್ತ ಲೆಕ್ಕ ಪತ್ರಗಳು ಮತ್ತು ಇತರ ದಾಖಲೆ ಪತ್ರಗಳನ್ನು ಇಡುವಂತೆ ಮಾಡತಕ್ಕದ್ದು ಮತ್ತು ಕರ್ನಾಟಕ ಮಹಾಲೇಖಾಪಾಲರೊಂದಿಗೆ ಸಮಾಲೋಚಿಸಿ ನಿಯಮಿಸಬಹುದಾದಂಥ ನಮೂನೆಯಲ್ಲಿ ವಾರ್ಷಿಕ ಲೆಕ್ಕಗಳ ವಿವರಣ ಪತ್ರವನ್ನು ಸಿದ್ಧಪಡಿಸತಕ್ಕದ್ದು.

(2) ಆಯೋಗದ ಲೆಕ್ಕ ಪತ್ರಗಳನ್ನು, ಕಂಟ್ರೋಲರ್ ಹಾಗೂ ಮಹಾಲೆಕ್ಕ ಪರಿಶೋಧಕರ (ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾಷರತ್ತುಗಳು) ಅಧಿನಿಯಮ, 1971ರ ಉಪಬಂಧಗಳನುಸಾರ ಭಾರತದ ಕಂಟ್ರೋಲರ್ ಹಾಗೂ ಮಹಾಲೆಕ್ಕಪರಿಶೋಧಕರಿಂದ (ಇಲ್ಲಿ ಇನ್ನು ಮುಂದೆ ಲೆಕ್ಕಪರಿಶೋಧಕ ಎಂದು ಉಲ್ಲೇಖಿಸಲಾಗಿದೆ) ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು ಮತ್ತು ಅಂಥ ಲೆಕ್ಕ ಪರಿಶೋಧನೆಯ ಸಂಬಂಧದಲ್ಲಿ ಅವರು ವಹಿಸಿದ ಯಾವುದೇ ವೆಚ್ಚವನ್ನು ರಾಜ್ಯ ಸರ್ಕಾರವು ಸಂದಾಯ ಮಾಡತಕ್ಕದ್ದು.

(3) ಆಯೋಗದ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ ಲೆಕ್ಕಪರಿಶೋಧಕರು ಆಯೋಗದ ಪುಸ್ತಕಗಳು, ಲೆಕ್ಕಪತ್ರಗಳು, ಸಂಬಂಧಪಟ್ಟ ಓಚರ್‌ಗಳು ಮತ್ತು ಇತರ ದಸ್ತಾವೇಜುಗಳನ್ನು ಮತ್ತು ಕಾಗದಪತ್ರಗಳನ್ನು ಹಾಜರುಪಡಿಸುವಂತೆ ಕೋರಲು ಅಧಿಕಾರ ಹೊಂದಿರತಕ್ಕದ್ದು.

(4) ಲೆಕ್ಕಪರಿಶೋಧಕರು ಪ್ರಮಾಣೀಕರಿಸಿದಂಥ ಆಯೋಗದ ಲೆಕ್ಕ ಪತ್ರಗಳನ್ನು ಮತ್ತು ಅದರ ಮೇಲಿನ ಲೆಕ್ಕ ಪರಿಶೋಧನಾ ವರದಿಯನ್ನು ಲೆಕ್ಕಪತ್ರ - ಲೆಕ್ಕ ಪರಿಶೋಧನಾ ವರದಿಯು ಸಂಬಂಧಪಡುವ ಹಣಕಾಸು ವರ್ಷವು ಮುಕ್ತಾಯವಾದ ಮೇಲೆ ಆರು ತಿಂಗಳೊಳಗಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಆಯೋಗವು, ಆಯೋಗದ ಸದರಿ ಲೆಕ್ಕ ಪತ್ರಗಳನ್ನು ಪ್ರಕಟಿಸುವಂತೆ ಮಾಡತಕ್ಕದ್ದು ಮತ್ತು ಅದರ ಪ್ರತಿಗಳು ಸೂಕ್ತ ಬೆಲೆಗೆ

ಮಾರಾಟಕ್ಕಾಗಿ ಲಭ್ಯವಿರುವಂತೆ ಮಾಡತಕ್ಕದ್ದು. ಆ ಲೆಕ್ಕ ಪರಿಶೋಧನಾ ವರದಿಯು ಆಯೋಗದ ಲೆಕ್ಕಪತ್ರಗಳಲ್ಲಿನ ಯಾವುವೇ ಅಸಾಂಗತ್ಯಗಳು ಅಥವಾ ಅಕ್ರಮಗಳ ಪೂರ್ಣ ವಿವರಗಳನ್ನು ಒಳಗೊಂಡಿರತಕ್ಕದ್ದು. ಅದೇ ಸಮಯದಲ್ಲಿ, ಆಯೋಗವು, ಸದರಿ ಲೆಕ್ಕ ಪತ್ರಗಳು ಯಾವ ವರ್ಷಕ್ಕೆ ಸಂಬಂಧಪಟ್ಟಿರುವುವೋ ಆ ವರ್ಷದ ಅವಧಿಯಲ್ಲಿ ಈ ಅಧಿನಿಯಮದ ಮೇರೆಗೆ ತಾನು ಕಾರ್ಯಗತಗೊಳಿಸಿದ ಪ್ರಕಾರ್ಯಗಳ ಸಂಬಂಧದಲ್ಲಿ ತನ್ನ ಕಾರ್ಯ ಚಟುವಟಿಕೆಗಳ ವಾರ್ಷಿಕ ವಿವರಣ ಪತ್ರವನ್ನು ಪ್ರಕಟಿಸತಕ್ಕದ್ದು ಮತ್ತು ಅದರ ಪ್ರತಿಗಳನ್ನು ಸೂಕ್ತ ಬೆಲೆಗೆ ಮಾರಾಟಕ್ಕೆ ಲಭ್ಯವಿರುವಂತೆ ಮಾಡತಕ್ಕದ್ದು.

(5) ರಾಜ್ಯ ಸರ್ಕಾರವು, (4)ನೇ ಉಪ ಪ್ಯಾರಾದ ಮೇರೆಗೆ ತನಗೆ ಕಳುಹಿಸಿಕೊಡಲಾಗಿರುವಂಥ ಆಯೋಗದ ಲೆಕ್ಕ ಪತ್ರಗಳನ್ನು ಮತ್ತು ಅದರೊಂದಿಗೆ ಲೆಕ್ಕ ಪರಿಶೋಧನಾ ವರದಿ ಹಾಗೂ ಆಯೋಗದ ಕಾರ್ಯಚಟುವಟಿಕೆಗಳ ವಾರ್ಷಿಕ ವಿವರಣ ಪತ್ರವನ್ನು ರಾಜ್ಯ ವಿಧಾನಮಂಡಲದ ಮುಂದೆ ಪ್ರತಿ ವರ್ಷವೂ ಮಂಡಿಸುವಂತೆ ಮಾಡತಕ್ಕದ್ದು.

**ಅನುಸೂಚಿ**

**ಭಾಗ II**

ಸಾಮಾನ್ಯ

**III. ಸಂಭಾವನೆ.-** (1) ಆಯೋಗದ ವೆಚ್ಚವೆಂದು, ಆಯೋಗದ ಅಧ್ಯಕ್ಷ ಮತ್ತು ಸದಸ್ಯರಿಗೆ ರಾಜ್ಯ ಸರ್ಕಾರವು ನಿರ್ಧರಿಸಬಹುದಾದಷ್ಟು ಸಂಭಾವನೆ, ಪ್ರಯಾಣ ಮತ್ತು ಇತರ ವೆಚ್ಚಗಳು ಮತ್ತು ಭತ್ಯಗಳನ್ನು ಸಂದಾಯ ಮಾಡತಕ್ಕದ್ದು, ಆದರೆ ಆಯೋಗದ ಅಧ್ಯಕ್ಷ ಮತ್ತು ಸದಸ್ಯರಿಗೆ ರಾಜ್ಯ ಸರ್ಕಾರವು ನಿಗದಿಪಡಿಸಿದ ಸಂಭಾವನೆಯು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ಸಂದಾಯ ಮಾಡುವ ಸಂಭಾವನೆಗಿಂತ ಕಡಿಮೆ ಇರತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು ಆಯೋಗದ ವೆಚ್ಚವಾಗಿ, ಆಯೋಗದ ಅಧ್ಯಕ್ಷ ಅಥವಾ ಸದಸ್ಯನ ಪದವನ್ನು ಧಾರಣ ಮಾಡಿರುವ ಯಾವೊಬ್ಬ ವ್ಯಕ್ತಿಗೆ ಅಥವಾ ಅವನ ಸಂಬಂಧದಲ್ಲಿ ಅಂಥ ನಿವೃತ್ತಿ ವೇತನ, ಭತ್ಯೆ ಅಥವಾ ಉಪದಾನವನ್ನು ಅಥವಾ ಅಂಥ ನಿವೃತ್ತಿ ವೇತನಕ್ಕೆ, ಭತ್ಯೆ ಅಥವಾ ಉಪದಾನ ನೀಡಿಕೆಗೆ ಸಂಬಂಧಿಸಿದಂತೆ ಅಂಥ ವಂತಿಗೆಗಳು ಅಥವಾ ಸಂದಾಯಗಳನ್ನು ಸಂದಾಯ ಮಾಡುವಂತೆ ಮಾಡಬಹುದು.

**IV. ಅಧಿಕೃತ ಮೊಹರು.-** ಆಯೋಗವು ತನ್ನ ಪ್ರಕಾರ್ಯಗಳ ಉದ್ದೇಶಗಳಿಗಾಗಿ ಅಗತ್ಯವಾದ ದಸ್ತಾವೇಜುಗಳನ್ನು ಅಧಿಪ್ರಮಾಣಿಸುವುದಕ್ಕಾಗಿ ಒಂದು ಅಧಿಕೃತ ಮೊಹರನ್ನು ಹೊಂದಿರತಕ್ಕದ್ದು.

**V. ಪ್ರಕಾರ್ಯಗಳ ನಿರ್ವಹಣೆ.-** ಈ ಅಧಿನಿಯಮದ ಅಥವಾ ಇತರ ಯಾವುದೇ ಅಧಿನಿಯಮಿತಿಯ ಮೂಲಕ ಅಥವಾ ಮೇರೆಗೆ ಆಯೋಗವು ಮಾಡಬೇಕೆಂದು ಅಧಿಕೃತಗೊಳಿಸಲಾದ ಅಥವಾ ಅಗತ್ಯಪಡಿಸಲಾದ ಯಾವುದೇ ಕಾರ್ಯವನ್ನು ಆಯೋಗದಿಂದ ಆ ಸಂಬಂಧದಲ್ಲಿ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕಾರ ಪಡೆದಿರುವ ಆಯೋಗದ ಸಿಬ್ಬಂದಿವರ್ಗದ ಯಾವೊಬ್ಬ ಸದಸ್ಯರು ಮಾಡಬಹುದು.

* * * *